ಸಂಪುಟ: 04 ಸಂಚಿಕೆ: 265 ಪುಟಗಳು: 08 ಭಾನುವಾರ 08 ಡಿಸೆಂಬರ್ 2024

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

**ಮುಂಜಾನೆ ಮಾತು**

ಧರ್ಮದ ಮಾರ್ಗ ನಮ್ಮ ಭಾವನೆಗೂ ಮೀರಿದ್ದು, ಆದರೆ ವಾತ್ಸಲ್ಯ, ತಿರಸ್ಕಾರ, ಆಸೆಯು ಭಾವನಾತ್ಮಕವಾದುದ್ದಾಗಿದೆ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ



# ನಮೋ ಹತ್ಯೆಗೆ ಸಂಚು



## ಮುಂಬೈ ಪೊಲೀಸರಿಗೆ ಬಂದ ಮೆಸೇಜ್‌ನಲ್ಲಿ ಭಯಾನಕ ಮಾಹಿತಿ..!

## ಮೋದಿಯವರ ಮೇಲೆ ಬಾಂಬ್ ದಾಳಿ ನಡೆಸಲು ಸಂಚು ಸಂದೇಶ ಬಂದ ತಕ್ಷಣ ಮುಂಬೈ ಪೊಲೀಸ್ ತಂಡ ಅಲರ್ಟ್

### ಮೋದಿಗೆ ಜೀವ ಬೆದರಿಕೆ

• ಉದಯವಾಹಿನಿ,ಮುಂಬೈ

ಪ್ರಧಾನಿ ಮೋದಿ ಅವರನ್ನು ಕೊಲ್ಲುವುದಾಗಿ ಮುಂಬೈ ಪೊಲೀಸರಿಗೆ ಶನಿವಾರ ಸಂದೇಶ ಬಂದಿದೆ. ಮುಂಬೈ ಟ್ರಾಫಿಕ್ ಪೊಲೀಸರ ಸಹಾಯವಾಣಿಯಲ್ಲಿ ಬಂದಿರುವ ಈ ಸಂದೇಶದಲ್ಲಿ ಪಾಕಿಸ್ತಾನಿ ಗುಪ್ತಚರ ಸಂಸ್ಥೆಯ (ಐಎಸ್‌ಐ) ಇಬ್ಬರು ಏಜೆಂಟರು ಪ್ರಧಾನಿ ಮೋದಿಯವರ ಮೇಲೆ ಬಾಂಬ್ ದಾಳಿ ನಡೆಸಲು ಸಂಚು ರೂಪಿಸುತ್ತಿದ್ದಾರೆ ಎಂದು ಬರೆಯಲಾಗಿದೆ.

ಸಂದೇಶ ಬಂದ ತಕ್ಷಣ ಮುಂಬೈ ಪೊಲೀಸ್ ತಂಡ ಅಲರ್ಟ್ ಆಗಿದ್ದು, ಬೆದರಿಕೆ ಸಂದೇಶದ ಬಂದ ಸಂಖ್ಯೆಯನ್ನು ತನಿಖೆ ಮಾಡಿದ್ದೇವೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ಸಂಖ್ಯೆ ಅಜೀರ್ ರಾಜಸ್ಥಾನಕ್ಕೆ ಸೇರಿದ್ದು ಎಂದು ತಿಳಿದು ಬಂದಿದೆ. ರಾಜಸ್ಥಾನದಿಂದ ಬಂದ ಮೆಸೇಜ್ ಎಂದು ತಿಳಿದಾಕ್ಷಣವೇ ಅನುಮಾನಾಸ್ಪದ ವ್ಯಕ್ತಿಯನ್ನು ಬಂಧಿಸಲು ನಮ್ಮ ತಂಡವೊಂದು ರಾಜಸ್ಥಾನಕ್ಕೆ ತೆರಳಿದೆ. ನಮ್ಮ ಸಂಚಾರ ನಿಯಂತ್ರಣ ತಂಡದ ಸಹಾಯವಾಣಿಗೆ ಮುಂಜಾನೆಯೇ ಈ ಬೆದರಿಕೆ ಸಂದೇಶ ಬಂದಿದೆ.

ಈ ಸಂದೇಶದಲ್ಲಿ ಇಬ್ಬರು ಐಎಸ್‌ಐ ಏಜೆಂಟ್‌ಗಳಿಂದ ಪ್ರಧಾನಿ ನರೇಂದ್ರ ಮೋದಿ ಹತ್ಯೆಗೆ ಸಂಚು ರೂಪಿಸಿರುವ ಬಗ್ಗೆ ತಿಳಿಸಲಾಗಿದೆ.

ಈ ವಾಟ್ಸ್ ಆ್ಯಪ್ ಸಂದೇ ಶದ ಪ್ರಕಾರ ಇಬ್ಬರೂ ಏಜೆಂಟ್‌ಗಳು ಪ್ರಧಾನಿ ಮೋದಿ ಅವರನ್ನು ಬಾಂಬ್ ನಿಂದ ಸ್ಫೋಟಿಸಲು ಯೋಜಿಸುತ್ತಿದ್ದಾರೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಬೆದರಿಕೆ ಹಾಕುವ ವ್ಯಕ್ತಿ ಮಾನಸಿಕವಾಗಿ ತೊಂದರೆ ಗೀಡಾಗಿರಬಹುದು ಅಥವಾ ಮದ್ಯದ ಅಮಲಿನಲ್ಲಿ ಇರಬಹುದು ಎಂದು ತನಿಖಾಧಿಕಾರಿಗಳು ಶಂಕಿಸಿದ್ದಾರೆ ಎಂದು ಅಧಿಕಾರಿ ಹೇಳಿದರು. ಈ ವಿಚಾರದಲ್ಲಿ ಇನ್ನೂ ತನಿಖೆ ನಡೆಯುತ್ತಿದೆ. ಆದರೂ ಸಂಬಂಧಿತ ಭಾರತೀಯ ನ್ಯಾಯಾಂಗ ಸಂಹಿತೆಯ ಸೆಕ್ಷನ್‌ಗಳ ಅಡಿಯಲ್ಲಿ ಬೆದರಿಕೆ ಸಂದೇಶ ಕಳುಹಿಸಿರುವ ವ್ಯಕ್ತಿಯ ವಿರುದ್ಧ ಎಫ್ ಐಆರ್ ದಾಖಲಿಸಲಾಗಿದೆ. ಕಳೆದ 10 ದಿನಗಳಲ್ಲಿ ಮುಂಬೈ ಸಂಚಾರ ಪೊಲೀಸರಿಗೆ ನಟ ಸಲ್ಮಾನ್ ಖಾನ್ ಅವರನ್ನು ಕೊಲ್ಲುವುದಾಗಿ 2 ಸಂದೇಶಗಳು ಬಂದಿದ್ದವು. ಇತ್ತೀಚಿಗೆ ಕಳುಹಿಸಲಾದ ಸಂದೇಶವು 'ಸಲ್ಮಾನ್ ಖಾನ್ ಜೀವಂತವಾಗಿರಲು ಬಯಸಿದರೆ, ಅವರು ದೇವಸ್ಥಾನಕ್ಕೆ (ರಾಜಸ್ಥಾನದ ಬಿಷ್ಣೋಯಿ ಸಮುದಾಯದ ದೇವಸ್ಥಾನ) ಹೋಗಿ ಸಮುದಾಯದ ಕ್ಷಮೆಯಾಚಿಸಬೇಕು ಅಥವಾ 5 ಕೋಟಿ ರೂಪಾಯಿ ಪಾವತಿಸಬೇಕು ಎಂದಿತ್ತು.

1 ಮೋದಿ ಕೊಲ್ಲಲು ಪಾಕಿಸ್ತಾನದ ISI ಸಂಚು;

2 ಮುಂಬೈ ಪೊಲೀಸರಿಗೆ ಬಂತು ಬೆದರಿಕೆ ಸಂದೇಶ

3 ಸಂದೇಶ ಬಂದ ತಕ್ಷಣ ಮುಂಬೈ ಪೊಲೀಸ್ ತಂಡ ಅಲರ್ಟ್ ಆಗಿದ್ದು ,

### ಪಾಕ್ ಐಎಸ್‌ಐ ಸಂಚು

ಭಾರತದ ಪ್ರಧಾನಿ ಮೋದಿ ಅವರನ್ನು ಕೊಲ್ಲಲು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಸಂಚು ರೂಪಿಸಿದ್ದು, ಈ ಸಂಬಂಧ ಮುಂಬೈ ಪೊಲೀಸರಿಗೆ ಬೆದರಿಕೆ ಸಂದೇಶ ಬಂದಿದೆ ಎಂದು ಹೇಳಲಾಗಿದೆ. ಮುಂಬೈ ಪೊಲೀಸರಿಗೆ ಶನಿವಾರ ಪ್ರಧಾನಿ ಮೋದಿ ಅವರನ್ನು ಕೊಲ್ಲುವುದಾಗಿ ಬೆದರಿಕೆ ಸಂದೇಶ ಬಂದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಸಂದೇಶ ಕಳುಹಿಸಲಾದ ಮೊಬೈಲ್ ಸಂಖ್ಯೆಯ ಲೊಕೇಷನ್ ರಾಜಸ್ಥಾನದ ಅಜ್ಮೀರ್ ನಲ್ಲಿದೆ ಎಂದು ಪತ್ತೆ ಮಾಡಲಾಗಿದೆ. ಅಂತೆಯೇ ಬೆದರಿಕೆ ಸಂದೇಶ ರವಾನಿಸಿರುವ ಶಂಕಿತನನ್ನು ಹಿಡಿಯಲು ತಕ್ಷಣ ಪೊಲೀಸ್ ತಂಡವನ್ನು ಅಲ್ಲಿಗೆ ಕಳುಹಿಸಲಾಗಿದೆ.

### ವಾಟ್ಸಾಪ್ ಸಂದೇಶದಲ್ಲಿ ಏನಿದೆ..?

ಮುಂಜಾನೆ ಟ್ರಾಫಿಕ್ ಪೊಲೀಸರ ಸಹಾಯವಾಣಿಗೆ ಬಂದ ವಾಟ್ಸಾಪ್ ಸಂದೇಶದಲ್ಲಿ ಇಬ್ಬರು ಐಎಸ್‌ಐ ಏಜೆಂಟ್ ಗಳು ಮೋದಿಯನ್ನು ಗುರಿಯಾಗಿಸಿಕೊಂಡು ಬಾಂಬ್ ಸ್ಫೋಟ ನಡೆಸುವ ಸಂಚನ್ನು ಉಲ್ಲೇಖಿಸಲಾಗಿದೆ ಎಂದು ಅವರು ಹೇಳಿದರು. ಸಂದೇಶ ಕಳುಹಿಸಿರುವವರು ಮಾನಸಿಕ ಅಸ್ವಸ್ಥ ವ್ಯಕ್ತಿ ಅಥವಾ ಮದ್ಯದ ಅಮಲಿನಲ್ಲಿದ್ದವರು ಎಂದು ತನಿಖಾಧಿಕಾರಿಗಳು ಶಂಕಿಸಿದ್ದಾರೆ, ಆದರೆ ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿ ತಿಳಿಸಿದರು. ಭಾರತೀಯ ನ್ಯಾಯ ಸಂಹಿತಾ ವಿಭಾಗಗಳ ಅಡಿಯಲ್ಲಿ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಲಾಗಿದೆ. ಮುಂಬೈ ಟ್ರಾಫಿಕ್ ಪೊಲೀಸರ ಸಹಾಯವಾಣಿಗೆ ಈ ಹಿಂದೆ ಹಲವು ಬಾರಿ ಹುಸಿ ಬೆದರಿಕೆ ಸಂದೇಶಗಳು ಬಂದಿವೆ.




### ಸಂಪುಟ ಅನುಮೋದನೆ

ದೇಶದಾದ್ಯಂತ 85 ನೂತನ ಕೇಂದ್ರೀಯ ವಿದ್ಯಾಲಯಗಳನ್ನು ತೆರೆಯಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಈ ಮೂಲಕ ಸಮಾಜದ ಎಲ್ಲಾ ವರ್ಗದ ಮಕ್ಕಳಿಗೂ ಶಾಲಾ ಶಿಕ್ಷಣ ನೀಡಲು ತಮ್ಮ ಸರ್ಕಾರ ಮತ್ತೊಂದು ಮಹತ್ವದ ನಿರ್ಧಾರ ತೆಗೆದುಕೊಂಡಿದೆ. 'ದೇಶದಲ್ಲಿನ ಎಲ್ಲಾ ವರ್ಗದ ಮಕ್ಕಳು ಶಾಲಾ ಶಿಕ್ಷಣ ಪಡೆಯಲು ನಮ್ಮ ಸರ್ಕಾರವು ಮತ್ತೊಂದು ದೊಡ್ಡ ನಿರ್ಧಾರವನ್ನು ತೆಗೆದುಕೊಂಡಿದೆ. ಇದರಡಿಯಲ್ಲಿ, ದೇಶದಾದ್ಯಂತ 85 ಹೊಸ ಕೇಂದ್ರೀಯ ವಿದ್ಯಾಲಯಗಳನ್ನು ತೆರೆಯಲಾಗುತ್ತದೆ. ಈ ಕ್ರಮದಿಂದಾಗಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳಿಗೆ ಪ್ರಯೋಜನವಾಗುತ್ತದೆ.

## ನಮ್ಮ ಧರ್ಮ ಸುರಕ್ಷಿತವಾಗಿದ್ದರೆ ನಾವು ಸುರಕ್ಷಿತವಾಗಿರುತ್ತೇವೆ

• ಉದಯವಾಹಿನಿ, ಲಕ್ನೋ

ಜನರು ಯಾವಾಗಲೂ ದೇಶವನ್ನ ಎಲ್ಲಕ್ಕಿಂತ ಮೇಲಿರಿಸಬೇಕು ಮತ್ತು ಅವರ ಕೆಲಸವು 'ಸನಾತನ ಧರ್ಮ'ದ ಮೌಲ್ಯಗಳಿಗೆ ಅನುಗುಣವಾಗಿರಬೇಕು ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ, ಯೋಗಿ ಆದಿತ್ಯನಾಥ್ ಶನಿವಾರ ಹೇಳಿದ್ದಾರೆ. ಪ್ರತಿಯೊಂದು ಕೆಲಸವನ್ನ ದೇಶಕ್ಕಾಗಿ ಮಾಡಬೇಕು... ದೇಶ ಸುರಕ್ಷಿತವಾಗಿದ್ದರೆ ಧರ್ಮ ಸುರಕ್ಷಿತವಾಗಿರುತ್ತದೆ... ಧರ್ಮ ಸುರಕ್ಷಿತವಾಗಿದ್ದರೆ ನಾವು ಸುರಕ್ಷಿತವಾಗಿರುತ್ತೇವೆ ಎಂದು ವಾರಣಾಸಿಯಲ್ಲಿ ವಿಹಾಂಗಮ್ ಯೋಗ ಸಂತ ಸಮಾಜದ 100 ನೇ ವರ್ಷಾಚರಣೆಯ ಸಂದರ್ಭದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಆದಿತ್ಯನಾಥ್ ಹೇಳಿದರು.

ನಿಜವಾದ ಸಂತರು ಕಡಿಮೆ ಮಾತನಾಡುತ್ತಾರೆ ಮತ್ತು ಯಾವಾಗಲೂ ಜನರ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತಾರೆ ಎಂಬ ಸಮಾಜವಾದಿ ಪಕ್ಷದ (ಎಸ್ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರ ಇತ್ತೀಚಿನ ಹೇಳಿಕೆಯನ್ನು ಉಲ್ಲೇಖಿಸಿದ ಸಿಎಂ. ನಿಜವಾದ ಸಂತನು ದೇಶ ಮತ್ತು ಸಮಾಜದಲ್ಲಿ ಚಾಲ್ತಿಯಲ್ಲಿರುವ ಪರಿಸ್ಥಿತಿಯ ಬಗ್ಗೆ ಅಸಡ್ಡೆಯಿಂದಿರಲು ಸಾಧ್ಯವಿಲ್ಲ ಎಂದು ಹೇಳಿದರು. ಸಮಾಜ ಮತ್ತು ದೇಶದಲ್ಲಿ ಏನಾದರೂ ತಪ್ಪು ನಡೆಯುತ್ತಿರುವಾಗ ನಿಜವಾದ ಸಂತ ಮೂಕ ಪ್ರೇಕ್ಷಕನಾಗಿ ಉಳಿಯಲು ಸಾಧ್ಯವಿಲ್ಲ ಎಂದು ಅವರು ಹೇಳಿದರು.

## 'ಗೃಹಲಕ್ಷ್ಮೀ' ಯೋಜನೆ ಮಹಿಳೆಯರಿಗೆ ಜೀವನಾಧಾರ

• ಉದಯವಾಹಿನಿ, ಬೆಳಗಾವಿ

ಸರ್ಕಾರದ ಮಹತ್ವಾಕಾಂಕ್ಷಿ ಗೃಹಲಕ್ಷ್ಮೀ ಯೋಜನೆ, ಮಹಿಳೆಯರ ಜೀವನಕ್ಕೆ ಆಧಾರ ಆಗಬೇಕು ಎಂಬುದೇ ನನ್ನ ಉದ್ದೇಶ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು. ಇಂದು ಬೆಳಗಾವಿ ಜಿಲ್ಲೆಯ ಹಿರೇಬಾಗೇವಾಡಿ ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ವತಿಯಿಂದ ಶನಿವಾರ ನಡೆದ ಮಹಿಳಾ ವಿಚಾರ ಗೋಷ್ಠಿ ಹಾಗೂ ಸಾಮಾನ್ಯ ಸಹಾಯ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಸಚಿವರು, ಗೃಹಲಕ್ಷ್ಮೀ ಯೋಜನೆಯಿಂದ ಬರುವ ಹಣವನ್ನು ಸೇರಿಸಿ ಸ್ವಯಂ ಉದ್ಯೋಗ ಶುರುಮಾಡಿ ಆರ್ಥಿಕವಾಗಿ ಸಬಲರಾಗಬೇಕು ಎಂಬುದೇ ನನ್ನ ಬಯಕೆ ಎಂದರು. ಜೀವನ ಅಭಿವೃದ್ಧಿ ಆಗಬೇಕು, ಮಕ್ಕಳಿಗೆ ಶಿಕ್ಷಣ ಸಿಗಬೇಕು, ಎಲ್ಲಾರಿಗೂ ಆರೋಗ್ಯ ಸಿಗಬೇಕು ಎಂಬುದೇ ಗೃಹಲಕ್ಷ್ಮೀ ಯೋಜನೆಯ ಮೂಲ ಉದ್ದೇಶ ಮಹಿಳೆಯರು ತಮ್ಮ ಆರೋಗ್ಯವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು, ಆರ್ಥಿಕ ಸಬಲೀಕರಣದ ಜೊತೆಗೆ ಸಮಾಜದ ಸ್ವಾಸ್ಥ್ಯ ಕಾಪಾಡಬೇಕು, ಎಲ್ಲಾರೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳಬೇಕು, ಆತ್ಮವಿಶ್ವಾಸ ವೃದ್ಧಿಸಿಕೊಳ್ಳಬೇಕು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಕರೆ ನೀಡಿದರು.

## ಮುಂದುವರಿದ ಹಂಚಿಕೆ' ಚರ್ಚೆ

• ಉದಯವಾಹಿನಿ, ಬೆಂಗಳೂರು

ಕಾಂಗ್ರೆಸ್‌ನಲ್ಲಿ ಸಂಚಲನವುಂಟು ಮಾಡಿದ ಅಧಿಕಾರ ಹಂಚಿಕೆ ಸೂತ್ರದ ಹೇಳಿಕೆ ಕುರಿತು ಮತ್ತಷ್ಟು ನಾಯಕರು ಪ್ರತಿಕ್ರಿಯೆ ನೀಡಿದ್ದು, ಚರ್ಚೆ ವಿಸ್ತರಣೆಗೊಂಡಿದೆ. ಗೃಹ ಸಚಿವ ಜಿ.ಪರಮೇಶ್ವರ ಅಸಮಾಧಾನ ಹೊರಹಾಕಿದ ಬೆನ್ನಲ್ಲೇ, ಕೆ.ಎಚ್.ಮುನಿಯಪ್ಪ ಕೂಡ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಅದಕ್ಕೀಗ ಪಕ್ಷದ ಹಿರಿಯ ಮುಖಂಡ ಬಿ.ಕೆ.ಹರಿಪ್ರಸಾದ್ ಕೂಡ ದನಿಗೂಡಿಸಿದ್ದಾರೆ. ಅಧಿಕಾರ ಹಂಚಿಕೆ ಸೂತ್ರದ ಮಾತುಕತೆ ಆಗಿದೆ ಎಂಬ ಮುನಿಯಪ್ಪ ಹೇಳಿಕೆ ವಿಚಾರಕ್ಕೆ ವ್ಯಂಗ್ಯ ಭರಿತವಾಗಿ ಪ್ರತಿಕ್ರಿಯಿಸಿದ ಬಿ.ಕೆ.ಹರಿಪ್ರಸಾದ್, ಮುನಿಯಪ್ಪನವರು ಮನೋರಂಜನೆ ತೆಗೆದುಕೊಳ್ಳಲಿ ದೆಹಲಿಯನ್ನು ನನಗೆ ಅಷ್ಟು ಗೊತ್ತಿಲ್ಲ. ಮುನಿಯಪ್ಪನವರು ದೆಹಲಿ ನಾಯಕರು. ಅವರಿಗೆ ಅಲ್ಲಿ ನಡೆಯೋದೆಲ್ಲ ಗೊತ್ತಿರುತ್ತೆ. ಅವರು ದೊಡ್ಡವರು, ಅವರಿಗೆ ಗೊತ್ತಿರುವಷ್ಟು ನಮಗೆ ಗೊತ್ತಿಲ್ಲ ಎಂದರು.


## ನಿಖಿಲ್ ಕುಮಾರಸ್ವಾಮಿಗೆ ಜೆಡಿಎಸ್ ರಾಜ್ಯಾಧ್ಯಕ್ಷ ಸ್ಥಾನ

• ಉದಯವಾಹಿನಿ, ನವದೆಹಲಿ

ಜೆಡಿಎಸ್ ರಾಜ್ಯಾಧ್ಯಕ್ಷರಾಗಿ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ ಅವರು ಪಕ್ಷವನ್ನ ಮುನ್ನಡೆಸುತ್ತಿದ್ದಾರೆ. ಆದರೆ, ಮುಂದಿನ ದಿನಗಳಲ್ಲಿ ಜೆಡಿಎಸ್ ಪಕ್ಷದ ಸಾರಥಿಯಾಗಿ ನಿಖಿಲ್ ಕುಮಾರಸ್ವಾಮಿ ಮುನ್ನಡೆಯುವ ಕುರಿತು ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠರಾದ ಹೆಚ್ ಡಿ ದೇವೇಗೌಡ ಅವರು ಸುಳಿವು ನೀಡಿದ್ದಾರೆ. ಕಳೆದ ಮೂರು ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲನುಭವಿಸಿರುವ ನಿಖಿಲ್ ಕುಮಾರಸ್ವಾಮಿಗೆ ಪಕ್ಷದ ಬಲುದೊಡ್ಡ ಜವಾಬ್ದಾರಿ ವಹಿಸಲು ಜೆಡಿಎಸ್ ವರಿಷ್ಠ ಹೆಚ್‌ಡಿ ದೇವೇಗೌಡರು ಮುಂದಾಗಿದ್ದಾರೆ. ಈ ಕುರಿತು ಮಾತನಾಡಿದ ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡರು, ನಿಖಿಲ್ ಕುಮಾರಸ್ವಾಮಿ ಜೆಡಿಎಸ್ ಪಕ್ಷವನ್ನು ಮುನ್ನಡೆಸಲಿದ್ದಾರೆ ಎಂದಿದ್ದಾರೆ.

ಈ ಮೂಲಕ ನಿಖಿಲ್ ಜೆಡಿಎಸ್ ರಾಜ್ಯಾಧ್ಯಕ್ಷರಾಗುವುದು ಬಹುತೇಕ ಖಚಿತ ಎಂದು ಹೇಳಲಾಗಿದೆ. ನಿಖಿಲ್ ಕುಮಾರಸ್ವಾಮಿ ಯುವಕನಿದ್ದಾನೆ. ರಾಜ್ಯದ ಜವಾಬ್ದಾರಿ, ಪಕ್ಷವನ್ನು ಬೆಳೆಸುವುದಕ್ಕೆ ಅನುಭವ ಇದೆ, ಕುಟುಂಬದ ಹಿನ್ನೆಲೆ ಇದೆ, ಆತನಿಗೆ ಹೆಚ್ಚು ಹೊಣೆಗಾರಿಕೆ ಕೊಟ್ಟು ಪಕ್ಷವನ್ನು ಉಳಿಸಿ ಬೆಳೆಸುತ್ತೇವೆ. ನಾನೇ ಹೇಳುತ್ತಿದ್ದೇನೆ, ನಿಖಿಲ್ ಮುಂದೆ ಪಕ್ಷದ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ. ಶಾಸಕರಾಗುವುದು ಒಂದೇ ಪ್ರಶ್ನೆಯಲ್ಲ ಎಂದು ಹೆಚ್ ಡಿ ದೇವೇಗೌಡ್ರು ಹೇಳಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾರನ್ನು ನಿಖಿಲ್ ಕುಮಾರಸ್ವಾಮಿ ಭೇಟಿ ಮಾಡಲಿದ್ದಾರಂತೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡರು, ನಾವು ಈಗಾಗಲೇ ಕಾಂಗ್ರೆಸ್‌ನಿಂದ ದೂರ ಸರಿದಿದ್ದೇವೆ. ಅಮಿತ್ ಶಾ, ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಜತೆಗೇ ಮಾತುಕತೆ ನಡೆಸಲಿದ್ದೇವೆ. ಕೊನೆಯವರೆಗೂ ಎನ್‌ಡಿಎ ಜತೆಗೇ ಇರಲಿದ್ದೇವೆ ಎಂದು ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡ ಅವರು ಹೇಳಿದ್ದಾರೆ. ಇನ್ನೂ ಹಾಸನ ಕಾಂಗ್ರೆಸ್ ಸಮಾವೇಶದ ಕುರಿತು ಮಾತನಾಡಿ, ಹಾಸನ ಕಾಂಗ್ರೆಸ್ ಸಮಾವೇಶದಲ್ಲಿ ಅವರು (ಕಾಂಗ್ರೆಸ್ ನಾಯಕರು) ಏನೇನು ಮಾತನಾಡಿದ್ದರು? ಎಷ್ಟು ಜನ ಸೇರಿದ್ದರು? ಯಾವ್ಯಾವ ಜಿಲ್ಲೆಯಿಂದ ಜನ ಬಂದಿದ್ದರು ಎಂಬ ಎಲ್ಲಾ ಮಾಹಿತಿ ಸಂಗ್ರಹಿಸಿದ್ದೇನೆ. ಅದಕ್ಕೆಲ್ಲ ಕೇಂದ್ರ ಸಚಿವ ಹೆಚ್ ಡಿ ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ, ನಮ್ಮ ಪಕ್ಷ ಉತ್ತರ ಕೊಡಲಿದೆ. ನನಗೆ ವಯಸ್ಸಾಯಿತು ಎಂದು ದೇವೇಗೌಡ ಹೇಳಿದ್ದಾರೆ.



## ನೋಡ್ರಿ.. ನಾ ಅಂಜುವ ಮಗಾ ಅಲ್ಲ, ಪಕ್ಷದ ಬಗ್ಗೆ ನೋ ಕಮೆಂಟ್ಸ್

• ಉದಯವಾಹಿನಿ, ಬಾಗಲಕೋಟೆ

ರಾಜ್ಯ ಬಿಜೆಪಿ ಉಸ್ತುವಾರಿ ರಾಧಾಮೋಹನ್ ದಾಸ್ ಅವರು ಕೋರ್ ಕಮಿಟಿ ಸಭೆ ಬಳಿಕ ವಿಜಯೇಂದ್ರ ಪರ ಮಾತನಾಡಿದ್ದು, ಇದರ ನಡುವೆಯೇ ರೆಬಲ್ ಶಾಸಕ ಬಸನಗೌಡ ಪಾಟೀಲ್ ಅವರು ಪಕ್ಷದ ಬಗ್ಗೆ ನಾನು ಏನೂ ಮಾತನಾಡಲ್ಲ ಎಂದು ಹೇಳಿದರು. ನಾನು ಅಂಜುವ ಮಗಾ ಅಲ್ಲ... ಪಕ್ಷದ ಬಗ್ಗೆ ಏನಾದರೂ ನೀವು ಕೇಳಿದ್ರು ನೋ ಕಮೆಂಟ್ಸ್ ಎಂದು ಯತ್ನಾಳ್ ಪ್ರತಿಕ್ರಿಯೆ ನೀಡಿದ್ದು, ನಾನು ಸೈಲೆಂಟ್ ಆಗಿದ್ದೀನಿ... ಆದ್ರೆ ರಮೇಶ್ ಜಾರಕಿಹೊಳಿ ಅವರಿಗೆ ಅನ್ಯಾಯವಾಗಿದೆ. ಹೀಗಾಗಿ ಅವರು ವೈಲೆಂಟ್ ಆಗ್ತಾರೆ ಅಂತಾ ಹೇಳಿದ್ರ. ಮುಂದೆ ಏನಾಗುತ್ತೋ ನೋಡೋಣ ಎಂದರು. ಶಿಸ್ತು ಸಮಿತಿ ಮುಂದೆ ಹಾಜರಾದ ಬಳಿಕ ತಾನು ಸಪ್ಪಗಾಗಿಲ್ಲ, ಭವಿಷ್ಯದಲ್ಲಿ ನನಗೆ ಹಣ ಮಾಡಿ ಮುಖ್ಯಮಂತ್ರಿ ಆಗಬೇಕು ಎಂಬ ಆಸೆಯೂ ಇಲ್ಲ. ನಾನು ಸ್ಥಿತಪ್ರಜ್ಞ ಎಂದು ಯತ್ನಾಳ್ ತಿಳಿಸಿದರು. ಯತ್ನಾಳ್ ಅವರಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ. ಅವರ ಉತ್ತರ ಬಂದ ಮೇಲೆ ಮುಂದಿನ ಕ್ರಮ ಏನೆಂದು ತೀರ್ಮಾನಿಸಲಾಗುವುದು ಎಂದು ರಾಧಾಮೋಹನ್ ದಾಸ್ ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ. ಬಂಡಾಯವೆಂಬ ಚೆಂಡು ಈಗ ಹೈಕಮಾಂಡ್ ಅಂಗಳದಲ್ಲಿದ್ದು, ಸದ್ಯದಲ್ಲೇ ಎಲ್ಲಾದಕ್ಕೂ ಉತ್ತರ ಸಿಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಪರೋಕ್ಷವಾಗಿ ರೆಬಲ್ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಮಾತಿನಲ್ಲೇ ಡಿಚ್ಚಿ ಕೊಟ್ಟರು. ಪಕ್ಷದಲ್ಲಿ ಬಣದ ವಿಚಾರಕ್ಕೆ ಹೈಕಮಾಂಡ್ ಗಮನಿಸಿದ್ದು ಮುಂದೆ ಏನು ನಿರ್ಧಾರ ತೆಗೆದುಕೊಳ್ಳುತ್ತದೋ ಎಂದು ಕಾದು ನೋಡೋಣ. ಇನ್ನು ಹಾದಿಬೀದಿಯಲ್ಲಿ ಮಾತನಾಡುವವರ ಮೇಲೆ ಕ್ರಮ ಆಗಲೇಬೇಕು ಎಂದು ಯತ್ನಾಳ್ ಟೀಂ ವಿರುದ್ಧ ವಿಜಯೇಂದ್ರ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ಈಗಾಗಲೇ ಯತ್ನಾಳ್ ಅವರ ಪ್ರಕರಣವನ್ನು, ಪಕ್ಷದ ನಾಯಕತ್ವದ ಬಗ್ಗೆ ಅವರ ಹೇಳಿಕೆ ವಿಚಾರ ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ಯತ್ನಾಳ್ ಅವರಿಗೆ ಶೋಕಾಸ್ ನೋಟಿಸ್ ಸಹ ನೀಡಿದ್ದೇವೆ. ಅವರು ಅದಕ್ಕೆ ಯಾವ ರೀತಿ ಸೂಕ್ತ ಉತ್ತರವನ್ನು ನೀಡುತ್ತಾರೆಂದು ಕಾದಿದ್ದೇವೆ. ಅವರ ಉತ್ತರ ನೋಡಿ ಮುಂದಿನ ಕ್ರಮಕ್ಕೆಗೊಳ್ಳುತ್ತೇವೆ ಎಂದು ರಾಧಾಮೋಹನ್ ದಾಸ್ ಹೇಳಿದ್ದಾರೆ. ಅಲ್ಲದೇ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಬದಲಾಯಿಸುವ ಪ್ರಶ್ನೆಯೇ ಇಲ್ಲ ಎಂದು ನೇರವಾಗಿ ವಿಜಯೇಂದ್ರ ಬೆಂಬಲಕ್ಕೆ ಹೈಕಮಾಂಡ್ ಇದೆ ಎಂಬ ಮಾತನ್ನು ದಾಸ್ ಸ್ಪಷ್ಟಪಡಿಸಿದ್ದಾರೆ.

> ಇತ್ತೀಚೆಗೆ ರಾಜ್ಯದಲ್ಲಿ ನಡೆದ ಉಪಚುನಾವಣೆಯ ಸೋಲಿನ ಹಿನ್ನೆಲೆಯಲ್ಲಿ ಬಳ್ಳಾರಿಯ ಸಂಡೂರು ಮತ್ತು ಹಾವೇರಿ ಶಿಗ್ಗಾಂವಿಯಲ್ಲಿ ಬಿಜೆಪಿಗೆ ಆಗಿರುವ ಹಿನ್ನಡೆ ಬಗ್ಗೆ ತಿಳಿಯಲು ಮಾಜಿ ಸಿಎಂ ಸದಾನಂದಗೌಡ, ಮಾಜಿ ಸಚಿವ ಎನ್.ಮಹೇಶ್ ಅವರ ನೇತೃತ್ವದಲ್ಲಿ ಸತ್ಯಶೋಧನಾ ತಂಡವನ್ನು ರಚಿಸಲು ತೀರ್ಮಾನಿಸಲಾಗಿದೆ.
>
> -ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ



# ಬಾಣಂತಿಯರ ಸಾವಿಗೆ ಕಾಂಗ್ರೆಸ್ ನಾಯಕರ ಕಿಕ್ ಬ್ಯಾಕ್ ಕಾರಣ: ಪಿ ರಾಜೀವ್

● ಕಳೆದ 8 ತಿಂಗಳುಗಳಿಂದ ಅಲ್ಲಲ್ಲಿ ನಿರಂತರವಾಗಿ ಬಾಣಂತಿಯರ ಸಾವಿನ ಪ್ರಕರಣಗಳು ದಾಖಲು ● ಶವದ ಮೇಲೆ ಜನಕಲ್ಯಾಣ ಸಮಾವೇಶ

• ಉದಯವಾಹಿನಿ, ಬೆಂಗಳೂರು

ಈ ಸರಕಾರ ನಿಷೇಧಿತ ಕಂಪೆನಿಗಳಿಂದ ಕಿಕ್ ಬ್ಯಾಕ್ ಪಡೆದು ಬ್ಲ್ಯಾಕ್ ಲಿಸ್ಟ್‌ನಲ್ಲಿರುವ ಕಂಪೆನಿಗಳಿಗೆ ಟೆಂಡರ್ ಕೊಟ್ಟಿದ್ದು, ಇದರಿಂದ ದೊಡ್ಡ ಪ್ರಮಾಣದಲ್ಲಿ ಬಾಣಂತಿಯರ ಸಾವು ಸಂಭವಿಸುತ್ತಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್ ಅವರು ತಿಳಿಸಿದರು. ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಕಳೆದ 8 ತಿಂಗಳುಗಳಿಂದ ಅಲ್ಲಲ್ಲಿ ನಿರಂತರವಾಗಿ ಬಾಣಂತಿಯರ ಸಾವಿನ ಪ್ರಕರಣಗಳು ದಾಖಲಾಗುತ್ತಿವೆ. ಈ ರಾಜ್ಯ ಸರಕಾರವು ಬಾಣಂತಿಯರ ಶವದ ಮೇಲೆ ಜನಕಲ್ಯಾಣ ಸಮಾವೇಶ ಮಾಡುತ್ತಿದೆ ಎಂದು ಟೀಕಿಸಿದರು.

ದೋಷಪೂರಿತ ಐವಿ ಫ್ಲೂಯಿಡ್‌ನಿಂದ ಬಾಣಂತಿಯರ ಸಾವಾಗಿದೆ; ರಾಜ್ಯ ಸರಕಾರ ಕಿಕ್ ಬ್ಯಾಕ್ ಪಡೆದುದೇ ಇಂಥ ಕಳಪೆ ಗುಣಮಟ್ಟದ ಐವಿ ಫ್ಲೂಯಿಡ್ ಪೂರೈಕೆಗೆ ನೇರ ಕಾರಣ ಎಂದು ಆರೋಪಿಸಿದರು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಹೋರಾಟ ಮಾಡಲು ರಾಜ್ಯಾಧ್ಯಕ್ಷರು ಕರೆ ಕೊಟ್ಟಿದ್ದರ ಫಲವಾಗಿ, ಬಳ್ಳಾರಿಯಲ್ಲಿ ಮಾಜಿ ಸಚಿವ ಬಿ. ಶ್ರೀರಾಮುಲು, ವಿಧಾನಪರಿಷತ್ ಸದಸ್ಯ ಸತೀಶ್, ಮಾಜಿ ಶಾಸಕ ಸೋಮಶೇಖರ ರೆಡ್ಡಿ ಸೇರಿ ಬಿಜೆಪಿಯ ಎಲ್ಲಾ ಮುಖಂಡರು ಬೃಹತ್ ಪ್ರಮಾಣದ ಹೋರಾಟ ನಡೆಸುತ್ತಿದ್ದಾರೆ ಎಂದು ವಿವರಿಸಿದರು.

ಮಾನ್ಯ ಸಚಿವರ ಬಳ್ಳಾರಿ ಭೇಟಿಯು ಮೊಸಳಕಣ್ಣೀರಿನ ಭೇಟಿ ಎಂದು ಟೀಕಿಸಿದ ಅವರು, ಹುದ್ದೆಯಲ್ಲಿ ಮುಂದುವರೆಯುವ ನೈತಿಕತೆ ಇಲ್ಲದ ಆರೋಗ್ಯ ಸಚಿವರು ತಕ್ಷಣ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು. ಬಳ್ಳಾರಿಯ ಬಿಜೆಪಿ ಪ್ರತಿಭಟನೆ ಕೇವಲ ಕೆಲವು ಗಂಟೆಗಳದ್ದಲ್ಲ, ಸಂತ್ರಸ್ತರ ಕುಟುಂಬಕ್ಕೆ ನ್ಯಾಯ ಕೊಡುವವರೆಗೆ ಹೋರಾಟ ಮುಂದುವರೆಯಲಿದೆ ಎಂದು ಎಚ್ಚರಿಸಿದರು. ಸಚಿವರ ವಜಾ, ನ್ಯಾಯಾಂಗ ತನಿಖೆ, 25 ಲಕ್ಷ ಪರಿಹಾರಕ್ಕೆ ಆಗ್ರಹ ಸರಕಾರ ಸ್ಪಂದಿಸದೆ ಇದ್ದಲ್ಲಿ ಉಪವಾಸ ಸತ್ಯಾಗ್ರಹ ಮಾಡಬೇಕಾದೀತು.ಒಟ್ಟಿನಲ್ಲಿ ಬಿಜೆಪಿ ದೊಡ್ಡ ಪ್ರಮಾಣದ ಹೋರಾಟ ನಡೆಸಲಿದೆ ಎಂದು ತಿಳಿಸಿದರು.

ನಿಷೇಧಿತ ಔಷಧಿ ಕಂಪೆನಿಗಳಿಂದ ಕಿಕ್ ಬ್ಯಾಕ್ ಪಡೆದವರು ಯಾರು? ಕಿಕ್ ಬ್ಯಾಕ್ ಎಷ್ಟು? ಸಾವಿಗೆ ಯಾರೆಲ್ಲ ಕಾರಣರು? ಎಂದು ಪ್ರಶ್ನಿಸಿದ ಅವರು, ಕೇವಲ ಡ್ರಗ್ ಕಂಟ್ರೋಲರ್ ಅಮಾನತಿನಿಂದ ನ್ಯಾಯ ಸಿಗುವುದಿಲ್ಲ ಎಂದು ನುಡಿದರು. ನ್ಯಾಯಾಂಗ ತನಿಖೆ ಮಾಡಿ ಎಂದು ಒತ್ತಾಯಿಸಿದರು.

ಬಿಜೆಪಿ ಕಾನೂನು ಪ್ರಕೋಷವು ಸರಕಾರ, ಸಚಿವರು, ಡ್ರಗ್ ಕಂಟ್ರೋಲರನ್ನು ಆರೋಪಿಗಳನ್ನಾಗಿ ಮಾಡಿ ಅಮಾಯಕ ಬಾಣಂತಿಯರ ಸಾವಿಗೆ ಇವರೇ ಕಾರಣರೆಂದು ದೂರು ದಾಖಲಿಸಲಿದೆ. ಕಾನೂನು ಹೋರಾಟವನ್ನೂ ಮಾಡುತ್ತೇವೆ. ನಾಳ ಅಥವಾ ನಾಡಿದ್ದು ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಬಳ್ಳಾರಿಗೆ ಭೇಟಿ ನೀಡುತ್ತಾರೆ ಎಂದು ವಿವರ ನೀಡಿದರು.

### ಕಳಪೆ ಗುಣಮಟ್ಟದ ಐವಿ ಫ್ಲೂಯಿಡ್

> ಮಾನ್ಯ ಮುಖ್ಯಮಂತ್ರಿಗಳು ಕೂಡಲೇ ದಿನೇಶ್ ಗುಂಡೂರಾವ್ ಅವರನ್ನು ವಜಾಗೊಳಿಸಬೇಕು; ಮೃತರ ಕುಟುಂಬಕ್ಕೆ ಭಿಕ್ಷೆ ಥರ ಪರಿಹಾರ ಕೊಟ್ಟಿದ್ದೀರಿ, ಸರಕಾರದ ನಿರ್ಲಕ್ಷ್ಯದಿಂದ ಬಾಣಂತಿಯರ ಸಾವು ಸಂಭವಿಸಿದ್ದು, ಪ್ರತಿ ಕುಟುಂಬಕ್ಕೆ ರೂ. 25 ಲಕ್ಷ ಪರಿಹಾರ ಕೊಡಬೇಕು,
>
> -ಪಿ. ರಾಜೀವ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ



### ಬಾಣಂತಿಯರ ಪ್ರಾಣ ರಕ್ಷಿಸಲು ನಿಮಗೆ ಯೋಗ್ಯತೆ ಇಲ್ಲ

ಸದನದ ಒಳಗೆ ಮತ್ತು ಹೊರಗೆ ನ್ಯಾಯ ಸಿಗುವವರೆಗೆ ಬಿಜೆಪಿ, ಅತ್ಯಂತ ತೀವ್ರ ಸ್ವರೂಪದ ಹೋರಾಟ ನಡೆಸಲಿದೆ ಎಂದರು. ಸರಕಾರಕ್ಕೆ ಅಭಿವೃದ್ಧಿ ಮಾಡಲು ಯೋಗ್ಯತೆ ಇಲ್ಲ; ಜನಸಾಮಾನ್ಯರಿಗೆ ನ್ಯಾಯ ಕೊಡಲು, ಬಾಣಂತಿಯರ ಪ್ರಾಣ ರಕ್ಷಿಸಲು ನಿಮಗೆ ಯೋಗ್ಯತೆ ಇಲ್ಲ, ಕಿಕ್ ಬ್ಯಾಕ್, ಕಮೀಷನ್ ಗೋಸ್ಕರ ಕೆಲಸ ಮಾಡುತ್ತೀರಿ. ಭ್ರಷ್ಟಾಚಾರ ತಾಂಡವವಾಡುತ್ತಿದೆ ಎಂದು ಅವರು ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಸರಕಾರವು ಏನೋ ಹೇಳಿಕೆ ಕೊಟ್ಟು ಗಮನ ಬೇರೆಡೆ ಸೆಳೆಯುವ ಕೆಲಸ ಮಾಡುತ್ತಿದೆ ಎಂದು ಆಕ್ಷೇಪಿಸಿದರು. ಬಿಟ್ ಕಾಯಿನ್ ಕಳಕೊಂಡವರು ಯಾರೆಂದು ತಿಳಿಸುವ, ಕಂಡುಹಿಡಿಯುವ ಯೋಗ್ಯತೆ ಈ ಸರಕಾರಕ್ಕೆ ಇಲ್ಲ ಎಂದು ಕಿಡಿಕಾರಿದರು.

**ಈ ದಿನದ ದರ** ಪೆಟ್ರೋಲ್: 103.44 ₹/L ಡೀಸೆಲ್ : 89.97 ₹/L ಬಂಗಾರ: ₹7,762/Gram24ct ₹7,115/Gram22ct ಬೆಳ್ಳಿ: ₹92.00/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ವಿವಾದಿತ ಮಂದಿರ ಮಸೀದಿಗಳು

ಆರನೆಯದಾಗಿ ರಾಜಸ್ಥಾನದ ಅಜ್ಮೀರ್ ನ ಖ್ವಾಜಾ ಮೊಯಿನುದ್ದೀನ್ ಚಿಶ್ತಿದರ್ಗಾ. ಬಹುಕಾಲದಿಂದ ಇಲ್ಲಿ ಹಿಂದು, ಮುಸ್ಲಿಂ ಯಾತ್ರಿಕರು ಒಟ್ಟಿಗೆ ಪ್ರಾರ್ಥನೆ ಸಲ್ಲಿಸುತ್ತಾ ಬಂದಿದ್ದಾರೆ. 13ನೇ ಶತಮಾನಕ್ಕಿಂತ ಮೊದಲು ಇದು ಹಿಂದುಗಳ ಶಿವದೇವಾಲಯವಾಗಿದ್ದು ಬಳಿಕ ಇದರ ಮೇಲೆ ಈ ದರ್ಗಾವನ್ನು ನಿರ್ಮಿಸಲಾಗಿದ್ದು ಭಾಗಶಃ ಹಿಂದೂ ಹಾಗೂ ಜೈನದೇವಾಲಯಗಳ ವಸ್ತುಗಳನ್ನು ಬಳಸಲಾಗಿದೆ ಎನ್ನಲಾಗಿದೆ. 1911 ರಲ್ಲಿ ಹರ್ ಬಿಲಾಸ್ ಸರ್ದಾ ಅಜ್ಮೀರ್ ಕುರಿತು ಬರೆದ ಪುಸ್ತಕ ಇದನ್ನು ವಿವರಿಸಿದೆ. ವಿವಾದ ಈಗ ನ್ಯಾಯಾಲಯದಲ್ಲಿದೆ. ಏಳನೆಯದಾಗಿ ಉತ್ತರ ಪ್ರದೇಶದ ಆಗ್ರಾದ ತಾಜ್ ಮಹಲ್. ಮೊಘಲ್ ದೊರೆ ಷಹಜಹಾನ್ ತನ್ನ ಪತ್ನಿ ಮುಮ್ತಾಜ್ ಳ ಹೆಸರಿನಲ್ಲಿ ಅವಳ ನೆನಪಿಗಾಗಿ 22 ವರ್ಷ ಅವಧಿಯಲ್ಲಿ ನಿರ್ಮಿಸಿ 1653 ರಲ್ಲಿ ಇದನ್ನು ಪೂರ್ಣಗೊಳಿಸಿದನೆಂಬುದು ಪ್ರತೀತಿ. ಆದರೆ ಮೊದಲು ಇಲ್ಲಿ ಹಿಂದುಗಳ ತೇಜೋ ಮಹಾಲಯ ಹೆಸರಿನ ಶಿವದೇವಾಲಯವಿದ್ದು ಅದರ ಮೇಲೆ ಇದನ್ನು ನಿರ್ಮಿಸಲಾಗಿದೆ ಎನ್ನಲಾಗಿದ್ದು ಮೊಕದ್ದಮೆ ಹೂಡಲಾಗಿದೆ.

## ಸರ್ಕಾರದಿಂದ 20 ಮಂದಿ ಪೊಲೀಸ್ ಇನ್ಸ್‌ಪೆಕ್ಟರ್‌ಗಳ ವರ್ಗಾವಣೆ

• ಉದಯವಾಹಿನಿ ಬೆಂಗಳೂರು

ರಾಜ್ಯ ಸರ್ಕಾರ ಆಡಳಿತ ಯಂತ್ರಕ್ಕೆ ಮೇಜರ್ ಸರ್ಜರಿ ನಡೆಸಿದ್ದು, 20 ಮಂದಿ ಪೊಲೀಸ್ ಇನ್ಸ್ ಪೆಕ್ಟರ್‌ಗಳ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಪೊಲೀಸ್ ಸಿಬ್ಬಂದಿ ಮಂಡಳಿಯ ನಡವಳಿ ದಿನಾಂಕ:06.12.2024. ಉಲ್ಲೇಖಿತ ದಿನಾಂಕದಂದು ನಡೆದ ಪೊಲೀಸ್ ಸಿಬ್ಬಂದಿ ಮಂಡಳಿಯ ಸಭೆಯ ನಿರ್ಣಯದಂತೆ ಈ ಕೆಳಕಂಡ ಪೊಲೀಸ್ ಇನ್ಸ್ ಪೆಕ್ಟರ್(ಸಿವಿಲ್) ರವರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಸ್ಥಳಗಳಿಗೆ ವರ್ಗಾವಣೆ ಮಾಡಿ ಆದೇಶಿಸಲಾಗಿದೆ

## ಯಾವ ಸೂತ್ರದ ಬಗ್ಗೆಯೂ ಯಾರೂ ಮಾತನಾಡುವ ಅಗತ್ಯವಿಲ್ಲ

• ಉದಯವಾಹಿನಿ ಬೆಂಗಳೂರು

ಅಧಿಕಾರ ಹಂಚಿಕೆ ಬಗ್ಗೆ, ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಭಾರಿ ಚರ್ಚೆಯಾಗುತ್ತಿರುವ ನಡುವೆಯೇ ಡಿಸಿಎಂ ಡಿ.ಕೆ.ಶಿವಕುಮಾರ್ ಈ ಗೊಂದಲಗಳಿಗೆ ತೆರೆ ಎಳೆದಿದ್ದಾರೆ. ಅಧಿಕಾರ ಹಂಚಿಕೆ ವಿಚಾರವಾಗಿ ಸಚಿವ ಮುನಿಯಪ್ಪ, ಡಾ.ಜಿ.ಪರಮೇಶ್ವರ್ ಸೇರಿದಂತೆ ಹಲವರು ಒಂದೊಂದು ಹೇಳಿಕೆ ನೀಡುತ್ತಿದ್ದಂತೆ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆ ಶುರುವಾಗಿತ್ತು. ಈ ಬೆಳವಣಿಗೆ ಬೆನ್ನಲ್ಲೇ ಸುದ್ದಿಗಾರರೊಂದಿಗೆ ಮಾತನಾಡಿರುವ ಡಿಸಿಎಂ ಡಿ.ಕೆ.ಶಿವಕುಮಾರ್, ನಮ್ಮಲ್ಲಿ ಯಾವುದೇ ಪವರ್ ಶೇರಿಂಗ್ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ನಮ್ಮಲ್ಲಿ ಯಾವುದೇ ಅಧಿಕಾರ ಹಂಚಿಕೆ ಇಲ್ಲ. ಅಧಿಕಾರದಲ್ಲಿ ಯಾವ ಸೂತ್ರನೂ ಇಲ್ಲ, ಏನೂ ಇಲ್ಲ. ರಾಜಕೀಯ ಹೊಂದಾಣಿಕೆಯಿಂದ ಕೆಲಸ ಮಾಡುತ್ತಿದ್ದೇವೆ. ಸಿಎಂ ಕೆಲ ಜವಾಬ್ದಾರಿ ವಹಿಸಿದ್ದಾರೆ, ಕೆಲಸ ಮಾಡುತ್ತಿದ್ದೇನೆ ಎಂದರು. ಅಧಿಕಾರ ಸೂತ್ರದ ಬಗ್ಗೆ ನಾನು ಏನೂ ಎಲ್ಲೂ ಮಾತನಾಡಿಲ್ಲ. ಯಾವ ಸೂತ್ರದ ಬಗ್ಗೆಯೂ ಯಾರೂ ಮಾತನಾಡುವ ಅವಶ್ಯಕತೆಯೂ ಇಲ್ಲ, ಅಗತ್ಯವೂ ಇಲ್ಲ ಎಂದು ಖಡಕ್ ಆಗಿ ಹೇಳಿದರು.

## ನನಗಿಂತ ಮುನಿಯಪ್ಪನವರಿಗೆ ಹೆಚ್ಚು ಗೊತ್ತಿರಬಹುದು ಎಂದ ಸಚಿವ ಪರಮೇಶ್ವರ್

• ಉದಯವಾಹಿನಿ ಬೆಂಗಳೂರು

ಆಹಾರ ಸಚಿವ ಕೆ.ಹೆಚ್.ಮುನಿಯಪ್ಪ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ಹೈಕಮಾಂಡ್ ನಡುವೆ ಅಧಿಕಾರ ಹಸ್ತಾಂತರದ ಬಗ್ಗೆ ಮಾತುಕತೆ ನಡೆದಿದೆ ಎಂದು ಹೇಳಿಕೆ ನೀಡಿದ್ದು, ಮುನಿಯಪ್ಪ ಹೇಳಿಕೆ ರಾಜ್ಯ ಕಾಂಗ್ರೆಸ್ ನಲ್ಲಿ ಭಾರಿ ಚರ್ಚೆಗೆ ಕಾರಣವಾಗಿದೆ. ಈ ಬಗ್ಗೆ ಗೃಹ ಸಚಿವ ಡಾ.ಪರಮೇಶ್ವರ್ ಪ್ರತಿಕ್ರಿಯೆ ನೀಡಿದ್ದಾರೆ. ಕರ್ನಾಟಕ ನ ವಾಣಿಜ್ಯ ( ಮನೋರಂಜನೆ ಕ್ರೈಂ ನ್ಯೂಸ್ ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಾ.ಪರಮೇಶ್ವರ್, ನನಗೆ ಈ ಬಗ್ಗೆ ಗೊತ್ತಿಲ್ಲ. ಯಾರು ಎಲ್ಲೆಲ್ಲಿ ಇ ಮಾಹಿತಿ ಪಡೆದಿದ್ದಾರೆ ಗೊತ್ತಿಲ್ಲ. ಮುನಿಯಪ್ಪನವರಿಗೆ ಈ ಬಗ್ಗೆ ಮಾಹಿತಿ ಇರಬಹುದು. ನನಗಿಂತ ಹೆಚ್ಚಾಗಿ ಅವರಿಗೆ ಮಾಹಿತಿ ಇರಬಹುದು ಎಂದು ಹೇಳಿದ್ದಾರೆ. ಅಧಿಕಾರ ಹಂಚಿಕೆ ವಿಚಾರವಾಗಿ ಮುಖ್ಯಮಂತ್ರಿಗಳು, ಅಧ್ಯಕ್ಷರು, ಹೈಕಮಾಂಡ್ ತೀರ್ಮಾನ ಮಾಡುತ್ತಾರೆ. ನಮ್ಮಲ್ಲಿ ಹೈಕಮಾಂಡ್ ತೀರ್ಮಾನವೇ ಅಂತಿಮ ಎಂದು ಹೇಳಿದರು.

## ವಿದ್ಯಾರ್ಥಿಗಳಿಗೆ ಗುಡ್ ನ್ಯೂಸ್ ವಿಶೇಷ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನ

• ಉದಯವಾಹಿನಿ ಬೆಂಗಳೂರು

ಅಲ್ಪಸಂಖ್ಯಾತರ ಕಲ್ಯಾಣಾ ಇಲಾಖೆಯು 2024-25ನೇ ಸಾಲಿಗೆ ಬಿ.ಇಡಿ ಹಾಗೂ ಡಿ.ಇಡಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಪಾರ್ಸಿ) ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ ಯೋಜನೆಯಡಿ ಆನ್‌ಲೈನ್ ಅರ್ಜಿ ಆಹ್ವಾನಿಸಿದೆ. ಅಭ್ಯರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿದ್ದು ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಗರಿಷ್ಟ ವರಮಾನ ರೂ. 6.00 ಲಕ್ಷಕ್ಕೆ ಮೀರಿರಬಾರದು. ಅಭ್ಯರ್ಥಿಗಳನ್ನು ಅರ್ಹತೆ ಪರೀಕ್ಷೆ/ಹಿಂದಿನ ಸಾಲಿನ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಆಸಕ್ತ ಅರ್ಹ ವಿದ್ಯಾರ್ಥಿಗಳು ಇಲಾಖಾ ವೆಬ್ ಸೈಟ್ ಕ್ರೀಡೆ sevasindhu.karnataka.gov.in: 25/12/2024 ರೊಳಗಾಗಿ ಸಲ್ಲಿಸಿ, ನಂತರ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರ ಮೊಹರು ಮತ್ತು ಸಹಿ/ದೃಢೀಕರಣ ಪಡೆದುಕೊಂಡು, ಅರ್ಜಿಯೊಂದಿಗೆ ಸೂಕ್ತ ದಾಖಲೆಗಳ ಪ್ರತಿಯೊಂದಿಗೆ ಜಿಲ್ಲಾ ಅಧಿಕಾರಿಗಳ ಕಚೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, 1ನೇ ಮಹಡಿ, ಸತ್ಯ ಶ್ರೀ ಆರ್ಕೆಡ್, 5ನೇ ಪ್ಯಾರಲಲ್ ರಸ್ತೆ, ದುರ್ಗಿಗುಡಿ, ಶಿವಮೊಗ್ಗ ಇಲ್ಲಿಗೆ ಸಲ್ಲಿಸುವಂತೆ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

## ರಾಜ್ಯದ ಜನತೆಗೆ ಮತ್ತೆ ಶಾಕ್ : ನಂದಿನಿ ಹಾಲಿನ ದರ 5 ರೂಪಾಯಿ ಏರಿಕೆಗೆ ಮನವಿ

• ಉದಯವಾಹಿನಿ ಬೆಂಗಳೂರು

ದರ ಏರಿಕೆಯಿಂದ ಕಂಗಾಲಗಿರುವ ರಾಜ್ಯದ ಜನತೆಗೆ ಇದೀಗ ಸರ್ಕಾರ ಮತ್ತೊಂದು ಶಾಕ್ ನೀಡಲು ಮುಂದಾಗಿದೆ. ಕರ್ನಾಟಕ ಹಾಲು ಒಕ್ಕೂಟವು ನಂದಿನಿ ಹಾಲಿನ ದರ ಮತ್ತೆ ಏರಿಯಾಗುವ ಸಾಧ್ಯತೆ ಇದೆ. ಈ ಹಿಂದೆ ಪ್ರತಿ ಲೀಟರ್‌ನಲ್ಲಿ ಹೆಚ್ಚುವರಿಯಾಗಿ 50 ಎಂಎಲ್ ನೀಡಿ 2 ರೂಪಾಯಿ ಏರಿಕೆ ಮಾಡಿತ್ತು. ಇದೀಗ, ಮತ್ತೆ ಕೆಎಂಎಫ್ ಹಾಲಿನ ದರ ಏರಿಸುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ನ ವ್ಯವಹಾರ ಹೌದು ಕರ್ನಾಟಕ ಹಾಲು ಒಕ್ಕೂಟ ನಂದಿನಿ ಹಾಲಿನ ದರ ಮತ್ತೆ ಏರಿಕೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ರೈತರು ಹಾಲು ಉತ್ಪಾದಕರು ಲೀಟರ್‌ಗೆ 5 ರೂಪಾಯಿ ಏರಿಕೆಗೆ ಒತ್ತಾಯಿಸಿದ್ದಾರೆ. ಕೆಎಂಎಫ್ ಅಧ್ಯಕ್ಷರಾದ ಭೀಮಾ ನಾಯ್ ಚಳಿಗಾಲದ ಅಧಿವೇಶನದ ನಂತರ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ. ಕರ್ನಾಟಕ ಕಳೆದ ಎರಡು ದಿನಗಳ ಹಿಂದೆ ನಂದಿನಿ ಹಾಲಿನ ದರದಲ್ಲಿ ಯಾವುದೇ ದರ ಏರಿಕೆ ಮಾಡೋದಿಲ್ಲ ಎಂದು ಕೆಎಂಎಫ್ ಅಧ್ಯಕ್ಷ ಭೀಮಾ ನಾಯಕ್ ಹೇಳಿಕೆ ನೀಡಿದ್ದರು.

# ಸರ್ಕಾರಿ ಆಸ್ಪತ್ರೆಗಳಲ್ಲಿ 327 ಬಾಣಂತಿಯರ ಸರಣಿ ಸಾವು

**ಹೆಚ್‌ಡಿಕೆ ಅವರು ಈ ಬಗ್ಗೆ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳಿಂದ ಸಮಗ್ರ ತನಿಖೆ ಮಾಡಿಸಬೇಕು ಎಂದು ಒತ್ತಾಯ**

• ಉದಯವಾಹಿನಿ ಬೆಂಗಳೂರು

ರಾಜ್ಯದ ಸರಕಾರಿ ಆಸ್ಪತ್ರೆಗಳಲ್ಲಿ ಬಾಣಂತಿಯರ ಸರಣಿ ಸಾವಿನ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು, ಈ ಬಗ್ಗೆ ಹೈಕೋರ್ಟ್ ನ ಹಾಲಿ ನ್ಯಾಯಮೂರ್ತಿಗಳಿಂದ ಸಮಗ್ರ ತನಿಖೆ ಮಾಡಿಸಬೇಕು ಎಂದು ಒತ್ತಾಯಿಸಿದ್ದಾರೆ. ಈ ಕುರಿತು ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕಳಪೆ ಔಷಧ ಪೂರೈಕೆ ವಿಷಯ ಸರ್ಕಾರದ ಗಮನಕ್ಕೆ ಬಂದಿರಲಿಲ್ಲವೇ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಈ ಮಾಹಿತಿ ಇರಲಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಪ್ರಗತಿಪರ ರಾಜ್ಯ ಕರ್ನಾಟಕದಲ್ಲಿ ಈ ವರ್ಷ 327 ಬಾಣಂತಿಯರು ಆಸ್ಪತ್ರೆಗಳಲ್ಲಿ ಸಾವನ್ನಪ್ಪಿದ್ದಾರೆ ಸ್ವತಃ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರೇ ನೀಡಿರುವ ಈ ಮಾಹಿತಿ ನನಗೆ ಆಘಾತವುಂಟು ಮಾಡಿದೆ. ವೈದ್ಯ ಕ್ಷೇತ್ರದಲ್ಲಿ ಅಗಾಧ ಮುನ್ನಡೆ ಸಾಧಿಸಿರುವ ಈ ಆಧುನಿಕ ಕಾಲದಲ್ಲಿಯೂ ಮಹಿಳೆಯರು ಆಸ್ಪತ್ರೆಗಳಲ್ಲಿಯೇ ಜೀವ ಚೆಲ್ಲುತ್ತಿರುವುದು ರಾಜ್ಯಕ್ಕೆ ಗೌರವ ತರುವ ವಿಚಾರವಲ್ಲ ಎಂದು ಕೇಂದ್ರ ಸಚಿವರು ಹೇಳಿದ್ದಾರೆ. ಮಹಿಳೆಯರಿಗೆ ಗೃಹಲಕ್ಷ್ಮಿ ಗ್ಯಾರಂಟಿ ಕೊಟ್ಟು ಅವರನ್ನು ಆರ್ಥಿಕವಾಗಿ ಸಬಲೀಕರಣ ಮಾಡುತ್ತಿದ್ದೇವೆ ಎನ್ನುವ ರಾಜ್ಯ ಕಾಂಗ್ರೆಸ್ ಸರಕಾರ, ಆಸ್ಪತ್ರೆಗಳಲ್ಲಿ ಅದೇ ಗೃಹಲಕ್ಷ್ಮೀಯರ ಜೀವಹರಣ ಮಾಡುತ್ತಿದೆ.



ಉದಯವಾಹಿನಿ ಚಿತ್ರ

**ನನ್ನ ತಪ್ಪಿದ್ದರೆ ರಾಜೀನಾಮೆ ಕೊಡುವೆ ಎಂಬ ಸಚಿವರ ಹೇಳಿಕೆ**

ಮಗುವಿಗೆ ಜನ್ಮ ನೀಡಲು ಸರಕಾರಿ ಆಸ್ಪತ್ರೆಗೆ ವಿಶ್ವಾಸದಿಂದ ತೆರಳುವ ಗೃಹಲಕ್ಷ್ಮಿಯರು ಜೀವಸಮೇತ ಮರಳಿ ಮನೆಗೆ ಬರುವ ಗ್ಯಾರಂಟಿಯೇ ಇಲ್ಲ. ಇದೇನಾ ಮಹಿಳೆಯರ ಸಬಲೀಕರಣ ಎಂದು ಅವರು ಪ್ರಶ್ನೆ ಮಾಡಿದ್ದಾರೆ. ರಾಜ್ಯದಲ್ಲಿ ಸರಕಾರಿ ಆರೋಗ್ಯ ವ್ಯವಸ್ಥೆ ಪೂರ್ಣ ಹದಗೆಟ್ಟಿದೆ. ಆಸ್ಪತ್ರೆಗಳು ಸಾವಿನ ಕೂಪಗಳಾಗಿವೆ.

ಕಳಪೆ ಗ್ಲೂಕೋಸ್, ಔಷಧಗಳಿಂದ ಗೃಹಲಕ್ಷ್ಮೀಯರು ಬಲಿಯಾಗುತ್ತಿದ್ದಾರೆ. ನನ್ನ ತಪ್ಪಿದ್ದರೆ ರಾಜೀನಾಮೆ ಕೊಡುವೆ ಎಂಬ ಸಚಿವರ ಹೇಳಿಕೆ ಅನಪೇಕ್ಷಿತ ಜವಾಬ್ದಾರಿ ಕೊಟ್ಟಿರುವುದು ಕೈ ತೊಳೆದುಕೊಂಡು ಪಾರಾಗಲಿಕ್ಕಲ್ಲ. ಅಗತ್ಯವಿರುವುದು ರೋಗಗ್ರಸ್ತ ಆರೋಗ್ಯ ಇಲಾಖೆಗೆ ಸೂಕ್ತ ಚಿಕಿತ್ಸೆ ಪಲಾಯನಕ್ಕಿಂತ ಪ್ರಾಯಶ್ಚಿತ್ತ ಮುಖ್ಯ ಇಲಾಖೆಯನ್ನು ಸರಿ ಮಾಡುವುದು ಅವರ ಹೊಣೆ. ಗೃಹಲಕ್ಷ್ಮೀಯರ ಪಾಪ ಅವರನ್ನು ಸುಮ್ಮನೆ ಬಿಡುವುದಿಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಧಾರವಾಡ ಬೆಂಗಳೂರು ಈ ಮರಣಗಳಿಂದ ಸರಕಾರ ನುಣಚಿಕೊಳ್ಳಲು ಸಾಧ್ಯವಿಲ್ಲ.

ಹೈಕೋರ್ಟ್‌ನ ಹಾಲಿ ನ್ಯಾಯ ಮೂರ್ತಿಗಳಿಂದ ತನಿಖೆ ನಡೆಸಬೇಕು. ಹದಗೆಟ್ಟ ಆರೋಗ್ಯ ವ್ಯವಸ್ಥೆಯನ್ನು ಹಳಿಗೆ ತರುವ ಕೆಲಸ ತುರ್ತಾಗಿ ಆಗಬೇಕು ಎಂದು ಅವರು ಒತ್ತಾಯ ಮಾಡಿದ್ದಾರೆ ಎಂದಿ ಹೆಚ್ ಡಿ ಕುಮಾರಸ್ವಾಮಿ ಅವರು ಹೇಳಿದ್ದಾರೆ.

> **ಅನೇಕ ದಿನಗಳಿಂದ ಕಳಪೆ ಗ್ಲೂಕೋಸ್, ಔಷಧ ಪೂರೈಕೆ ಆಗುತ್ತಿದ್ದರೂ ಸರಕಾರ ಏನು ಮಾಡುತ್ತಿತ್ತು? ಇಷ್ಟು ಸೂಕ್ಷ್ಮ ವಿಚಾರವನ್ನು ಆರೋಗ್ಯ ಸಚಿವರು ಅಲಕ್ಷ ಮಾಡಿದ್ದೇಕೆ? ಸಚಿವರಿಗೆ ಇಲಾಖೆಯಲ್ಲಿ ಏನೇನು ನಡೆಯುತ್ತಿದೆ ಎನ್ನುವುದು ಗೊತ್ತೇ ಇರಲಿಲ್ಲವೇ? ಎಂದು ಆರೋಗ್ಯ ಸಚಿವರನ್ನು ನೇರವಾಗಿ ಪ್ರಶ್ನೆ ಮಾಡಿದ್ದಾರೆ.**

**ಬಳ್ಳಾರಿ ಆಸ್ಪತ್ರೆಯಲ್ಲಿ IV ದ್ರಾವಣ, ಅಂದರೆ**

**ರಿಂಗರ್ ಲ್ಯಾಕ್ಟೇಟ್ ದ್ರಾವಣ ಪಡೆದ ಎರಡೇ ಗಂಟೆಯಲ್ಲಿ 9 ಬಾಣಂತಿಯರು ಅಸ್ವಸ್ಥರಾಗಿದ್ದರೆನ್ನುವುದು ಕಳವಳಕಾರಿ. ಹಾಗಾದರೆ, ಈ ದ್ರಾವಣ ಪೂರೈಸಿದ ಕಂಪನಿ ಯಾವುದು? ಅದು ಯಾರದ್ದು? ಎಂದು ಕುಮಾರಸ್ವಾಮಿ ಅವರು ಕೇಳಿದ್ದಾರೆ.**

## ಈ ವರ್ಷ ರಾಜ್ಯದಲ್ಲಿ 327 ಬಾಣಂತಿಯರು ಸಾವು

• ಉದಯವಾಹಿನಿ ಬೆಂಗಳೂರು

ರಾಜ್ಯದಲ್ಲಿ ಈ ವರ್ಷ ರಾಜ್ಯದಲ್ಲಿ 327 ಬಾಣಂತಿಯರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಶಾಕಿಂಗ್ ಮಾಹಿ ತಿ ಬಿಚ್ಚಿಟ್ಟಿದ್ದಾರೆ.

ರಾಜ್ಯದಲ್ಲಿ ಈ ವರ್ಷ 327 ಮಹಿಳೆಯರು ಮೃತ ಪಟ್ಟಿದ್ದಾರೆ. ಈ ಸಂಬಂಧ ಈಗಾಗಲೇ ಶಿಸ್ತುಕ್ರಮ ಜರುಗಿಸಿ, ನೋಟೀಸ್ ಜಾರಿ ಮಾಡಲಾಗಿದೆ ಎಂದರು. ವಿಧಾನಸೌಧದಲ್ಲಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.



ಉದಯವಾಹಿನಿ ಚಿತ್ರ

**ಶಿಸ್ತುಕ್ರಮ ಜರುಗಿಸಿ, ನೋಟೀಸ್ ಜಾರಿ**

2024-25ನೇ ಸಾಲಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ಎನ್‌ಎಫ್‌ಡಿಎಸ್ ಕಾರ್ಯಕ್ರಮದ ಅಡಿಯಲ್ಲಿ 19.70 ಕೋಟಿ ವೆಚ್ಚದಲ್ಲಿ ಆರೋಗ್ಯ ಪ್ರಯೋಗಶಾಲೆಗಳ ಪರಿಕರಗಳ ಖರೀದಿಗೆ ಅನುಮೋದನೆ.

ರಾಜ್ಯದ ಆಹಾರಸುರಕ್ಷತೆ ಮತ್ತು ಗುಣ ಮಟ್ಟ ಇಲಾಖೆ ಹಾಗೂ ಔಷಧ ನಿಯಂತ್ರಣ ಇಲಾಖೆಗಳನ್ನು ವಿಲೀನಗೊಳಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಎರಡು ಇಲಾಖೆಗಳನ್ನು ವಿಲೀನಗೊಳಿಸಿ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಎಂದು ಕರೆಯಲಾಗುವುದು.

'ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಗಳ ಅಪರೂಪದ ಮತ್ತು ಹೆಚ್ಚಿನ ವೆಚ್ಚದ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು 47 ಕೋಟಿ ರೂಪಾಯಿ ವೆಚ್ಚದಲ್ಲಿ ಕಾರ್ಪಸ್ ನಿಧಿ ಸ್ಥಾಪನೆ.

## ಭಜನ - ಪ್ರವಚನ - ಸಂಕೀರ್ತನ

• ಉದಯವಾಹಿನಿ ಬೆಂಗಳೂರು

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಗೀತಾ ಜಯಂತಿ ಪ್ರಯುಕ್ತ ಡಿಸೆಂಬರ್ 9 ರಿಂದ 12ರ ವರೆಗೆ ಪ್ರತಿದಿನ ಸಂಜೆ 6-00 ರಿಂದ 8-00ರ ವರೆಗೆ ಶ್ರೀರಾಮಪುರದ 4ನೇ ಅಡ್ಡರಸ್ತೆಯಲ್ಲಿರುವ ಗೀತಾ ಮಂದಿರದಲ್ಲಿ ವಿವಿಧ ಧಾರ್ಮಿಕ/ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅವುಗಳ ವಿವರಗಳು ಈ ರೀತಿ ಇವೆ : ಭಜನಾ ಕಾರ್ಯಕ್ರಮ : (ಪ್ರತಿದಿನ ಸಂಜೆ 6-00 ರಿಂದ 7-00) : ಡಿಸೆಂಬರ್ 9, ಸೋಮವಾರ - ಮಲ್ಲೇಶ್ವರದ ವಾಸವಿ ಗಾನಮಂಜರಿ ಸದಸ್ಯರಿಂದ ಭಜನೆ, ಡಿಸೆಂಬರ್ 10, ಮಂಗಳವಾರ - ರಾಜಾಜಿನಗರದ ಅಂಭೃಣಿ ಭಜನಾ ಮಂಡಳಿಯ ಸದಸ್ಯರಿಂದ ಭಜನೆ, ಡಿಸೆಂಬರ್ 11, ಬುಧವಾರ - ಮಲ್ಲೇಶ್ವರದ ವಾಸವಿ ಕಲಾ ಶಾಲೆಯ ಸದಸ್ಯರಿಂದ ಭಜನೆ.



ಉದಯವಾಹಿನಿ ಚಿತ್ರ

ಪ್ರವಚನ ಕಾರ್ಯಕ್ರಮ : ಡಿಸೆಂಬರ್ 9 ರಿಂದ 11ರ ವರೆಗೆ (ಪ್ರತಿದಿನ ಸಂಜೆ 7-00 ರಿಂದ 8-00). ವಿಷಯ : ಗೀತಾ ಸಂದೇಶ. ಪ್ರವಚನಕಾರರು : ಮ||ಶಾ||ಸಂ|| ಡಾ|| ಭೀಮಸೇನ ಗುತ್ತಲ ಆಚಾರ್ಯ. ಹರಿನಾಮ ಸಂಕೀರ್ತನೆ : ಡಿಸೆಂಬರ್ 12, ಗುರುವಾರ ಸಂಜೆ 6-30ಕ್ಕೆ : ಗಾಯನ : ಶ್ರೀ ಆನಂದ್ ದೇಶಪಾಂಡೆ ಮತ್ತು ಸಂಗಡಿಗರಿಂದ ಏರ್ಪಡಿಸಿದೆ ಎಂದು ಟಿ ಟಿ ಡಿ ಹೆಚ್.ಡಿ.ಪಿ.ಪಿ ಸಂಚಾಲಕರಾದ ಡಾ|| ಪಿ. ಭುಜಂಗರಾವ್ ತಿಳಿಸಿದ್ದಾರೆ.

## ಮೆಟ್ರೋ ದೈನಂದಿನ ಪ್ರಯಾಣಿಕರ ಸಂಚಾರದಲ್ಲಿ ಡಿ.6ರಂದು ಸಾರ್ವಕಾಲಿಕ ದಾಖಲೆ

• ಉದಯವಾಹಿನಿ ಬೆಂಗಳೂರು

ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ನಮ್ಮ ಮೆಟ್ರೋ ಪ್ರಯಾಣಿಕರ ಸಂಚಾರದಲ್ಲಿ ದಾಖಲೆ ಬರೆದಿದೆ. ನಮ್ಮ ಮೆಟ್ರೋ ರೈಲು ಓಡಾಟ ಆರಂಭವಾದ ಬಳಿಕ ಈವರೆಗೆ ದೈನಂದಿನ ಪ್ರಯಾಣಿಕರ ಸಂಚಾರದಲ್ಲಿ ಸಾರ್ವಕಾಲಿಕ ದಾಖಲೆ ಸೃಷ್ಟಿಯಾಗಿದೆ.

ಒಂದೇ ದಿನ ಮೆಟ್ರೋದಲ್ಲಿ 9 ಲಕ್ಷಕ್ಕೂ ಅಧಿಕ ಮಂದಿ ಓಡಾಡಿದ್ದಾರೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ ಅಧಿಕೃತ ಮಾಹಿತಿ ನೀಡಿದೆ. ಒಂದೇ ದಿನ ಗರಿಷ್ಠ ಪ್ರಯಾಣಿಕರು ನಮ್ಮ ಮೆಟ್ರೋ ರೈಲುಗಳಲ್ಲಿ ಸಂಚಾರ ಮಾಡಿದ್ದಾರೆ. ಡಿಸೆಂಬರ್ 6ರಂದು ಶುಕ್ರವಾರ 9,20,562 ಲಕ್ಷ ಪ್ರಯಾಣಿಕರು ಪ್ರಯಾಣ ಮಾಡುವ ಮೂಲಕ ದಾಖಲೆ ಬರೆದಿದ್ದಾರೆ. ಹಾಗಾದರೆ ಯಾವ ಮಾರ್ಗದಲ್ಲಿ ಹೆಚ್ಚು ಸಂಚಾರವಾಗಿದೆ ಎಂಬ ಮಾಹಿತಿ ಇಲ್ಲಿದೆ.

ನಮ್ಮ ಮೆಟ್ರೋ ಮೊದಲ ಮಾರ್ಗ ಚಲಘಟ-ವೈಟ್ ಫಿಲ್ಡ್ ರೆಗಿನ ನೇರಳ ಮಾರ್ಗದಲ್ಲಿ ಶುಕ್ರವಾರ ಒಂದೇ ದಿನ 439616 ಲಕ್ಷ ಪ್ರಯಾಣಿಕರು ಓಡಾಡಿದ್ದಾರೆ. ಇನ್ನೂ ನಮ್ಮ ಮೆಟ್ರೋ ಎರಡನೇ ಮಾರ್ಗವಾದ ಮಾದಾವರ-ಸಿಲ್ಕ್ ಇನ್ಸ್ಟಿಟ್ಯೂ ವರೆಗಿನ ಹಸಿರು ಮಾರ್ಗದಲ್ಲಿ ಬರೋಬ್ಬರಿ 3,12,248 ಜನರು ಒಂದೇ ದಿನ ಸಂಚರಿಸಿದ್ದಾರೆ. ಇನ್ನೂ ಕೆಂಪೇಗೌಡ ಮೆಟ್ರೋ ನಿಲ್ದಾಣ ಮೆಜೆಸ್ಟಿಕ್ ಇಂಟರ್‌ಚೇಂಜ್ ನಿಲ್ದಾಣದಿಂದ 1,67,617 ಮಂದಿ ಓಡಾಡಿದ್ದಾರೆ. ಇದರಲ್ಲಿ ಮೆಟ್ರೋ ಸಂಚಾರ ಮಾರ್ಗ ಬದಲಾಯಿಸಿಕೊಂಡವರು, ಇಲ್ಲಿಂದಲೇ ಸಂಚಾರ ಆರಂಭಿಸಿದವು, ನಾಲ್ಕು ದಿಕ್ಕಿನಿಂದ ಇಲ್ಲಿಗೆ ಬಂದು ಇಳಿದವರು ಇದ್ದಾರೆ. ಒಟ್ಟಾರೆಯಾಗಿ 1081 ಪೇಪರ್ ಟಿಕೆಟ್‌ಗಳು ಮಾರಾಟವಾಗಿವೆ ಎಂದು ಬೆಂಗಳೂರು ಮೆಟ್ರೋ ರೈಲು ನಿಗಮದ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅಕ್ಟೋಬರ್‌ನಲ್ಲಿ 2.38 ಕೋಟಿ ಜನ ಸಂಚಾರ, ಆದಾಯ? ಧಾರವಾಡ ಇದೇ ವರ್ಷ ಆಗಸ್ಟ್ 14 ರಂದು ಒಂದೇ ದಿನ 9,17 ಲಕ್ಷ ಮಂದಿ ಒಂದೇ ದಿನ ಪ್ರಯಾಣ ಮಾಡಿದ್ದರು. ಅದೇ ಸಾರ್ವಕಾಲಿಕ ದಾಖಲಾಗಿತ್ತು. ಬೆಂಗಳೂರು ಅದನ್ನು ಡಿಸೆಂಬರ್ 6ರಂದು ದಾಖಲಾದ ಪ್ರಯಾಣಿಕರ ಸಂಖ್ಯೆಯು ಮೀರಿಸಿ ಮತ್ತೊಂದು ದಾಖಲೆ ಬರೆದಿದೆ.



ಉದಯವಾಹಿನಿ ಚಿತ್ರ


**ವರ್ಷದ 2 ಗರಿಷ್ಠ ದೈನಂದಿನ ದಾಖಲೆಗಳು ಇವು ಆಗಿವೆ. ( ಮೈಸೂರು 23 ಬೆಳಗಾವಿ ಕಳೆದ ಅ. ತಿಂಗಳಲ್ಲಿ ಮಾಸಿಕವಾಗಿ ಅತ್ಯಧಿಕ ಜನರು ಮೆಟ್ರೋದಲ್ಲಿ ಸಂಚರಿಸಿದ್ದಾರೆ. ಆ ತಿಂಗಳಲ್ಲಿ ಬರೋಬ್ಬರಿ 2.38 ಕೋಟಿ ಜನರು ಮೆಟ್ರೋ ಸಾರಿಗೆ ಯಲ್ಲಿ ಓಡಾಡಿದ್ದಾರೆ. ಇದರಿಂದ ಮೆಟ್ರೋಗೆ 60 ಕೋಟಿಗೂ ಹೆಚ್ಚಿನ ಆದಾಯ ಸಂಗ್ರಹವಾಗಿದೆ ಎಂದು ಅಧಿಕಾರಿಗಳು ಇತ್ತೀಚೆಗೆ ಮಾಹಿತಿ ನೀಡಿದ್ದರು.**

## ಅಲ್ಪಸಂಖ್ಯಾತ ಸಮುದಾಯಕ್ಕೆ ಭರ್ಜರಿ ನ್ಯೂಸ್!

• ಉದಯವಾಹಿನಿ ಬೆಂಗಳೂರು

ಅಲ್ಪಸಂಖ್ಯಾತ ಸಮುದಾಯದವರಿಗೆ ರಾಜ್ಯ ಸರ್ಕಾರ ಗುಡ್ ನ್ಯೂಸ್ ನೀಡಿದ್ದು, ಹಲವು ಯೋಜನೆಗಳಿಗೆ ಅನುಮೋದನೆ ನೀಡಿದೆ. ನಿನ್ನೆ ನಡೆದ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.ಹಾಗೂ ವಿವಿಧ ಕಾರ್ಯಕ್ರಮಗಳನ್ನು ರೂಪಿಸುವುದಾಗಿ ಸರ್ಕಾರ ಘೋಷಿಸಿದೆ.

'ಬೀದರ್‌ನಲ್ಲಿರುವ ಶ್ರೀ ನಾನಕ್ ಝೀರಾ ಸಾಹೇಬ್ ಗುರುದ್ವಾರದ ಅಭಿವೃದ್ಧಿಗಾಗಿ ರೂ.1 ಕೋಟಿ ಅನುದಾನ ಮಂಜೂರು



- **267 ವಕ್ಫ್ ಆಸ್ತಿಗಳ ಸಂರಕ್ಷಣೆ ಮತ್ತು ಅವುಗಳ ಅಭಿವೃದ್ಧಿಗಾಗಿ ರೂ.22.87 ಕೋಟಿ ಅನುದಾನ 'ಅಲ್ಪಸಂಖ್ಯಾತರ ಸಮಗ್ರ ಅಭಿವೃದ್ಧಿಗಾಗಿ ರೂ.231.81 ಕೋಟಿ ವೆಚ್ಚದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಕೆ.ಎಂ.ಡಿ.ಸಿ.ಯ ಮುಖಾಂತರ ಅನುಷ್ಠಾನ**
- **ಗ್ರೂಪ್ -ಸಿ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 500 ಅಭ್ಯರ್ಥಿಗಳಿಗೆ ತರಬೇತಿ ರೂ. 100 ಸಂಖ್ಯಾಬಲವುಳ್ಳ 96 ಮೆಟ್ರಿಕ್ ನಂತರದ ಬಾಲಕ / ಬಾಲಕಿಯರ ವಿದ್ಯಾರ್ಥಿನಿಲಯಗಳು ಪ್ರಾರಂಭ**
- **50 ಹೊಸ ಮೌಲಾನಾ ಆಜಾದ್ ಶಾಲೆಗಳು ಆರಂಭ**
- **50 ಸಂಖ್ಯಾಬಲವುಳ್ಳ 25 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಪ್ರಾರಂಭ**
- **25 ಮೌಲಾನಾ ಆಜಾದ್ ಶಾಲೆಗಳಲ್ಲಿ ಪದವಿ ಪೂರ್ಣ ಶಿಕ್ಷಣ ಆರಂಭ**
- **ರೂ.2 ಕೋಟಿ ಅನುದಾನದಲ್ಲಿ ಸಿಗಾರ್ ಸಮುದಾಯದವರ ಸಬಲೀಕರಣಕ್ಕಾಗಿ ಹೊಸ ಯೋಜನೆಗಳು**

## 267 ವಕ್ಫ್ ಆಸ್ತಿಗಳ ಸಂರಕ್ಷಣೆ, ಅಭಿವೃದ್ಧಿಗಾಗಿ 22 ಕೋಟಿ ಅನುದಾನ!

• ಉದಯವಾಹಿನಿ ಬೆಂಗಳೂರು

ರಾಜ್ಯದ 267 ವಕ್ಫ್ ಆಸ್ತಿಗಳ ಸಂರಕ್ಷಣೆ, ಅವುಗಳ ಅಭಿವೃದ್ಧಿಗಾಗಿ ರೂ.22.87 ಕೋಟಿ ಅನುದಾನ ನೀಡಲು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಮಹತ್ವದ ಯೋಜನೆಗಳನ್ನು ಘೋಷಿಸಲಾಗಿದೆ.

ಬೀದರ್‌ನಲ್ಲಿರುವ ಶ್ರೀ ನಾನಕ್ ಝೀರಾ ಸಾಹೇಬ್ ಗುರುದ್ವಾರದ ಅಭಿವೃದ್ಧಿಗಾಗಿ ರೂ.1 ಕೋಟಿ ಅನುದಾನ ಮಂಜೂರು ಮಾಡಲಾಗಿದೆ. 267 ವಕ್ಫ್ ಆಸ್ತಿಗಳ ಸಂರಕ್ಷಣೆ ಮತ್ತು ಅವುಗಳ ಅಭಿವೃದ್ಧಿಗಾಗಿ ರೂ.22.87 ಕೋಟಿ ಅನುದಾನ ನೀಡಲು ಒಪ್ಪಿಗೆ ನೀಡಲಾಗಿದೆ. ಅಲ್ಪಸಂಖ್ಯಾತರ ಸಮಗ್ರ ಅಭಿವೃದ್ಧಿಗಾಗಿ ರೂ.231.81 ಕೋಟಿ ವೆಚ್ಚದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಕೆ.ಎಂ.ಡಿ.ಸಿ.ಯ ಮುಖಾಂತರ ಅನುಷ್ಠಾನ, ಜೆಇಇ/ನೀಟ್/ಸಿಇಟಿ ಪರೀಕ್ಷೆಗಳಿಗೆ 6,000 ಅಭ್ಯರ್ಥಿಗಳಿಗೆ ತರಬೇತಿ, ಗ್ರೂಪ್ - ಸಿ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 500 ಅಭ್ಯರ್ಥಿಗಳಿಗೆ ತರಬೇತಿ ನೀಡಲು ನಿರ್ಧರಿಸಲಾಗಿದೆ. ಕರ್ನಾಟಕ 100 ಸಂಖ್ಯಾಬಲವುಳ್ಳ 96 ಮೆಟ್ರಿಕ್ ನಂತರದ ಬಾಲಕ / ಬಾಲಕಿಯರ ವಿದ್ಯಾರ್ಥಿನಿಲಯಗಳು ಪ್ರಾರಂಭ, 50 ಹೊಸ ಮೌಲಾನಾ ಆಜಾದ್ ಶಾಲೆಗಳು ಆರಂಭ, 50 ಸಂಖ್ಯಾಬಲವುಳ್ಳ 25 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಪ್ರಾರಂಭ, 25 ಮೌಲಾನಾ ಆಜಾದ್ ಶಾಲೆಗಳಲ್ಲಿ ಪದವಿ ಪೂರ್ಣ ಶಿಕ್ಷಣ ಆರಂಭ, ರೂ.2 ಕೋಟಿ ಅನುದಾನದಲ್ಲಿ ಸಿಖ್‌ಲಿಗಾರ್ ಸಮುದಾಯದವರ ಸಬಲೀಕರಣಕ್ಕಾಗಿ ಹೊಸ ಯೋಜನೆಗಳನ್ನು ಘೋಷಿಸಲಾಗಿದೆ.

## ಅಂಚೆ ಕಛೇರಿ, ಕೊರಿಯರ್ ಏಜೆನ್ಸಿ ಮೇಲೆ ಸಿಸಿಬಿ ದಾಳಿ!

• ಉದಯವಾಹಿನಿ ಬೆಂಗಳೂರು

ಹೊಸ ವರ್ಷಾಚರಣೆ ಸಮೀಪಿಸುತ್ತಿದ್ದಂತೆ ಬೆಂಗಳೂರಿನಲ್ಲಿ ಪೊಲೀಸರು ಹಾಗೂ ಸಿಸಿಬಿ ಅಧಿಕಾರಿಗಳು ಫುಲ್ ಅಲರ್ಟ್ ಆಗಿದ್ದು, ಡ್ರಗ್ಸ್ ವಿರುದ್ಧ ಸಮರ ಸಾರಿದ್ದಾರೆ. ಹಾಗಾಗಿ ಇಂದು ಬೆಂಗಳೂರಿನ ಸಂಪಂಗಿರಾಮನಗರದಲ್ಲಿ ವಿವಿಧ ಕೊರಿಯರ್ ಏಜೆನ್ಸಿ ಹಾಗೂ ಅಂಚೆ ಕಚೇರಿಯ ಮೇಲೆ ದಾಳಿ ಮಾಡಿ ಪರಿಶೀಲನೆ ನಡೆಸಿದರು. ವಿಶ್ವ. ಕ್ರೀಡೆ ಸಿನಿಮಾ ಬೆಂಗಳೂರು ನಗರದ ವಿವಿಧೆಡೆ ವಿಶೇಷ ಕಾರ್ಯಾಚರಣೆ ನಡೆಸಿದರು. ಬೆಂಗಳೂರಿನ ಕೊರಿಯರ್ ಏಜೆನ್ಸಿ ಮತ್ತು ಅಂಚೆ ಕಚೇರಿಗಳಲ್ಲಿ ಪರಿಶೀಲನೆ ನಡೆಸಿದ್ದಾರೆ. ಸಂಪಂಗಿ ರಾಮನಗರದ ಕೊರಿಯರ್ ಏಜೆನ್ಸಿಯಲ್ಲಿ ಸಿಸಿಬಿ ಮತ್ತು ಶ್ವಾನದಳ ಪಾರ್ಸೆಲ್‌ಗಳ ಪರಿಶೀಲನೆ ನಡೆಸಿತು. ಅಲ್ಲದೆ ಅಂಚೆ ಕಚೇರಿಗಳಲ್ಲೂ ಕೂಡ ಮಾದಕ ವಸ್ತುಗಳು ಪಾರ್ಸೆಲ್ ಬರುತ್ತಿರುವ ಆರೋಪದ ಹಿನ್ನೆಲೆಯಲ್ಲಿ ಅಲ್ಲೂ ಕೂಡ ದಾಳಿ ಮಾಡಿ ಪರಿಶೀಲನೆ ನಡೆಸಿದರು. ವ್ಯವಹಾರ ಕರ್ನಾಟಕ ಈ ವಿಚಾರವಾಗಿ ಸಿಸಿಬಿ ಜಂಟಿ ಪೊಲೀಸ್ ಆಯುಕ್ತ ಚಂದ್ರಗುಪ್ತ ಮಾತನಾಡಿ, ವಿದೇಶದಿಂದ ಬರುತ್ತಿದ್ದ ಪಾರ್ಸಲ್‌ಗಳಲ್ಲಿ ಡ್ರಗ್ಸ್ ಪತ್ತೆಯಾಗಿತ್ತು. ಹೀಗಾಗಿ, ಒಟ್ಟು ಏಳು ಕಡೆ ಪರಿಶೀಲನೆ ನಡೆಸಲಾಗಿದೆ.



## ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತ

**ಸಬ್ ಅರ್ಬನ್ ರೈಲು ಯೋಜನೆ, ಯಾವ ಮಾರ್ಗದಲ್ಲಿ ಮೊದಲು ಸಂಚಾರ**

• ಉದಯವಾಹಿನಿ ಬೆಂಗಳೂರು


ಉದ್ಯಾನನಗರಿ ಬೆಂಗಳೂರಿನ ಸಂಚಾರ ದಟ್ಟಣೆ ಕಡಿಮೆ ಮಾಡಲು ಕರ್ನಾಟಕ ಸರ್ಕಾರ ಬೆಂಗಳೂರು ಉಪನಗರ ರೈಲು ಯೋಜನ (ಬಿಎಸ್‌ಆರ್‌ಪಿ) ಯನ್ನು ಜಾರಿಗೊಳಿಸುತ್ತಿದೆ. 148 ಕಿ. ಮೀ. ಉದ್ದದ ಈ ಯೋಜನೆ ಒಟ್ಟು 4 ಕಾರಿಡಾರ್‌ಗಳನ್ನು ಒಳಗೊಂಡಿದೆ. ಇವುಗಳ ಪೈಕಿ ಎರಡು ಕಾರಿಡಾರ್‌ಗಳ ಕೆಲಸ ಪ್ರಗತಿಯಲ್ಲಿದೆ. ನಗರದಲ್ಲಿ ಸಬ್ ಅರ್ಬನ್ ರೈಲು ಸಂಚಾರ ಯಾವಾಗ? ಎಂಬುದು ಎಲ್ಲರ ಪ್ರಶ್ನೆಯಾಗಿದೆ. ಬೆಂಗಳೂರು ಉಪನಗರ ರೈಲು ಯೋಜನೆ (ಬಿಎಸ್‌ಆರ್‌ಪಿ) ಯೋಜನೆಯನ್ನು ಕರ್ನಾಟಕ ಸರ್ಕಾರ ಕರ್ನಾಟಕ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತ (ಕೆ-ರೈಡ್) ಮೂಲಕ ಅನುಷ್ಠಾನಗೊಳಿಸುತ್ತಿದೆ. ಸದ್ಯದ ಮಾಹಿತಿ ಪ್ರಕಾರ ಹಂತ ಹಂತವಾಗಿ ಸಬ್ ಅರ್ಬನ್ ರೈಲು ಯೋಜನೆಯಲ್ಲಿ ಸಂಚಾರ ಆರಂಭವಾಗಲಿದೆ.

ಇಂಡಿಯನ್ ಎಕ್ಸ್‌ಪ್ರೆಸ್ ವರದಿಯ ಪ್ರಕಾರ ಬಿಎಸ್‌ಆರ್‌ಪಿಯ ಎರಡು ಮಾರ್ಗದಲ್ಲಿ ಮೊದಲ ಹಂತದ ಸಂಚಾರ 2027ರಲ್ಲಿ ಆರಂಭವಾಗಲಿದೆ. ಮೂರು ಬೋಗಿಯ ರೈಲು 10 ನಿಮಿಷಗಳ ಅಂತರದಲ್ಲಿ ಸಂಚಾರವನ್ನು ನಡೆಸಲಿವೆ. ಬಳಿಕ ರೈಲು ಸಂಚಾರದ ಅವಧಿಯನ್ನು 5 ನಿಮಿಷಕ್ಕೆ ತರಲಾಗುತ್ತದೆ.

ಯಾವ ಮಾರ್ಗ ಮೊದಲು ಆರಂಭ? ವರದಿಯ ಪ್ರಕಾರ 2026ರ ಡಿಸೆಂಬರ್‌ನಲ್ಲಿ ಚಿಕ್ಕಬಣಾವರ-ಯಶವಂತಪುರ ನಡುವಿನ 8 ಕಿ. ಮೀ. ಮಾರ್ಗ ಕಾರಿಡಾರ್-2 ಸಂಚಾರಕ್ಕೆ ಮುಕ್ತವಾಗಲಿದೆ. ನಾಲ್ಕು ತಿಂಗಳ ಬಳಿಕ ಹೀಗಲಿಗೆ-ಬೆನ್ನಿಗಾನಹಳ್ಳಿ ಕಾರಿಡಾರ್ 4ರ 17 ಕಿ. ಮೀ. ವಿಸ್ತರಿತ ಮಾರ್ಗದಲ್ಲಿ ಸಂಚಾರ ಆರಂಭವಾಗಲಿದೆ. 2028ರ ಡಿಸೆಂಬರ್‌ನಿಂದ 2029ರ ಜೂನ್ ನಡುವೆ ಬಿಎಸ್‌ಆರ್‌ಪಿಯ ಎಲ್ಲಾ 148 ಕಿ. ಮೀ. ಮಾರ್ಗದಲ್ಲಿ ರೈಲು ಸಂಚಾರವನ್ನು ನಡೆಸಲಿದೆ.

ಕಳೆದ ವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ಸರ್ಕಾರ ಬಿಎಸ್‌ಆರ್‌ಪಿ ಯೋಜನೆಗೆ 306 ರೈಲು ಬೋಗಿ ಖರೀದಿ ಮಾಡಲು ಒಪ್ಪಿಗೆ ನೀಡಿದೆ. ಕೆ-ರೈಡ್ ಈ ಕುರಿತು ಸರ್ಕಾರದ ಅಧಿಕೃತ ಆದೇಶಕ್ಕೆ ಕಾಯುತ್ತಿದೆ. ಮೂಲಗಳ ಮಾಹಿತಿ ಪ್ರಕಾರ ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಶೇ 50ರಷ್ಟು ಅನುದಾನವನ್ನು ಬೋಗಿಯ ಖರೀದಿಗೆ ನೀಡಲಿವೆ.

ಇದಕ್ಕೆ ಸುಮಾರು 4270 ಕೋಟಿ ರೂ. ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ.



ಉದಯವಾಹಿನಿ ಚಿತ್ರ

**ರೈಲು ಯೋಜನೆಯಲ್ಲಿ ಸಂಚಾರ ಆರಂಭ**

> **ಬೋಗಿ ಖರೀದಿಗೆ ಟೆಂಡರ್ ಕರೆಯಲು ನಾವು ತಯಾರಿ ನಡೆಸಿದ್ದೇವೆ. ಸರ್ಕಾರದ ಅಧಿಕೃತ ಆದೇಶಕ್ಕಾಗಿ ಕಾಯುತ್ತಿದ್ದೇವೆ. ಆದೇಶ ಬಂದ ಬಳಿಕ ರೈಲ್ವೆ ಬೋರ್ಡ್ ಗೆ ಉಳಿದ ಶೇ 50ರಷ್ಟು ಅನುದಾನಕ್ಕಾಗಿ ಪತ್ರವನ್ನು ಬರೆಯಲಾಗುತ್ತದೆ. ಅನುದಾನ ಬಂದ ಬಳಿಕ ಟೆಂಡರ್ ಕರೆಯಲಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.**

ಬೋಗಿಯನ್ನು ಪೂರೈಸುವ ಕಂಪನಿ 5 ವಿನ್ಯಾಸಗಳನ್ನು ನೀಡಬೇಕಿದೆ. ಕೆ- ರೈಡ್ ಒಂದು ವಿನ್ಯಾಸ ಅಂತಿಮಗೊಳಿಸಲಿದೆ. ಬೆಂಗಳೂರು ಮೆಟ್ರೋ ಮಾದರಿಯಲ್ಲಿ ಮೊದಲು 3 ಬೋಗಿಯ ರೈಲು ಓಡಿಸಲಾಗುತ್ತದೆ ಬಳಿಕ ಇದನ್ನು 6 ಬೋಗಿಯ ರೈಲಾಗಿ ಪರಿವರ್ತನೆ ಮಾಡಲಾಗುತ್ತದೆ. ಬಿಎಸ್ ಆರ್‌ಪಿ ಒಂದು ಕಾರಿಡಾರ್ ಸಂಪೂರ್ಣವಾಗುವ ತನಕ ನಾವು ಕಾಯುವುದಿಲ್ಲ. ಎರಡು ಕಾರಿಡಾರ್‌ನ ಒಂದು ಹಂತ ಕೆಲಸಗಳು ಪೂರ್ಣವಾದಾಗ ರೈಲು ಬೋಗಿಯ ಲಭ್ಯತೆ ನೋಡಿಕೊಂಡು ಸಂಚಾರವನ್ನು ಆರಂಭಿಸುತ್ತೇವೆ.

ಮಾರ್ಗ ಸಂಚಾರಕ್ಕೆ ಸಿದ್ಧವಾಗುವ ಹೊತ್ತಿಗೆ 8 ರಿಂದ 10 ಬೋಗಿಗಳು ಆಗಮಿಸುವ ನಿರೀಕ್ಷೆ ಇದೆ.

> **ಈ ರೈಲು ಬೋಗಿಗಳು ದೆಹಲಿ ಮೆಟ್ರೋ ಮಾದರಿಯಲ್ಲಿ ಇರಲಿವೆ. ಪ್ರತಿ ಬೋಗಿಯಲ್ಲಿ 80 ಸೀಟುಗಳು ಇರಲಿದ್ದು, 300 ಜನರು ಸಂಚಾರ ನಡೆಸಬಹುದು. ಸದ್ಯಕ್ಕೆ ಪ್ರತಿ 10 ನಿಮಿಷಕ್ಕೊಂದು ರೈಲು ಎಂದು ಯೋಜನೆ ರೂಪಿಸಲಾಗಿದೆ. ಬೆಳಗ್ಗೆ 4.30ರಿಂದ ರಾತ್ರಿ 11.30ರ ತನಕ ರೈಲುಗಳು ಸಂಚಾರ ನಡೆಸಲಿವೆ ಎಂದು ಕೆ-ರೈಡ್ ಅಂದಾಜಿಸಿದೆ.**

# ಕ್ಷಯ ಮುಕ್ತ ಮೈಸೂರು ಜಿಲ್ಲೆಗಾಗಿ ನೂರು ದಿನಗಳ ಜಾಗೃತಿ ಅಭಿಯಾನ

## ಒಬ್ಬರಿಂದ ಒಬ್ಬರಿಗೆ ಹರಡುವ ಕಾಯಿಲೆ ಇದಾಗಿರುವುದರಿಂದ ಚಿಕಿತ್ಸೆ ನೀಡಿ ಹರಡದಂತೆ ನೋಡಿಕೊಳ್ಳಬೇಕು

• **ಉದಯವಾಹಿನಿ ಮೈಸೂರು**

ಕ್ಷಯರೋಗ (ಟಿಬಿ) ಮುಕ್ತ ಮೈಸೂರು ಜಿಲ್ಲೆಗಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಹಮ್ಮಿಕೊಂಡಿರುವ ನೂರು ದಿನಗಳ ಜಾಗೃತಿ ಅಭಿಯಾನ'ಕ್ಕೆ ಚಾಲನೆ ನೀಡಲಾಯಿತು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ 'ಆರೋಗ್ಯದ ಬಗ್ಗೆ ಇರಲಿ ಗಮನ-ಟಿಬಿ ಮುಕ್ತ ಭಾರತ ಅಭಿಯಾನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಟಿಬಿಯ ಪರಿಣಾಮ, ತಡೆಗಟ್ಟುವುದು, ಲಭ್ಯವಿರುವ ಚಿಕಿತ್ಸೆ ಮೊದಲಾದವುಗಳನ್ನು ತಿಳಿಸಿಕೊಡಲಾಯಿತು. ಜಿಲ್ಲೆ ಮುಂದಿನ 100 ದಿನಗಳಲ್ಲಿ ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳುವ ಶಪಥವನ್ನೂ ಮಾಡಲಾಯಿತು.

ಉದ್ಘಾಟಿಸಿದ ಜಿಲ್ಲಾ ಪಂಚಾಯಿತಿ ಸಿಇಒ ಕೆ.ಎಂ. ಗಾಯಿತ್ರಿ ಮಾತನಾಡಿ, 'ಜಿಲ್ಲೆಯನ್ನು ಕ್ಷಯರೋಗ ಮುಕ್ತಗೊಳಿಸಲು ಎರಡು ವರ್ಷಗಳಿಂದಲೂ ಸತತ ಪ್ರಯತ್ನ ಮಾಡುತ್ತಿದ್ದೇವೆ. ಆದರೂ ರೋಗಿಗಳು ಕಂಡು ಬರುತ್ತಿದ್ದಾರೆ. ಕೇಂದ್ರ ಸರ್ಕಾರದ ಸೂಚನೆಯಂತೆ ಮುಂದಿನ ನೂರು ದಿನಗಳಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಆರೋಗ್ಯ ಇಲಾಖೆಯೊಂದಿಗೆ ಸಂಬಂಧಿಸಿದ ಇಲಾಖೆಗಳು ಕೂಡ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು' ಎಂದು ಸೂಚಿಸಿದರು.

**ಟಿಬಿ ಮುಕ್ತ ಭಾರತ ಅಭಿಯಾನ**

### ಶೇ. 83ರಷ್ಟು ಸಾಧನೆ

**ಎರಡು ವರ್ಷಗಳಲ್ಲಿ ಒಂದೂ ಪ್ರಕರಣ ವರದಿ ಆಗದಿದ್ದರೆ ಆ ಗ್ರಾಮ ಪಂಚಾಯಿತಿಯನ್ನು ಟಿಬಿ ಮುಕ್ತ ಎಂದು ಘೋಷಿಸಲಾಗುವುದು. ಈಗಾಗಲೇ ಪತ್ತೆಯಾದ ಪ್ರದೇಶಗಳಲ್ಲಿ ಚಿಕಿತ್ಸೆ ಪಡೆದವರನ್ನು ಟಿಬಿ ಚಾಂಪಿಯನ್ಸ್ ಎಂದು ಮಾಡಿ ಮಾಡಿ ಜಾಗೃತಿ ಮೂಡಿಸಬೇಕು. ಬಿಟ್ಟು ಹೋದವರನ್ನು ಚಿಕಿತ್ಸೆಯ ವ್ಯಾಪ್ತಿಗೆ ತರಬೇಕು' ಎಂದು ತಿಳಿಸಿದರು. 'ಜಿಲ್ಲೆಯಲ್ಲಿ ಪ್ರಸಕ್ತ ವರ್ಷದಲ್ಲಿ 4,200 ಪ್ರಕರಣ ಪತ್ತೆ ಹಚ್ಚಬೇಕು ಎಂದು ಗುರಿ ನೀಡಲಾಗಿತ್ತು. ಇದರಲ್ಲಿ ಶೇ 83ರಷ್ಟು ಸಾಧನೆ ಮಾಡಲಾಗಿದೆ.**


ಉದಯವಾಹಿನಿ ಚಿತ್ರ

ಪೂರಕ ಪೌಷ್ಟಿಕ ಆಹಾರ ಒದಗಿಸಲು ದಾನಿಗಳು ಇಂತಿಷ್ಟು ರೋಗಿಗಳನ್ನು ದತ್ತು ಪಡೆದುಕೊಳ್ಳಬಹುದು. ನಾನೂ ದತ್ತು ತೆಗೆದುಕೊಳ್ಳಲು ಸಿದ್ಧವಿದ್ದೇನೆ, ಅಧಿಕಾರಿಗಳು ಪ್ರಕ್ರಿಯೆ ನಡೆಸಬೇಕು. ಚಾಮರಾಜನಗರದಲ್ಲಿದ್ದಾಗ ದತ್ತು ಸ್ವೀಕರಿಸಿದ್ದ ಪೂರಕ ಪೌಷ್ಟಿಕ ಆಹಾರಕ್ಕೆ ಬೇಕಾಗುವ ಹಣ ನೀಡಿದ್ದೆ' ಎಂದರು. ತಪಾಸಣೆಗೆ ಬೇಕಾದ ಸಾಧನಗಳ ಸಂಖ್ಯೆಯನ್ನು ಜಿಲ್ಲೆಯಲ್ಲಿ ಹೆಚ್ಚಿಸಲಾಗಿದೆ. ಇದನ್ನು ಬಳಸಿಕೊಂಡು ತ್ವರಿತವಾಗಿ ಪತ್ತೆ ಹಚ್ಚಿ ಚಿಕಿತ್ಸೆಗೆ ಒಳಪಡಿಸಬೇಕು. ರೋಗಿಗಳಲ್ಲಿ ಆತ್ಮ ವಿಶ್ವಾಸ ಮೂಡಿಸಬೇಕು.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಶಿಬಿರಗಳನ್ನು ಆಯೋಜಿಸಿ ತಪಾಸಣೆ ನಡೆಸಬೇಕು' ಎಂದು ತಿಳಿಸಿದರು. ಒಬ್ಬರಿಂದ ಒಬ್ಬರಿಗೆ ಹರಡುವ ಕಾಯಿಲೆ ಇದಾಗಿರುವುದರಿಂದ ಚಿಕಿತ್ಸೆ ನೀಡಿ ಹರಡದಂತೆ ನೋಡಿಕೊಳ್ಳಬೇಕು 3-4 ವಾರಗಳಿಗೂ ಹೆಚ್ಚು ಕಾಲದಿಂದ ಕೆಮ್ಮು ಇದ್ದರೆ ಅದು ಕ್ಷಯ ಆಗಿರಬಹುದು. ಆದ್ದರಿಂದ ಆರಂಭಿಕ ಹಂತದಲ್ಲೇ ಪರೀಕ್ಷೆ ಮಾಡಿಸಿಕೊಳ್ಳಬೇಕು. ಕಾಯಿಲೆ ಇದ್ದವರಿಗೆ ಸರ್ಕಾರದಿಂದ ಉಚಿತವಾಗಿ ಚಿಕಿತ್ಸೆ ನೀಡಲಾಗುವುದು. ಪರೀಕ್ಷೆಯೂ ಉಚಿತವಿದೆ, ರೋಗ ಪತ್ತೆ ಹಚ್ಚುವ ಖಾಸಗಿ ವೈದ್ಯರಿಗೆ 500 ಪ್ರೋತ್ಸಾಹಧನ ನೀಡಲಾಗುವುದು. ಚಿಕಿತ್ಸೆಯ ಅವಧಿಯಲ್ಲಿ ಪೌಷ್ಟಿಕ ಆಹಾರಕ್ಕಾಗಿ ತಿಂಗಳಿಗೆ 500 ಕೊಡಲಾಗುವುದು ಎಂದು ಹೇಳಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, 'ಸರ್ಕಾರ ನೀಡುವ ಸೌಲಭ್ಯಗಳು ಫಲಾನುಭವಿಗಳಿಗೆ ಸಂಪೂರ್ಣವಾಗಿ ತಲುಪಬೇಕು. ಸರ್ಕಾರದ ಯೋಜನೆಗಳ ಬಗ್ಗೆ ಹೆಚ್ಚಿನ ಪ್ರಚಾರ ಮಾಡಬೇಕು. ಇದಕ್ಕಾಗಿ ಮಾಧ್ಯಮವನ್ನು ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

> **2005-06ರಿಂದ ಒಂದು ಲಕ್ಷಕ್ಕೆ 204 ಕ್ಷಯ ರೋಗದ ಪ್ರಕರಣ ಪತ್ತೆ ಹಚ್ಚುತ್ತಿದ್ದೆವು. ಈಗ ಅಂತಹ ರೋಗಿಗಳ ಪ್ರಮಾಣವನ್ನು 50ಕ್ಕಿಂತ ಕಡಿಮೆಗೆ ತರಬೇಕು, ಶೂನ್ಯಕ್ಕೆ ತಂದು ದೇಶವನ್ನು ಟಿಬಿ ಮುಕ್ತ ಮಾಡಬೇಕೆಂಬ ಗುರಿ ಹೊಂದಲಾಗಿದೆ. ಈ ನೂರು ದಿನಗಳ ಅಭಿಯಾನದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಸಮರೋಪಾದಿಯಲ್ಲಿ ಕೆಲಸ ಮಾಡಬೇಕು**
> -ಡಾ.ಪಿ.ಸಿ.ಕುಮಾರಸ್ವಾಮಿ ಡಿಎಚ್‌ಒ



**ಕೆಮ್ಮು ಇದ್ದರೆ ಅದು ಕ್ಷಯ ಆಗಿರಬಹುದು**

---

# ಸಚಿವ ಸ್ಥಾನದ ಮೇಲೆ ಸುಬ್ಬಾರೆಡ್ಡಿ ದೃಷ್ಟಿ

• **ಉದಯವಾಹಿನಿ ಚಿಕ್ಕಬಳ್ಳಾಪುರ**

ರಾಜ್ಯ ಸಚಿವ ಸಂಪುಟ ಪುನರ್ ರಚನೆಯ ಗುಲ್ಲು ಜೋರಾಗಿದೆ. ಸಂಪುಟ ಪುನರ್ ರಚನೆಯಾದರೆ ನಾವೂ ಸಚಿವ ಸ್ಥಾನದ ಆಕಾಂಕ್ಷಿಗಳು ಎಂದು ಕಾಂಗ್ರೆಸ್‌ನ ಕೆಲವು ಶಾಸಕರು ತಮ್ಮ ಮನದ ಬಯಕೆಯನ್ನು ಬಹಿರಂಗವಾಗಿ ವ್ಯಕ್ತಪಡಿಸುತ್ತಿದ್ದಾರೆ. ಈ ಸಾಲಿಗೆ ಜಿಲ್ಲೆಯ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಸಹ ಸೇರಿದ್ದಾರೆ. 'ನನಗೆ ಸಚಿವ ಸ್ಥಾನ ಬೇಕೇ ಬೇಕು' ಎಂದು ಪ್ರತಿಪಾದಿಸುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಬಹುಮತ ಪಡೆದ ನಂತರ ಚಿಂತಾಮಣಿ ಶಾಸಕ ಡಾ.ಎಂ.ಸಿ.ಸುಧಾಕರ್ ಮತ್ತು ಬಾಗೇಪಲ್ಲಿ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಅವರ ಹೆಸರು ಸಚಿವ ಸ್ಥಾನದ ವಿಚಾರದಲ್ಲಿ ಜಿಲ್ಲೆಯಿಂದ ಪ್ರಮುಖವಾಗಿ ಕೇಳಿ ಬಂದಿದ್ದವು. ಈ ಇಬ್ಬರು ಮೂರು ಬಾರಿ ಶಾಸಕರಾಗಿದ್ದಾರೆ.

ಸುಬ್ಬಾರೆಡ್ಡಿ ಅವರು ಸಚಿವ ಸ್ಥಾನದ ವಿಚಾರವಾಗಿ ವರಿಷ್ಠರ ಭೇಟಿ ಮಾಡಲು ನವದೆಹಲಿಗೆ ತೆರಳದಿರುವುದೇ ಅವರು ಸ್ಥಾನದಿಂದ ವಂಚಿತವಾಗಲು ಕಾರಣ ಎನ್ನುವ ಮಾತುಗಳು ಸಹ ಆಗ ಕೇಳಿ ಬಂದವು. ಡಾ.ಎಂ.ಸಿ.ಸುಧಾಕರ್ ಅವರಿಗೆ ಸಚಿವ ಸ್ಥಾನದ ಭಾಗ್ಯ ಒಲಿಯಿತು. ಸಚಿವ ಸ್ಥಾನ ದೊರೆಯದಿದ್ದಾಗ ಸುಬ್ಬಾರೆಡ್ಡಿ ಅವರು ಬಹಿರಂಗವಾಗಿಯೇ ಬೇಸರ ವ್ಯಕ್ತಪಡಿಸಿದ್ದರು. ನಂತರ ಕರ್ನಾಟಕ ಬೀಜ ನಿಗಮದ ಅಧ್ಯಕ್ಷ ಸ್ಥಾನವನ್ನು ನೀಡಲಾಯಿತು. ಆದರೆ ಅವರು ನಿಗಮದ ಅಧ್ಯಕ್ಷ ಸ್ಥಾನ ತಿರಸ್ಕರಿಸಿದರು. ಸಚಿವ ಸ್ಥಾನ ನೀಡುವುದಾರೆ ನೀಡಿ, ಇಲ್ಲವೆ ಯಾವುದೇ ಹುದ್ದೆ ಬೇಡ' ಎಂದು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅವರಿಗೆ ಸುದೀರ್ಘವಾದ ಪತ್ರ ಸಹ ಬರೆದಿದ್ದರು.

> **ಕಾಂಗ್ರೆಸ್ ಸರ್ಕಾರದ ಪೂರ್ಣ ಬಹುಮತ ಪಡೆದ ಸಂದರ್ಭದಲ್ಲಿ ನನಗೆ ಸಚಿವ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ಹೈಕಮಾಂಡ್‌ಗೆ ಮನವಿ ಮಾಡಿದ್ದೇನೆ. ಆದರೆ ಹೈ ಕಮಾಂಡ್ ಸಚಿವ ಸ್ಥಾನ ನೀಡಿಲ್ಲ ಎಂದು ತಿಳಿಸಿದರು. ಇದೀಗ ಸಚಿವ ಸ್ಥಾನ ಬೇಕೇ ಬೇಕು ಎಂದು ಕೇಳಿದ್ದೇನೆ. ಬೆಂಗಳೂರು ಗ್ರಾಮಾಂತರ ಬೀದರ್ ಚಾಮರಾಜ ನಗರ ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆಯೊ ಕಾಯುತ್ತೇನೆ. ಹೈಕಮಾಂಡ್ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ**
> -ಸುಬ್ಬಾರೆಡ್ಡಿ , ಶಾಸಕ



# ಹಾಡಹಗಲೇ ಮಚ್ಚು ತೋರಿಸಿ ಯುವಕನ ರಾಬರಿ : ಬೆಚ್ಚಿ ಬಿದ್ದ ಜನತೆ

• **ಉದಯವಾಹಿನಿ ಚಿಕ್ಕಬಳ್ಳಾಪುರ**

ಚಿಕ್ಕಬಳ್ಳಾಪುರದಲ್ಲಿ ಹಾಡು ಹಗಲೇ ಇಬ್ಬರು ಕತರ್ನಾಕ್ ಖದೀಮರು ಮಚ್ಚು ತೋರಿಸಿ ಯುವಕನನ್ನು ರಾಬರಿ ಮಾಡಿರುವ ಘಟನೆ ಚಿಕ್ಕಬಳ್ಳಾಪುರ ಜಿಲ್ಲೆಯ ಕುಡುವತ್ತಿ-ಹುರಳಗುರ್ಕಿ ಬಳಿ ಈ ಒಂದು ಘಟನೆ ನಡೆದಿದೆ. ಯುವಕನ ರಾಬರಿ ಮಾಡುತ್ತಿರುವ ಘಟನೆಯನ್ನು ಸ್ಥಳಿಯರು ಮೊಬೈಲ್ ನಲ್ಲಿ ಸೆರೆ ಹಿಡಿದಿದ್ದಾರೆ. ನ ವ್ಯವಹಾರ ಕರ್ನಾಟಕ ಹೌದು ಹಾಡು ಹಗಲೇ ಮಚ್ಚು ತೋರಿಸಿ ಯುವಕನ ರಾಬರಿ ಮಾಡಿದ ಕಳ್ಳರು, ಮಚ್ಚು ತೋರಿಸಿ ರಾಬರಿ ಮಾಡಿದ ಕತರ್ನಾಕ್ ಕಳ್ಳರು. ಬೈಕ್ ನಲ್ಲಿ ಬಂದಂತಹ ಇಬ್ಬರು ದುಷ್ಕರ್ಮಿಗಳಿಂದ ಈ ಒಂದು ಕೃತ್ಯ ನಡೆದಿದೆ.

ರಾಬಿ ಮಾಡುತ್ತಿರುವ ವಿಡಿಯೋ ಇವನು ಸ್ಥಳೀಯರು ಸೆರೆ ಹಿಡಿದಿದ್ದಾರೆ. ಈ ಇಬ್ಬರು ಕಳ್ಳರು ರಾಬರಿ ಮಾಡಿ ಮುದ್ದೇನಹಳ್ಳಿ, ಆಸ್ಪತ್ರೆಯ ಬಳಿ ಬಂದಿದ್ದರು. ನಂದಿನಿ ಪಾರ್ಲರ್ ಟೀ ಕುಡಿಯಲು ಬೈಕ್ ನಿಲ್ಲಿಸಿದ್ದರು. ಈ ವೇಳೆ ಮೊಬೈಲ್‌ನಲ್ಲಿ ವಿಡಿಯೋ ನೋಡಿದ ಸ್ಥಳೀಯರು ಇವರೇ ಆ ರಾಬರಿ ಮಾಡಿದ ಕಳ್ಳರು ಎಂದು ಅವರನ್ನು ಹಿಡಿಯಲು ಯತ್ನಿಸಿದಾಗ, ಅವರನ್ನು ಕೂಡ ಹೆದರಿಸಿ ಕಳ್ಳರು ಅಲ್ಲಿಂದ ಪರಾರಿಯಾಗಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಪೊಲೀಸರು ಇದೀಗ ದೂರು ದಾಖಲಿಸಿಕೊಂಡಿದ್ದು ಕಳ್ಳರ ಪತ್ತೆಗಾಗಿ ಬಲೆ ಬೀಸಿದ್ದಾರೆ.

# ಹನುಮ ಜಯಂತಿಗೆ ಭರದ ಸಿದ್ಧತೆ

• **ಉದಯವಾಹಿನಿ ಶನಿವಾರಸಂತೆ**

ಶನಿವಾರಸಂತೆ ಹಿಂದು ಜಾಗರಣಾ ವೇದಿಕೆ ವತಿಯಿಂದ ಡಿ. 8ರಂದು ಪಟ್ಟಣದಲ್ಲಿ 3ನೇ ವರ್ಷದ ಹನುಮ ಜಯಂತಿಯನ್ನು ಏರ್ಪಡಿಸಲಾಗಿದ್ದು ಇದಕ್ಕಾಗಿ ಸಿದ್ಧತೆಗಳು ಭರದಿಂದ ನಡೆದಿವೆ. ಪಟ್ಟಣದ ಕಿತ್ತೂರು ರಾಣಿ ಚನ್ನಮ್ಮ ವೃತ್ತವನ್ನು ಬಣ್ಣದ ಕಾಗದಗಳಿಂದ ಹಾಗೂ ತಳಿರು ತೋರಣಗಳಿಂದ ಅಲಂಕರಿಸಲಾಗಿದೆ. ಅಂದು ಬೆಳಿಗ್ಗೆ 10 ಗಂಟೆಗೆ ಪಟ್ಟಣದ ತ್ಯಾಗರಾಜ ಕಾಲೋನಿಯಲ್ಲಿರುವ ಶ್ರೀ ಚೌಡೇಶ್ವರಿ ಬನದಲ್ಲಿ ಗೋಪೂಜೆಯ ನಂತರ ಶೋಭಯಾತ್ರೆ ಉತ್ಸವಕ್ಕೆ ಚಾಲನೆ ನೀಡಲಾಗುತ್ತದೆ.


ಉದಯವಾಹಿನಿ ಚಿತ್ರ

ಸಂಜೆ 4 ಗಂಟೆಯ ನಂತರ ಶ್ರೀ ವಿಜಯ ವಿನಾಯಕ ದೇವಸ್ಥಾನದಲ್ಲಿ ಹೋಮ, ಮಹಾಪೂಜೆ ಮತ್ತು ಮಹಾಮಂಗಳಾರತಿ ನಂತರ ಸಂಜೆ 5 ಗಂಟೆಯಿಂದ ಶೋಭಯಾತ್ರಾ ಮೆರವಣಿಗೆ ನಡೆಯಲಿದೆ. ಶೋಭಯಾತ್ರೆಯು ಪಟ್ಟಣದ ಮುಖ್ಯ ರಸ್ತೆ ಮೂಲಕ ಗುಡುಗಳಲೆಯಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನ ತಲುಪಿ ಶನಿವಾರಸಂತೆ ಬೈಪಾಸ್ ರಸ್ತೆ ಮೂಲಕ ವಾಪಾಸಾಗಿ ಪಟ್ಟಣದ ಕಿತ್ತೂರುರಾಣಿ ಚನ್ನಮ್ಮ ವೃತ್ತದಲ್ಲಿರುವ ಬನ್ನಿ ಮಂಟಪದಲ್ಲಿ ಶೋಭಯಾತ್ರೆ ಪೂರ್ಣಗೊಳಿಸಲಾಗುತ್ತದೆ. ಮೆರವಣಿಗೆಯಲ್ಲಿ ಬೆಳ್ಳಿರಥ, ನಾಸಿಕ್ ಬ್ಯಾಂಡ್, ಚಂಡೆ ವಾದ್ಯದೊಂದಿಗೆ 3 ಅಡಿ ಎತ್ತರದ ಪಂಚಲೋಹದ ಶ್ರೀ ವೀರಾಂಜನೇಯ ಉತ್ಸವ ಮೂರ್ತಿಯನ್ನು ಮೆರವಣಿಗೆಯಲ್ಲಿ ಕೊಂಡಯ್ಯಲಾಗುವುದು ಎಂದು ಹಿಂದು ಜಾಗರಣಾ ವೇದಿಕೆ ಪ್ರಕಟಣೆಯಲ್ಲಿ ತಿಳಿಸಿದೆ.

---

# ಅಂಗವಿಕಲತೆ ಮೆಟ್ಟಿ ಸಾಧಿಸಿದ ಬ್ಯಾಸ್ಕೆಟ್‌ಬಾಲ್ ಕ್ರೀಡಾಪಟು

• **ಉದಯವಾಹಿನಿ, ಹಾರೋಹಳ್ಳಿ**

ಸಾಧನೆಗೆ ಅಂಗವಿಕಲತೆ ಅಡ್ಡಿಯಲ್ಲ. ಸಾಧಿಸುವ ಛಲವಿದ್ದರೆ ಏನು ಬೇಕಾದರೂ ಮಾಡಬಹುದು' ಎಂಬ ಮಾತಿದೆ. ಅದಕ್ಕೆ ಕಣ್ಣೆದುರಿನ ನಿದರ್ಶನವಾಗಿದ್ದಾರೆ ತಾಲ್ಲೂಕಿನ ಮರಳವಾಡಿ ಹೋಬಳಿಯ ಕರಿಕಲ್ ದೊಡ್ಡಿ ಗ್ರಾಮದ ಎರಡು ಕಾಲಿಲ್ಲದ ಅಂಗವಿಕಲ ಬ್ಯಾಸ್ಕೆಟ್‌ಬಾಲ್ ಕ್ರೀಡಾಪಟು ರತ್ನಮ್ಮ. ಬೆಂಗಳೂರು ಗ್ರಾಮಾಂತರ ತಮ್ಮ ಅಂಗವಿಕಲತೆಯನ್ನು ಮೆಟ್ಟಿ ನಿಂತು ಬ್ಯಾಸ್ಕೆಟ್ ಬಾಲ್ ಕ್ರೀಡೆಯಲ್ಲಿ ಆಸಕ್ತಿ ಬೆಳೆಸಿಕೊಂಡ ಅವರು, ಸತತ ಪರಿಶ್ರಮದ ಮೂಲಕ, ರಾಜ್ಯ ಮತ್ತು ರಾಷ್ಟ್ರಮಟ್ಟದ ಕ್ರೀಡಾಕೂಟಗಳಲ್ಲಿ ತಮ್ಮ ಛಾಪು ಮೂಡಿಸಿ ಪದಕಗಳನ್ನು ಕೊರಳಿಗೇರಿಸಿಕೊಂಡು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

**ಚಿಕ್ಕಂದಿನಲ್ಲೇ ಪೋಲಿಯೊ:** ಕೆಂಪಯ್ಯ ಅವರ ನಾಲ್ಕನೇ ಪುತ್ರಿಯಾದ ರತ್ನಮ್ಮ ಅವರಿಗೆ ಐದನೇ ವರ್ಷಕ್ಕೆ ಪೋಲಿಯೊಗೆ ತುತ್ತಾಗಿ ಎರಡೂ ಕಾಲುಗಳ ಸ್ವಾಧೀನವನ್ನು ಸಂಪೂರ್ಣವಾಗಿ ಕಳೆದುಕೊಂಡರು. ತಂದೆ- ತಾಯಿ ಮಗಳನ್ನು ಹಲವು ಆಸ್ಪತ್ರೆಗಳಿಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದರೂ ಕಾಲುಗಳು ಸರಿಯಾಗಲಿಲ್ಲ. 'ಕಾಲುಗಳ ಸ್ವಾಧೀನವಿಲ್ಲದಿದ್ದರೂ ಕಷ್ಟಪಟ್ಟು 10ನೇ ತರಗತಿವರೆಗೆ ಓದಿದೆ. ಏನಾದರು ಸಾಧಿಸಬೇಕೆಂಬ ಛಲದಿಂದ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕೆಂಬ ಆಲೋಚನೆ ಬಂತು. ಆಗ ಗಾಲಿಕುರ್ಚಿಯಲ್ಲಿ ಬ್ಯಾಸ್ಕೆಟ್‌ಬಾಲ್ ಆಡುವುದನ್ನು ಗಮನಿಸಿ, ನಾನೂ ಯಾಕೆ ಈ ಕ್ರೀಡೆ ಕಲಿತು ಸಾಧಿಸಬಾರದು ಎಂದು ಬ್ಯಾಸ್ಕೆಟ್‌ಬಾಲ್ ಕಲಿತೆ' ಎಂದು ರತ್ನಮ್ಮ ತಿಳಿಸಿದರು. ರಾಜ್ಯದ ಗಾಲಿಕುರ್ಚಿ ಬ್ಯಾಸ್ಕೆಟ್‌ಬಾಲ್ ತಂಡದ ನಾಯಕಿಯಾಗಿರುವ ರತ್ನಮ್ಮ ಅವರ ತಂಡವು, ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರಮಟ್ಟದ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದು ಪದಕಗಳನ್ನು ಕೊರಳಿಗೇರಿಸಿಕೊಂಡಿದೆ. ಜಾರ್ಖಂಡ್‌ನ ರಾಂಚಿಯಲ್ಲಿ ನಡೆದ ರಾಷ್ಟ್ರಮಟ್ಟದ ಥೋ ಬಾಲ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ರತ್ನಮ್ಮ ಅವರು ಪದಕ ಪಡೆದು ಸಾಧನೆ ಮಾಡಿದ್ದಾರೆ.


ಉದಯವಾಹಿನಿ ಚಿತ್ರ

> **ಮೈಸೂರಿನನಲ್ಲಿ ನಡೆದ ರಾಜ್ಯಮಟ್ಟದ ಬ್ಯಾಸ್ಕೆಟ್‌ಬಾಲ್ ಸ್ಪರ್ಧೆಯಲ್ಲಿ ಹಾಗೂ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಮ್ಯಾರಥಾನ್‌ನಲ್ಲೂ ಭಾಗವಹಿಸಿ ಪದಕ ಗಳಿಸಿದ ಹೆಗ್ಗಳಿಕೆ ರತ್ನಮ್ಮ ಅವರದ್ದು**

# ಮಾಜಿ ಸೈನಿಕರಿಂದ ಪ್ರತಿಭಟನೆ

• **ಉದಯವಾಹಿನಿ ಸುಂಟಿಕೊಪ್ಪ**

ವೀರ ಸೇನಾನಿಗಳ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಸಂದೇಶದ ಹಾಕಿದ ಆರೋಪಿ ವಿರುದ್ಧ ಆರೋಪಿ ವಿದ್ಯಾಧರ್ ಅವರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಸುಂಟಿಕೊಪ್ಪ ಹೋಬಳಿ ಜೈ ಜವಾನ್ ಮಾಜಿ ಸೈನಿಕರ ಸಂಘದ ವತಿಯಿಂದ ಸುಂಟಿಕೊಪ್ಪದಲ್ಲಿ ಪ್ರತಿಭಟನೆ ನಡೆಸಲಾಯಿತು.

ವೃತ್ತದಲ್ಲಿ ಮಾಜಿ ಸೈನಿಕರು ಸೇರಿ ವಿಧ್ಯಾದರ್ ವಿರುದ್ಧ ಘೋಷಣೆಯನ್ನು ಕೂಗಿ ಯೋಧರ ಪರ ಘೋಷಣೆ ಕೂಗುತ್ತಾ ಆರೋಪಿಗೆ ಕಠಿಣ ಶಿಕ್ಷೆ ವಿಧಿಸುವವರೆಗೂ ಹೋರಾಟ ಮುಂದುವರೆಸುವುದಾಗಿ ಎಚ್ಚರಿಕೆ ನೀಡಿದರು. ಬೆಂಗಳೂರು ಗ್ರಾಮಾಂತರ ಬೀದರ್ ಚಾಮರಾಜ ನಗರ ಬ ಜೈ ಜವಾನ್ ಮಾಜಿ ಸೈನಿಕರ ಅಧ್ಯಕ್ಷ ಪಿ.ಜಿ. ಶ್ರೀನಿವಾಸ್, ಉಪಾಧ್ಯಕ್ಷ ಕೆ.ಎಂ.ಬೆಳ್ಯಪ್ಪ, ಕಾರ್ಯದರ್ಶಿ ಖಜಾಂಚಿ ಟಿ.ಬಿ.ರಾಜೇಶ್, ಸದಸ್ಯರುಗಳಾದ ಎಂ.ಎನ್.ಪೆಮ್ಮಯ್ಯ, ಎ.ಕೆ.ಅಪ್ಪು.ಕೆ.ಕೆ. ಯೋಗೇಶ್, ಡಿ.ಟಿ.ರವಿ, ಡಿ.ಕೆ.ದೇವಯ್ಯ, ಸಿ.ಕೆ.ಚಂಗಪ್ಪ, ಎನ್.ಎನ್.ಶಿವಪ್ರಸಾದ್, ,ಎನ್.ಬಿ.ಮಧು ಇದ್ದರು.


ಉದಯವಾಹಿನಿ ಚಿತ್ರ

# ಮುಡಾದಲ್ಲಿ ಮತ್ತೊಂದು ಹಗರಣ

## 3 ಸಾವಿರ ರೂ.ಗೆ ಜಮೀನು, 300 ಕೋಟಿ ನಷ್ಟ

• **ಉದಯವಾಹಿನಿ ಮೈಸೂರು**


ಉದಯವಾಹಿನಿ ಚಿತ್ರ

ಮುಡಾದ ಮತ್ತೊಂದು ಹಗರಣ ಬಯಲಾಗಿದ್ದು ಸರ್ಕಾರದ ಬೊಕ್ಕಸಕ್ಕೆ ಬರೋಬ್ಬರಿ 300 ಕೋಟಿ ರೂ. ನಷ್ಟವಾಗಿದೆ ಎಂದು ತಿಳಿದುಬಂದಿದೆ.

23 ನಿವೇಶನಗಳನ್ನು 3,000 ರೂ. ಗೆ ಮಾರಾಟ ಮಾಡಲಾಗಿದೆ ಎಂದು ಮುಡಾ ವಿರುದ್ಧ ಆರೋಪ ಕೇಳಿಬಂದಿದೆ. ಮುಡಾ ಮಾಜಿ ಆಯುಕ್ತ ದಿನೇಶ್ ಮತ್ತು ರಿಯಲ್ ಎಸ್ಟೇಟ್ ಉದ್ಯಮಿ ಮಂಜುನಾಥ್ ಸೇರಿಕೊಂಡು ಅಕ್ರಮ ಎಸಗಿದ್ದಾರೆ ಎಂದು ತಿಳಿದು ಬಂದಿದೆ.

ಈ ಇಬ್ಬರೂ ಇಡಿ ಮುಂದೆ ವಿಚಾರಣೆಗೆ ಹಾಜರಾಗಿದ್ದರು. ರಿಯಲ್ ಎಸ್ಟೇಟ್ ಉದ್ಯಮಿ ಮಂಜುನಾಥ್ ಗೆ 23 ನಿವೇಶನಗಳನ್ನು ಕೇವಲ 3,000 ರೂ.ಗೆ ಐದೇ ದಿನದಲ್ಲಿ ದಿನೇಶ್ ಮಾಡಿಸಿಕೊಟ್ಟಿದ್ದರು ಎಂದು ತಿಳಿದು ಬಂದಿದೆ. ಮಂಜುನಾಥ್‌ಗೆ ಯಾವ ನಿವೇಶನ ಕಳೆದುಕೊಂಡಿದ್ದಕ್ಕೆ ಬದಲಾಗಿ ನಿವೇಶನ ನೀಡಿದ್ದಾರೆ ಎಂಬ ಬಗ್ಗೆ ಉಲ್ಲೇಖವಿಲ್ಲ.

**ಭ್ರಷ್ಟಾಚಾರಕ್ಕೆ ಹಿಡಿದ ಕೈ ಗನ್ನಡಿ**

ಪ್ರೋತ್ಸಾಹದಾಯಕವಾಗಿ ಸೈಟು ನೀಡಿರುವುದಾಗಿ ದಾಖಲೆ ತೋರಿಸಲಾಗಿದೆ. 5 ಲಕ್ಷ ರೂ. ಶುಲ್ಕ ಪಾವತಿ ಮಾಡಬೇಕಾದಲ್ಲಿ ಕೇವಲ 600 ರೂ. ಎಂದು ನಮೂದು ಮಾಡಲಾಗಿದೆ. ಇದು ಮುಡಾದ ಬ್ರಹ್ಮಾಂಡ ಭ್ರಷ್ಟಾಚಾರ ಯಾವ ಮಟ್ಟಿಗಿದೆ ಎನ್ನುವುದನ್ನು ತೋರಿಸುತ್ತದೆ. ಸಾಮಾನ್ಯರು ಭೂಮಿ ಕಳೆದುಕೊಂಡರೂ ಪರಿಹಾರವಾಗಿ ಪಡೆಯಲು ಹರಸಾಹಸ ಪಡೆಯಬೇಕಾಗುತ್ತದೆ. ಆದರೆ ಇಲ್ಲಿ ಲಕ್ಷಾಂತರ ಬೆಲೆ ಬಾಳುವ ಜಮೀನನ್ನು ಜುಜುಬಿ ಬೆಲೆಗೆ ನೀಡಿರುವುದು ಇಲ್ಲಿನ ಭ್ರಷ್ಟಾಚಾರಕ್ಕೆ ಹಿಡಿದ ಕೈ ಗನ್ನಡಿಯಾಗಿದೆ.

---


ಉದಯವಾಹಿನಿ ಚಿತ್ರ

# ಬೇಡಿಕೆ ಈಡೇರಿಕೆ: ನಿವೃತ್ತರ ಪ್ರತಿಭಟನೆ

• **ಉದಯವಾಹಿನಿ ತುಮಕೂರು**

7ನೇ ವೇತನ ಆಯೋಗದ ಶಿಫಾರಸಿನಂತೆ ನಿವೃತ್ತ ಸರ್ಕಾರಿ ನೌಕರರಿಗೂ ಡಿಸಿಆರ್‌ಜಿ, ಕಮ್ಯುಟೇಶನ್, ಗಳಿಕೆ ರಜೆ ನಗದೀಕರಣ ಸೌಲಭ್ಯ ನೀಡುವಂತೆ ಒತ್ತಾಯಿಸಿ ನಿವೃತ್ತ ನೌಕರರು ನಗರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ನಗರದ ಬಿಜಿಎಸ್ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆಯಲ್ಲಿ ತೆರಳಿ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು. ಕರ್ನಾಟಕ ರಾಜ್ಯ ನಿವೃತ ನೌಕರರ ವೇದಿಕೆಯಿಂದ ಹಮ್ಮಿಕೊಂಡಿರುವ ಜಾಗೃತಿ ಯಾತ್ರೆಯನ್ನು ಬರಮಾಡಿಕೊಂಡು, ನಂತರ ಮೆರವಣಿಗೆ ನಡೆಸಿದರು.

**ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿ**

1-7-2022ರಿಂದ 31-7-2024ರ ಅವಧಿಯಲ್ಲಿ ನಿವೃತ್ತರಾದ ನೌಕರರಿಗೂ 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ಬಾಕಿ ವೇತನ, ಸೌಲಭ್ಯಗಳನ್ನು ನೀಡಬೇಕು. ಆಯೋಗ ನೇಮಕವಾದ ದಿನದಿಂದ, ಆಯೋಗದ ಶಿಫಾರಸುಗಳು ಜಾರಿಯಾಗುವ ಸುಮಾರು ಎರಡು ವರ್ಷಗಳ ಅವಧಿಯಲ್ಲಿ ಸುಮಾರು 26 ಸಾವಿರ ನೌಕರರು ನಿವೃತ್ತರಾಗಿದ್ದಾರೆ. ಈ ಎಲ್ಲಾ ನೌಕರರಿಗೂ ಶಿಫಾರಸುಗಳು ಅನ್ವಯ ಆಗಬೇಕು ಎಂದು ಆಗ್ರಹಿಸಿದರು.

### ಹೊಸ ಆದೇಶ ಹೊರಡಿಸಬೇಕು

**ನಿವೃತ್ತ ನೌಕರರ ವೇದಿಕೆ ಮುಖಂಡ ಕೆ.ಸಿದ್ದಯ್ಯ, 7ನೇ ವೇತನ ಆಯೋಗದ ಆರ್ಥಿಕ ಸವಲತ್ತುಗಳು 01-08-2024ರಿಂದ ಅನ್ವಯವಾಗುವಂತೆ ಸುತ್ತೋಲೆ ಹೊರಡಿಸಲಾಗಿದೆ. 1-7-2022ರಿಂದ 31- 7-2024ರ ನಡುವೆ ನಿವೃತ್ತರಾದ ನೌಕರರಿಗೂ ನೀಡಬೇಕು. ಪರಿಷ್ಕರಿಸಿ ಹೊಸ ಆದೇಶ ಹೊರಡಿಸಬೇಕು' ಎಂದು ಮನವಿ ಮಾಡಿದರು.**

---

# ಊರಿಗೆ ಮಾದರಿಯಾದ ಕೊಂಡಾಪುರ ಸರ್ಕಾರಿ ಪ್ರಾಥಮಿಕ ಶಾಲೆ

## • ಉತ್ತಮ ಪರಿಸರ, ಸರ್ಕಾರಿ ಶಾಲೆಯ ಬಗ್ಗೆ, ಗ್ರಾಮಸ್ಥರಿಗಿರುವ ಉತ್ಸಾಹ, ಮಕ್ಕಳನ್ನು ಶಾಲೆಗೆ ಸೇರಿಸಬೇಕು ಎನ್ನುವಂತೆ ಮಾಡಿದೆ

• **ಉದಯವಾಹಿನಿ,ಗೌರಿಬಿದನೂರು**


ತಾಲ್ಲೂಕಿನ ಕೊಂಡಾಪುರ ಸರ್ಕಾರಿ ಪ್ರಾಥಮಿಕ ಶಾಲೆ ಹಲವು ವಿಷಯಗಳಿಗೆ ಮಾದರಿಯಾಗಿ ನಿಲ್ಲುತ್ತದೆ. 1955ರಲ್ಲಿ ಪ್ರಾರಂಭವಾದ ಈ ಶಾಲೆಯಲ್ಲಿ ಈಗ 56 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇಲ್ಲಿನ ಉತ್ತಮ ಪಾಠ, ಕಲಿಕಾ ವಾತಾವ ರಣ, ಉತ್ತಮ ಪರಿಸರ, ಸರ್ಕಾರಿ ಶಾಲೆಯ ಬಗ್ಗೆ, ಗ್ರಾಮಸ್ಥರಿಗಿರುವ ಉತ್ಸಾಹ ಮಕ್ಕಳನ್ನು ಇಂತಹ ಶಾಲೆಗೆ ಸೇರಿಸಬೇಕು ಎನ್ನುವಂತೆ ಮಾಡಿದೆ. ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಶಾಲೆಗಳೆಂದರೆ ಎಲ್ಲರಿಗೂ ಅಸಡ್ಡೆ ಮನೋಭಾವ ತೋರುವವರೇ ಹೆಚ್ಚು. ಕೇವಲ ಖಾಸಗಿ ಶಾಲೆಗಳು ಎಲ್ಲರ ಚಿತ್ತ ನೆಟ್ಟಿರುವ ಇಂತಹ ಕಾಲದಲ್ಲಿ ಇಲ್ಲಿರುವ ಸರ್ಕಾರಿ ಶಾಲೆಯನ್ನು ಇಲ್ಲಿನ ಗ್ರಾಮಸ್ಥರು ಮಾತ್ರ ದೇವಾಲಯದಂತೆ ಕಾಣುತ್ತಾರೆ.

**ಉತ್ತಮ ಜೀವನದ ಕೌಶಲಗಳ ಬಗ್ಗೆ ಬೋಧನೆ**

ಬೆಂಗಳೂರು ಗ್ರಾಮಾಂತರ ಪ್ರಶಾಂತ ವಾತಾವರಣದಲ್ಲಿ ಇರುವ ಈ ಶಾಲೆ ಎಲ್ಲರನ್ನು ಆಕರ್ಷಿಸುತ್ತಿದೆ. ಮಧ್ಯಾಹ್ನದ ಬಿಸಿಯೂಟ ಮಾಡಲು ಮಕ್ಕಳಿಗೆ ಕಲ್ಲಿನಿಂದಲೇ ನಿರ್ಮಿಸಿರುವ ಊಟದ ಮೇಜನ್ನು ಕಟ್ಟಿಸಲಾಗಿದೆ. ಬೀದರ್ ಚಾಮರಾಜ ನಗರ ಶಾಲೆಯಲ್ಲಿ ಕಂಪ್ಯೂಟರ್ ಕಲಿಯಲು ಅವಕಾಶ ಕಲ್ಪಿಸಲಾಗಿದೆ. ಶಾಲೆಯ ಸುತ್ತಲೂ ಎತ್ತರದ ಕಾಂಪೌಂಡ್, ಒಳಗಡೆ ಶಾಲಾ ಮಕ್ಕಳಿಗಾಗಿ ಸಣ್ಣದಾದ ಗಣಪತಿ ದೇವಸ್ಥಾನ, ವಿಶಾಲವಾದ ಆಟದ ಮೈದಾನ, ನೀರಿನ ಟ್ಯಾಂಕ್, ಉತ್ತಮ ಶೌಚಾಲಯ ಇದೆ.

ಶಾಲೆಗೆ ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸುತ್ತಿರುವುದಕ್ಕೆ ಪೋಷಕರು ಸ್ವಯಂ ಪ್ರೇರಿತರಾಗಿ ಸುತ್ತಮುತ್ತಲಿನ ಹಳ್ಳಿಗಳಿಂದ ಪೋಷಕರು ಮಕ್ಕಳನ್ನು ಶಾಲೆಗೆ ಸೇರಿಸುತ್ತಿದ್ದಾರೆ. ಶ್ರೀ. ಶಿವಮೊಗ್ಗ ಈ ರಾಷ್ಟ್ರೀಯ ನಮ್ಮೂರ ಶಾಲೆ ಮಾದರಿ ಶಾಲೆಯಾಗಬೇಕು. ನಮ್ಮ ಮಕ್ಕಳು ಸರ್ಕಾರಿ ಶಾಲೆಯಲ್ಲೇ ಓದಿ ಸಮಾಜದಲ್ಲಿ ಉನ್ನತ ಸ್ಥಾನಮಾನ ಗಳಿಸಬೇಕು ಎನ್ನುವ ಆಸೆ ಗ್ರಾಮಸ್ಥರದ್ದು.

ಗ್ರಾಮಸ್ಥರ ಸಹಕಾರದ ಜೊತೆಗೆ ಇಲ್ಲಿನ ಶಿಕ್ಷಕರ ಸೇವಾ ಮನೋಭಾವ ಮಕ್ಕಳಲ್ಲಿನ ಜ್ಞಾನದ ಹಸಿವನ್ನು ಹೆಚ್ಚುವಂತೆ ಮಾಡುತ್ತಿದೆ. ಇದೆಲ್ಲದರ ಪರಿಣಾಮ ಖಾಸಗಿ ಶಾಲೆಗಳಿಗೆ ಸೆಡ್ಡು ಹೊಡೆಯುವಂತಿದೆ.


ಉದಯವಾಹಿನಿ ಚಿತ್ರ

ಬೆಂಗಳೂರು ಗ್ರಾಮಾಂತರ ಇಲ್ಲಿ ಮಕ್ಕಳಿಗೆ ಪಠ್ಯದ ಜೊತೆ ಉತ್ತಮ ನೈರ್ಮಲ್ಯ ಅಭ್ಯಾಸಗಳು, ತ್ಯಾಜ್ಯ ನಿರ್ವಹಣೆ, ನೀರಿನ ಮಿತಬಳಕೆ ಮತ್ತು ಸಂರಕ್ಷಣೆ, ಕೈತೋಟ ನಿರ್ವಹಣೆಯ ಮಹತ್ವ ಸೇರಿದಂತೆ ಉತ್ತಮ ಜೀವನದ ಕೌಶಲಗಳ ಬಗ್ಗೆಯೂ ಬೋಧನೆ ಮಾಡಲಾಗುತ್ತಿದೆ.

ಪ್ರತಿ ವರ್ಷದ ಸ್ವಾತಂತ್ರ್ಯ ದಿನಾಚರಣೆಯಂದು ಇಡೀ ಗ್ರಾಮಸ್ಥರು ಬೆಳಗಿನಿಂದ ಸಂಜೆಯವರೆಗೆ ಶಾಲೆಯಲ್ಲೇ ಇದ್ದು, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಅಂದು ಮಕ್ಕಳಿಗೆ ಮನೆಗಳಿಂದಲೇ ತರಹೇವಾರಿ ತಿನಿಸು ತರುತ್ತಾರೆ ಮತ್ತು 50ರಿಂದ 60 ಸಾವಿರದಷ್ಟು ಊರಿನವರೆಲ್ಲ ಸಂಗ್ರಹಿಸಿ ಶಾಲೆಗೆ ಕಲಿಕಾ ಪರಿಕರಗಳನ್ನು ಖರೀದಿಸಲು ನೀಡುತ್ತಾರೆ. ಮತ್ತು ಪ್ರತಿ ವರ್ಷ ಒಬ್ಬ ಸೈನಿಕನನ್ನು ಕರೆಸಿ ಸನ್ಮಾನ ಮಾಡುವುದು ವಾಡಿಕೆಯಾಗಿದೆ.

ಶಾಲೆಯ ಹಳೆಯ ವಿದ್ಯಾರ್ಥಿಗಳು ಸಹ ಶಾಲೆಗೆ ಬೇಕಾದ ಕಲಿಕಾ ಪರಿಕರಗಳನ್ನು ದೇಣಿಗೆ ರೂಪದಲ್ಲಿ ನೀಡಿ ಶಾಲೆಯ ಅಭಿವೃದ್ಧಿಗೆ ಸಹಕಾರ ನೀಡುತ್ತಾ ಬಂದಿದ್ದಾರೆ. ಶ್ರೀ. ಶಿವಮೊಗ್ಗ ಈ ರಾಷ್ಟ್ರೀಯ . ವಿದೇಶ ಮಕ್ಕಳು ಪ್ರವಾಸ ತೆರಳಲು ಸಹ ಗ್ರಾಮಸ್ಥರೇ ಹಣ ನೀಡಿ ಮಕ್ಕಳನ್ನು ಪ್ರವಾಸಕ್ಕೆ ಕಳಿಸುತ್ತಾರೆ.

ಗ್ರಾಮಸ್ಥರಾದ ವೆಂಕಟರಮಣಪ್ಪ ಮತ್ತು ಶ್ರೀನಿವಾಸ್ ರೆಡ್ಡಿ ಎಂಬುವವರು ತಲಾ ಒಂದು ಎಕರೆ ಜಮೀನನ್ನು ಶಾಲೆಗೆ ದಾನವಾಗಿ ನೀಡಿದ್ದಾರೆ. ಶಾಲೆಯಲ್ಲಿನ ಉತ್ತಮ ಪರಿಸರಕ್ಕಾಗಿ ಎರಡು ಬಾರಿ ಪರಿಸರ ಮಿತ್ರ ಪ್ರಶಸ್ತಿ ಪಡೆದಿದೆ.

### ಪರಿಸರ ಮಿತ್ರ ಪ್ರಶಸ್ತಿ

**ಗ್ರಾಮಸ್ಮರಾದ ವೆಂಕಟರಮಣಪ್ಪ ಮತ್ತು ಶ್ರೀನಿವಾಸ್ ರೆಡ್ಡಿ ಎಂಬುವವರು ತಲಾ ಒಂದು ಎಕರೆ ಜಮೀನನ್ನು ಶಾಲೆಗೆ ದಾನವಾಗಿ ನೀಡಿದ್ದಾರೆ. ಶಾಲೆಯಲ್ಲಿನ ಉತ್ತಮ ಪರಿಸರಕ್ಕಾಗಿ ಎರಡು ಬಾರಿ ಪರಿಸರ ಮಿತ್ರ ಪ್ರಶಸ್ತಿ ಪಡೆದಿದೆ. ಪಂಚಾಯಿತಿಯಿಂದ ವಿದ್ಯಾರ್ಥಿಗಳಿಗೆ ಬೇಕಾದ ಕ್ರೀಡಾ ಸಾಮಗ್ರಿಗಳನ್ನು ನೀಡಿ ವಿದ್ಯಾರ್ಥಿಗಳಲ್ಲಿನ ಕ್ರೀಡಾ ಮನೋಭಾವವನ್ನು ಉತ್ತೇಜಿಸುತ್ತಿದ್ದಾರೆ.**

> **ಪಂಚಾಯಿತಿಯಿಂದ ವಿದ್ಯಾರ್ಥಿಗಳಿಗೆ ಬೇಕಾದ ಕ್ರೀಡಾ ಸಾಮಗ್ರಿಗಳನ್ನು ನೀಡಿ ವಿದ್ಯಾರ್ಥಿಗಳಲ್ಲಿನ ಕ್ರೀಡಾ ಮನೋಭಾವವನ್ನು ಉತ್ತೇಜಿಸುತ್ತಿದ್ದಾರೆ. ಶಾಲೆಯ ಅಭಿವೃದ್ಧಿಗೆ ಶ್ರಮಿಸಿದ ಶಿಕ್ಷಕರನ್ನು ಮತ್ತು ಎಸ್ ಡಿಎಂಸಿ ಯವರನ್ನು ಇಡೀ ಗ್ರಾಮವೇ ಕೊಂಡಾಡುತ್ತಿದೆ** -ಹನುಮಂತರಯಪ್ಪ. ಮುಖ್ಯೋಪಾಧ್ಯಾಯ

---

# ಮಿನಿ ನ್ಯೂಸ್

## ಭೂ ಸ್ವಾಧೀನ ಪರಿಹಾರ ತಾರತಮ್ಯ

• **ಉದಯವಾಹಿನಿ ಶಿರಾ**

ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕಾಗಿ ಭೂ ಸ್ವಾಧೀನ ಪಡಿಸಿಕೊಂಡು ಪರಿಹಾರ ನೀಡುವ ವಿಚಾರದಲ್ಲಿ ನಡೆಯುತ್ತಿರುವ ತಾರತಮ್ಯ ಸರಿಪಡಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಆಂಧ್ರಪ್ರದೇಶದ ವಿಶಾಖಪಟ್ಟಣದಿಂದ ಕರ್ನಾಟಕದ ಮಂಗಳೂರಿನವರೆಗೆ ಹೊಸದಾಗಿ ನಿರ್ಮಾಣ ಮಾಡುತ್ತಿರುವ ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕಾಗಿ ಈಗಾಗಲೇ ಭೂ ಸ್ವಾಧೀನ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದ್ದು ಭೂಮಿ ಕಳೆದುಕೊಳ್ಳುವ ರೈತರಿಗೆ ಪರಿಹಾರ ನೀಡುವ ವಿಚಾರದಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಪಕ್ಕದ ಆಂಧ್ರಪ್ರದೇಶದಲ್ಲಿ ಹೆಚ್ಚಿನ ಪರಿಹಾರ ನೀಡುತ್ತಿದ್ದು ಇಲ್ಲಿ ಕಡಿಮೆ ಪರಿಹಾರ ನೀಡುವ ಮೂಲಕ ವಂಚಿಸುತ್ತಿದ್ದಾರೆ ಎಂದು ರೈತರು ದೂರಿದರು. ಹೆಚ್ಚಿನ ಪರಿಹಾರಕ್ಕೆ ಒತ್ತಾಯಿಸಿ ಶಾಸಕ ಟಿ.ಬಿ.ಜಯಚಂದ್ರ ಸಮ್ಮುಖದಲ್ಲಿ ಕಾಂಗ್ರೆಸ್ ಮುಖಂಡ ಡಿ.ಸಿ.ಅಶೋಕ್, ಗಿಡಗನಹಳ್ಳಿ ಚಂದ್ರೇಗೌಡ ಮೊದಲಾದವರು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರಿಗೆ ಮನವಿ ಸಲ್ಲಿಸಿದರು.

## ಪ್ರವಾಸಕ್ಕೆ ಬಂದಾಗ ಘೋರ ದುರಂತ ಬಸ್‌ನಿಂದ ಬಿದ್ದು ವಿದ್ಯಾರ್ಥಿ ದಾರುಣ ಸಾವು

• **ಉದಯವಾಹಿನಿ ಮೈಸೂರು**

ಮೈಸೂರು ಜಿಲ್ಲೆಯ ಪ್ರವಾಸಕ್ಕೆ ಎಂದು ತಮಿಳುನಾಡು ಮೂಲದ ಕಾಲೇಜು ವಿದ್ಯಾರ್ಥಿಗಳ ತಂಡ ಬಂದು ಆಗಮಿಸಿತ್ತು.

ಈ ವೇಳೆ ವಿದ್ಯಾರ್ಥಿ ಒಬ್ಬ ಬಸ್ ಬಾಗಿಲ ಬಳಿ ನಿಂತಾಗ ಡೋರ್ ಲಾಕ್ ಮಾಡದೆ ಇದ್ದಿದ್ದರಿಂದ, ಆಯತಪ್ಪಿ ಕೆಳಗೆ ಬಿದ್ದು ಸಾವನಪ್ಪಿರುವ ಘಟನೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ನಡೆದಿದೆ. ತಮಿಳುನಾಡು ಮೂಲದ ದೀನಾ ದಯಾಳ್ (21) ಎಂಬ ವಿದ್ಯಾರ್ಥಿ ಮೃತ ದುರ್ದೈವಿ ಎನ್ನಲಾಗಿದೆ. ಬೈಲುಕೊಪ್ಪೆ ಗೋಲ್ಡನ್ ಟೆಂಪಲ್ ವೀಕ್ಷಿಸಲು ಹೋಗುವಾಗ ಈ ಒಂದು ಘಟನೆ ನಡೆದಿದೆ. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬೈಲುಕುಪ್ಪೆ ಗೋಲ್ಡನ್ ಟೆಂಪಲ್ ನೋಡಲು ತೆರಳುವ ವೇಳೆ ಈ ಘಟನೆ ನಡೆದಿದೆ. ಕರ್ನಾಟಕ ಬಸ್ ಡೋರ್ ಲಾಕ್ ಆಗದ ಹಿನ್ನೆಲೆಯಲ್ಲಿ ವಿದ್ಯಾರ್ಥಿ ಆಯತಪ್ಪಿ ಕೆಳಗೆ ಬಿದ್ದಿದ್ದಾನೆ. ಕೆಳಗೆ ಬಿದ್ದ ಪರಿಣಾಮ ಬಲವಾದ ಪೆಟ್ಟು ಬಿದ್ದು ದೀನಾ ದಯಾಳ್ ಸಾವನಪ್ಪಿದ್ದಾನೆ. ಘಟನೆ ಕುರಿತಂತೆ ಬೆಲುಕುಪ್ಪೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬಾಣಂತಿಯರ ಸರಣಿ ಸಾವು: ವರದಿ ಸಲ್ಲಿಕೆ ಬಳಿಕ ಕಠಿಣ ಕ್ರಮ: ಸಿಎಂ

• **ಉದಯವಾಹಿನಿ ಕೊಳ್ಳೇಗಾಲ**

ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಐವರು ಬಾಣಂತಿಯರು ಮೃತಪಟ್ಟಿರುವ ವಿಚಾರವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು ಸಚಿವ ಸಂಪುಟದಲ್ಲಿ ಚರ್ಚೆ ನಡೆಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಶನಿವಾರ ಕೊಳ್ಳೇಗಾಲ ತಾಲ್ಲೂಕಿನ ನರಿಪುರ ಹೆಲಿಪ್ಯಾಡ್‌ನಲ್ಲಿ ಮಾತನಾಡಿದ ಅವರು, ಬಳ್ಳಾರಿ ಜಿಲ್ಲಾ ಆಸ್ಪತ್ರೆಗೆ ಆರೋಗ್ಯ ಸಚಿವರು ಸೇರಿದಂತೆ ಆರೋಗ್ಯ ಇಲಾಖೆ ಹಿರಿಯ ಅಧಿಕಾರಿಗಳ ತಂಡ ಭೇಟಿನೀಡಿದ್ದು ಮಾಹಿತಿ ಕಲೆ ಹಾಕಿದ್ದಾರೆ.

ಔಷಧ ಸೇವನೆಯಿಂದ ಬಾಣಂತಿಯರ ಸಾವು ಸಂಭವಿಸಿರಬಹುದು ಎಂಬ ಕಾರಣಕ್ಕೆ ಈಗಾಗಲೇ ಜಿಲ್ಲಾ ಡ್ರಗ್ ಕಂಟ್ರೋಲರ್‌ನ್ನು ಅಮಾನತುಗೊಳಿಸಲಾಗಿದೆ ಎಂದರು. ಆಸ್ಪತ್ರೆಗೆ ಔಷಧ ಪೂರೈಕೆ ಮಾಡಿದ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ. ಬಾಣಂತಿಯರ ಸಾವಿಗೆ ಕಾರಣ ತಿಳಿಯಲು ಅಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದ್ದು ವರದಿ ಸಲ್ಲಿಕೆಯಾದ ಬಳಿಕ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



ಉದಯವಾಹಿನಿ ಚಿತ್ರ

## ಅಂಬೇಡ್ಕರ್ ಭವನಕ್ಕೆ ನಿವೇಶನ ಮಂಜೂರಾತಿಗೆ ಒತ್ತಾಯ

• **ಉದಯವಾಹಿನಿ ಬೇತಮಂಗಲ**

ರಾಜ್ಯದ ಪ್ರಥಮ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಅವರ ಹುಟ್ಟೂರು ಕ್ಯಾಸಂಬಳ್ಳಿಯಲ್ಲಿ ಅಂಬೇಡ್ಕರ್ ಪ್ರತಿಮೆ, ಭವನ ಮತ್ತು ಗ್ರಂಥಾಲಯ ನಿರ್ಮಿಸಲು ನಿವೇಶನ ಮಂಜೂರು ಮಾಡಬೇಕು ಎಂದು ಎವೈವಿಕೆ ಅಧ್ಯಕ್ಷ ಜೈ ಭೀಮ್ ಶ್ರೀನಿವಾಸ್ ನೇತೃತ್ವದಲ್ಲಿ ಒತ್ತಾಯಿಸಲಾಯಿತು.ಈ ವೇಳೆ ಪ್ರತಿಕ್ರಿಯಿಸಿದ ಅಂಬೇಡ್ಕರ್ ಯುವ ವೇದಿಕೆ ಸಂಸ್ಥಾಪಕ ಜೈ ಭೀಮ್ ಶ್ರೀನಿವಾಸ್ ಮಾತನಾಡಿ, ರಾಜ್ಯದ ಪ್ರಥಮ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರ ಹುಟ್ಟೂರು ಕ್ಯಾಸಂಬಳ್ಳಿಯಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಗ್ರಂಥಾಲಯ ನಿರ್ಮಿಸಲು 30 ಗುಂಟೆ ಜಮೀನು ಮಂಜೂರು ಮಾಡಬೇಕು ಎಂದು ಒತ್ತಾಯಿಸಿದರು.

ಬೆಂಗಳೂರು ಗ್ರಾಮಾಂತರ ಬೀದರ್ ಚಾಮರಾಜ ನಗರ ಬ ಈ ವೇಳೆ ಕಂದಾಯ ಅಧಿಕಾರಿ ಲೋಕೇಶ್ ಮಾತನಾಡಿ, ಈ ಮನವಿಯನ್ನು ತಹಶೀಲ್ದಾರ್‌ಗೆ ಕಳುಹಿಸಲಾಗುವುದು. ಖಾಲಿ ಇರುವ ಜಾಗದಲ್ಲಿ ಅಂಬೇಡ್ಕರ್ ಭವನ ಮತ್ತು ಇತರ ಅಭಿವೃದ್ಧಿಗೆ ಜಮೀನು ಮಂಜೂರು ಮಾಡಲು ಪತ್ರ ಬರೆಯಲಾಗುವುದು ಎಂದು ಭರವಸೆ ನೀಡಿದರು. ಈ ವೇಳೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುನೀತಾ ಆನಂದ ರೆಡ್ಡಿ, ಸದಸ್ಯರಾದ ಚಂದ್ರಶೇಖರ್, ರಾಜೇಂದ್ರರೆಡ್ಡಿ, ಗಂಗಾಧರ್, ವೆಂಕಟೇಶಪ್ಪ, ಮಾಜಿ ಸದಸ್ಯ ಗೋಪಾಲ್, ಆನಂದ್, ಕಣ್ಣೂರು ರಾಜೇಶ್, ಚರಣ್ ಗೌಡ, ಸಂಜು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

ಅಂತರಾಳದಿಂದ.. EDITORIAL

# ಜನಕಲ್ಯಾಣೋತ್ಸವ ಯಶಸ್ಸು

## ಜೆಡಿಎಸ್ ಗಾಯಗಳಿಗೆ ಬರೆ

ಉಪಚುನಾವಣೆಯ ಗೆಲುವನ್ನು ಕಾಂಗ್ರೆಸ್ ಪಕ್ಷ ಅದ್ದೂರಿಯಾಗಿ ಆಚರಿಸಿಕೊಂಡಿದೆ. ಉಪಚುನಾವಣೆಯ ಫಲಿತಾಂಶದ ಬಳಿಕವಾದರೂ, ಕಾಂಗ್ರೆಸ್‌ನೊಳಗಿನ ಬಿರುಕು ಬಹಿರಂಗವಾಗಿ ಮಾಧ್ಯಮಗಳಿಗೆ ಆಹಾರವಾಗುತ್ತದೆ ಎಂದು ಕಾದುಕೊಂಡಿದ್ದ ಬಿಜೆಪಿ ವರಿಷ್ಠರಿಗೆ ಜನಕಲ್ಯಾಣೋತ್ಸವದ ಯಾತಸ್ಸು ಭಾರೀ ನಿರಾಶೆಯನ್ನು ತಂದಿದೆ. ರಾಜ್ಯದಲ್ಲಿ ಬಿಜೆಪಿ ಒಡೆದ ಮನೆಯಾಗಿ ಸುದ್ದಿಯಲ್ಲಿರುವ ಹೊತ್ತಿನಲ್ಲಿ ಬೃಹತ್ ಜನಕಲ್ಯಾಣೋತ್ಸವವನ್ನು ಹಮ್ಮಿಕೊಂಡು, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿರುವುದು ಜೆಡಿಎಸ್, ಬಿಜೆಪಿ ಎರಡೂ ಪಕ್ಷಗಳ ಗಾಯಗಳಿಗೆ ಬರೆ ಎಳೆದಂತಾಗಿದೆ. ಉಪಚುನಾವಣೆಯ ಗೆಲುವಿನಿಂದ ನಾವು ಮೈಮರೆತು ಕುಳಿತಿಲ್ಲ ಎನ್ನುವುದನ್ನು ಬೃಹತ್ ಸಮಾವೇಶ ಹಮ್ಮಿಕೊಳ್ಳುವ ಮೂಲಕ ಕಾಂಗ್ರೆಸ್ ಸ್ಪಷ್ಟಪಡಿಸಿದ ಮಾತ್ರವಲ್ಲ, ಪಕ್ಷವನ್ನು ತಳಮಟ್ಟದಲ್ಲಿ ಇನ್ನಷ್ಟು ಬಲಪಡಿಸಲು ಪೂರಕವಾಗಿ ಬಳಸಿಕೊಂಡಿದೆ. ಇಡೀ ಜನಕಲ್ಯಾಣೋತ್ಸವ ಜೆಡಿಎಸ್‌ನ್ನೇ ಗುರಿಯಾಗಿಸಿಕೊಂಡಿರುವುದು ಇನ್ನೊಂದು ವಿಶೇಷ ಜೆಡಿಎಸ್‌ನ ಕಾರಣದಿಂದ ಬಿಜೆಪಿಯ ಕಡೆಗೆ ವಾಲುತ್ತಿರುವ ಒಕ್ಕಲಿಗ ಮತಗಳನ್ನು ತನ್ನದಾಗಿಸುವ ಪ್ರಧಾನ ಗುರಿಯನ್ನು ಈ ಸಮಾವೇಶ ಹೊಂದಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಉಪಚುನಾವಣೆಯಲ್ಲಿ ಒಕ್ಕಲಿಗರ ಮತಗಳಿಗಾಗಿ ಡಿಕೆಶಿ ಮತ್ತು ಎಚ್‌ಡಿಕೆ ನಡುವೆ ಭಾರೀ ಹಗ್ಗಜಗ್ಗಾಟ ನಡೆದಿತ್ತು. ಚನ್ನಪಟ್ಟಣದಲ್ಲಿ ಜೆಡಿಎಸ್‌ಗೆ ಒಕ್ಕಲಿಗ ಸಮುದಾಯ ಕೂಡ ಕೈಕೊಟ್ಟಿತು. ಕಬ್ಬಿಣ ಕಾದಾಗಲೇ ಬಡಿಯಬೇಕು ಎಂಬಂತೆ. ಸೋಲಿನ ಬೆನ್ನಿಗೇ ಹಾಸನದಲ್ಲಿ ಬೃಹತ್ ಜನ ಕಲ್ಯಾಣೋತ್ಸವ ಮಾಡಿ ಜೆಡಿಎಸ್‌ನ ಕುಟುಂಬ ರಾಜಕಾರಣಕ್ಕೆ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.

> ಜೆಡಿಎಸ್‌ನ ದೇಹಕ್ಕೆ ಆರೆಸ್ಸೆಸ್‌ನ ತಲೆಯನ್ನು ಜೋಡಿಸಿ ನಡೆಸಿದ ಸರ್ಜರಿಗೆ ರಾಜ್ಯದಲ್ಲಿ ಎನ್‌ಡಿಎ ಎಂದು ಕರೆಯಲಾಗಿದೆ. ಅಂದರೆ ತಲೆ ಹೇಳಿದಂತೆ ದೇಹ ಕೇಳಲೇ ಬೇಕಾಗುತ್ತದೆ. ತಲೆಯ ಆಲೋಚನೆಗೆ ತಕ್ಕಂತೆ ದೇಹ ರೂಪಾಂತರಗೊಳ್ಳಲೇ ಬೇಕು. ಚನ್ನಪಟ್ಟಣದ ಸೋಲಿನ ಬಳಿಕ ಈ ರೂಪಾಂತರ ಭಾರೀ ವೇಗವನ್ನು ಪಡೆದಿದೆ. ಈಗಾಗಲೇ ನಿಖಿಲ್ ಅವರು ಆರೆಸ್ಸೆಸ್ ಮುಖಂಡ ಸಂತೋಷ ಅವರನ್ನು ಭೇಟಿಯೂ ಆಗಿದ್ದಾರೆ. ಹೀಗೆ ಅದಲ್ಲಿ ಮುಂದಿನ ವಿಧಾನಸಭಾ ಚುನಾವಣೆಯ ಹೊತ್ತಿಗೆ ನಿಖಿಲ್ ಅವರು ಜೆಡಿಎಸ್‌ನ್ನು ಬಿಜೆಪಿಯ ಜೊತೆಗೆ ವಿಲೀನಗೊಳಿಸಿ, ಬಿಜೆಪಿಯಿಂದಲೇ ಸ್ಪರ್ಧಿಸುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಜೆಡಿಎಸ್‌ನಲ್ಲಿ ಗೊಂದಲದಲ್ಲಿರುವ ಒಕ್ಕಲಿಗ ಸಮುದಾಯದ ಕಾರ್ಯಕರ್ತರನ್ನು ತನ್ನೆಡೆಗೆ ಸೆಳೆಯಲು ಜನಕಲ್ಯಾನೋತ್ಸವದ ಮೂಲಕ ಡಿಕೆಶಿ ಅವರು ಪ್ರಯತ್ನಿಸಿದ್ದಾರೆ.

ಉಪಚುನಾವಣೆಯಲ್ಲಿ ನಿಖಿಲ್ ಕುಮಾರ ಸ್ವಾಮಿಯ ಪರವಾಗಿ ದೇವೇಗೌಡರನ್ನೇ ಜೆಡಿಎಸ್ ಬೀದಿಗಿಳಿಸಿತ್ತು ಸಾರ್ವಜನಿಕ ಸಮಾವೇಶದಲ್ಲಿ ದೇವೇಗೌಡರು ಸಿದ್ದರಾಮಯ್ಯ ಅವರ ಗರ್ವಭಂಗಕ್ಕೆ ಕರೆ ನೀಡಿದ್ದರು.

ಇದೀಗ ಆ ಕರೆಗೆ, ಹಾಸನ ಸಮಾವೇಶದ ಮೂಲಕ ಪ್ರತಿ ಉತ್ತರಿಸಿದ್ದಾರೆ. ಅಷ್ಟೇ ಅಲ್ಲ ಜೆಡಿಎಸ್‌ನಿಂದ ದೂರ ಸರಿಯುತ್ತಿರುವ ಒಕ್ಕಲಿಗ ಮತಗಳು ಬಿಜೆಪಿಯ ಕಡೆಗೆ ಹರಿದು ಹೋಗದಂತೆ ಬೇಲಿ ಹಾಕುವ ಪ್ರಯತ್ನವನ್ನು ಈ ಸಮಾವೇಶದ ಮೂಲಕ ಮಾಡಿದ್ದಾರೆ.

ಸಮಾವೇಶದಲ್ಲಿ ದೇವೇಗೌಡರನ್ನು ಗುರಿಯಾಗಿಸಿಕೊಂಡು ಸಿದ್ದರಾಮಯ್ಯ ಮಾಡಿದ ಆರೋಪಗಳಲ್ಲಿ ಹುರುಳಿಲ್ಲದೇ ಇಲ್ಲ. ನಾನು ಸಿದ್ದರಾಮಯ್ಯರನ್ನು ಬೆಳೆಸಿದೆ. ಅವರು ನಮಗೆ ದ್ರೋಹ ಮಾಡಿದರು' ಎಂದು ಪದೇ ಪದೇ ನೆನಪಿಸುವ ದೇವೇಗೌಡರು. ಮತ್ತು ಅವರ ಮಕ್ಕಳಿಗೆ ಕೆಲವು ವಾಸ್ತವಗಳನ್ನು ತೆರೆದಿಟ್ಟಿದ್ದಾರೆ. ಸಿದ್ದರಾಮಯ್ಯ ಅವರ ಮುತ್ಸದ್ದಿತನ ಜೆಡಿಎಸ್‌ನ್ನು ಕೂಡ ಬೆಳೆಸಿದೆ. ಸಿದ್ದ ರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗದಂತೆ ನೋಡಿಕೊಂಡು, ಅವರಿಗೆ ಪಕ್ಷ ತೊರೆಯುವ ಸ್ಥಿತಿ ನಿರ್ಮಾಣ ಮಾಡಿರುವುದು ಕೂಡ ದೇವೇಗೌಡರು ಎನ್ನುವುದನ್ನು ಜನರು ಮರೆತಿಲ್ಲ ಇದೇ ಸಂದರ್ಭದಲ್ಲಿ ಜೆಡಿಎಸ್‌ನ್ನು ನಂಬಿ ಅದನ್ನು ಬೆಳೆಸಿದ ಅಲ್ಪಸಂಖ್ಯಾತ ಸಮುದಾಯಕ್ಕೆ ಪ್ರತಿಯಾಗಿ ಕೊಟ್ಟದ್ದೇನು? ಎನ್ನುವ ಪ್ರಶ್ನೆಯನ್ನು ದೇವೇಗೌಡರಿಗೆ ಸಿದ್ದರಾಮಯ್ಯ ನೆನಪಿಸಿದ್ದಾರೆ. ದೇವೇಗೌಡರನ್ನು ಪ್ರಧಾನಿ ಮಾಡುವಲ್ಲಿ ಕುಮಾರಸ್ವಾಮಿಯನ್ನು ಎರಡು ಬಾರಿ ಮುಖ್ಯಮಂತ್ರಿಯಾಗಿಸುವಲ್ಲಿ ನಾಡಿನ ಅಲ್ಪಸಂಖ್ಯಾತರ ಪಾತ್ರವೂ ಬಹುದೊಡ್ಡದಿದೆ. ಆದರೆ ಅಂತಿಮವಾಗಿ ತನ್ನನ್ನು ಬೆಳೆಸಿದ ಅಲ್ಪಸಂಖ್ಯಾತರನ್ನು ಸಾಮೂಹಿಕವಾಗಿ ಆರೆಸ್ಸೆಸ್‌ಗೆ ಬಲಿಕೊಡಲು ಮುಂದಾದರು. ಅದರ ಫಲವನ್ನೇ ಅವರು ಕಳೆದ ಉಪಚುನಾವಣೆಯಲ್ಲಿ ಅನುಭವಿಸಿದರು. ದೇವೇಗೌಡರನ್ನೇ ನಂಬಿದ್ದ ಎಂ.ಪಿ. ಪ್ರಕಾಶ್, ದತ್ತಾರಂತಹ ಮುತ್ಸದ್ದಿ ನಾಯಕರಿಗೆ ಕುಮಾರಸ್ವಾಮಿ ಅವರು ಎಂತಹ ಸ್ಥಿತಿಯನ್ನು ತಂದೊಡ್ಡಿದರು ಎನ್ನುವುದನ್ನೂ ನಾಡು ಕಂಡಿದೆ. ಒಂದು ವೇಳೆ ಸಿದ್ದರಾಮಯ್ಯ ಜೆಡಿಎಸ್‌ನಲ್ಲೇ ಮುಂದುವರಿದಿದ್ದರೆ ಅವರು ಈ ರಾಜ್ಯದ ಮುಖ್ಯಮಂತ್ರಿಯಾಗುವ ಸಾಧ್ಯತೆಗಳೇ ಇದ್ದಿರಲಿಲ್ಲ. ಪುತ್ರವ್ಯಾಮೋಹಿಯಾಗಿರುವ ದೇವೇಗೌಡರು ಅದಕ್ಕೆ ಅವಕಾಶವನ್ನು ನೀಡುತ್ತಿರಲಿಲ್ಲ. ಇಂದು ಕಾಂಗ್ರೆಸ್ ವಿರುದ್ಧ ದಾಳಿ ಮಾಡುತ್ತಿರುವ ದೇವೇಗೌಡರು, ತಾನು ರಾಜ್ಯ ಸಭಾ ಸದಸ್ಯರಾಗಿರುವುದೇ ಕಾಂಗ್ರೆಸ್ ಪಕ್ಷದ ಋಣದಿಂದ ಎನ್ನುವುದನ್ನು ಮರೆತಿದ್ದಾರೆ. ಸೋನಿಯಾಗಾಂಧಿಯವರು ಬೆಂಬಲಿಸುವ ಭರವಸೆ ನೀಡಿದ ಕಾರಣಕ್ಕಾಗಿ ಅಪ್ಪಾಜಿ ರಾಜ್ಯಸಭೆಗೆ ಸ್ಪರ್ಧಿಸುತ್ತಿದ್ದಾರೆ ಎಂದು ಈ ಹಿಂದೆ ಕುಮಾರಸ್ವಾಮಿಯವರೇ ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದರು. ಕಾಂಗ್ರೆಸ್ ಪಕ್ಷದ ಬೆಂಬಲ ದೇವೇಗೌಡರು ರಾಜ್ಯಸಭೆಗೆ ಪ್ರವೇಶಿಸುವಂತೆ ಮಾಡಿತು. ಆದರೆ ಬಳಿಕ ಬೆಂಬಲಿಸಿದ ಕಾಂಗ್ರೆಸ್‌ನ್ನು ಮರೆತು, ದೇವೇಗೌಡರು ತನ್ನನ್ನು ವಿರೋಧಿಸಿದ ಬಿಜೆಪಿಯೊಂದಿಗೆ ಕೈ ಜೋಡಿಸಿದರು. ಹೀಗಿರುವಾಗ, ಸಿದ್ದರಾಮಯ್ಯ ಅವರು ನನಗೆ ವಿಶ್ವಾಸಘಾತ ಮಾಡಿದರು ಎನ್ನುವ ನೈತಿಕತೆ ದೇವೇಗೌಡರಿಗೆಲ್ಲಿದೆ? ರಾಜ್ಯದಲ್ಲಿ ಜೆಡಿಎಸ್ ನೊಳಗೆ ನಾಯಕರಾಗಿ ದೇವೇಗೌಡರ ಕುಟುಂಬವನ್ನು ಹೊರತು ಪಡಿಸಿದ ಇನ್ನೊಬ್ಬ ಇಲ್ಲ. ಈ ಕಾರಣದಿಂದಲೇ ಗೌಡ ಕುಟುಂಬ ಲೈಂಗಿಕ ಹಗರಣ ಹೊರ ಬಿದ್ದ ಬೆನ್ನಿಗೇ, ಅದರ ಕಳಂಕವನ್ನು ಇಡೀ ಜೆಡಿಎಸ್ ಹೊತ್ತುಕೊಳ್ಳಬೇಕಾಯಿತು. ಇದು ಜೆಡಿಎಸ್ ಕಾರ್ಯಕರ್ತರನ್ನು ತೀವ್ರ ಮುಜುಗರಕ್ಕೆ ತಳ್ಳಿದೆ. ಈ ಕಳಂಕದಿಂದ ಪಾರಾಗಲು ಅವರು ಪರ್ಯಾಯ ದಾರಿಯನ್ನು ಹುಡುಕುತ್ತಿದ್ದಾರೆ. ಅವರಿಗೆ ಉಳಿದಿರುವುದು ಬಿಜೆಪಿ ಮಾತ್ರ. ಹೀಗೆ ಬಿಜೆಪಿಯ ಕಡೆಗೆ ಮುಖ ಮಾಡಿರುವ ಜೆಡಿಎಸ್ ಕಾರ್ಯಕರ್ತರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಡಿ.ಕೆ. ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಹಾಸನದಲ್ಲಿ ಭಾಗಶಃ ಯಶಸ್ವಿಯಾಗಿದೆ.

# ರಾಮಾಯಣ



## ರಾಮ ಲಕ್ಷರು ಮಿಥಿಲಾ ಪಟ್ಟಕ್ಕೆ ಹೋದದ್ದು

• ಹಿಂದಿನ ಸಂಚಿಕೆಯಿಂದ 32 ನೆಯ ಅಧ್ಯಾಯ


ಇನ್ನು ಹನ್ನೆರಡು ದಿವಸಗಳಲ್ಲಿ ನನ್ನ ಯಾಗವು ಸಮಾಪ್ತಿಯಾಗುವುದು ಈ ಯಾಗದಲ್ಲಿ ಹವಿಸ್ಸಿನ ಭಾಗವನ್ನು ತೆಗೆದುಕೊಳ್ಳುವ ದೇವತೆಗಳನ್ನು ನೀವು ನೋಡಬಹುದು ಎಂದು ನುಡಿದನು ಮತ್ತೆ ಕೈ ಮುಗಿದುಕೊಂಡು ವಿಶ್ವಾಮಿತ್ರ ಮುನೀಶ್ವರರೆ, ಇವರಾರು ಈ ಕುಮಾರರು ದೇವತೆಗಳಿಗೆ ಸಮಾನ ಪರಾಕ್ರಮವುಳ್ಳವರಾಗಿಯೂ ಮದ್ದಾನ ಸಿಂಹಗಳ ಹಾಗೆ ಗಮನಚಾತುರವುಳ್ಳರಾಗಿಯೂ ಮಹಾವೃಷಭ ಮತ್ತು ಕೊಬ್ಬಿದ ವ್ಯಾಘ್ರದಂತೆ ಪರಾಕ್ರಮ ವುಳ್ಳವರಾಗಿಯೂ ಕಮಲದ ಎಸಳುಗಳಂತೆ ವಿಶಾಲವಾದ ಕಣ್ಣುಗಳುಳ್ಳವ ರಾಗಿಯೂ ಖಡ್ಗ ಬಿಲ್ಲು ಬತ್ತಳಿಕೆಗಳನ್ನು ಧರಿಸಿಕೊಂಡು ರೂಪಿನಲ್ಲಿ ಅಶ್ವಿನೀದೇವತೆಗಳಿಗೆ ಸಮಾನರಾಗಿ ನವಯೌವನ ವುಳ್ಳವರಾಗಿಯೂ ದೈವಗತಿಯಿಂದ ಸ್ವರ್ಗಲೋಕದಿಂದ ಬಂದ ದೇವತೆ ಗಳಂತೆಯೂ ಪ್ರಕಾಶಿಸುತ್ತಿದ್ದಾರೆ. ಇವರು ಯಾರ ಮಕ್ಕಳು ಏನುಕಾರಣ ಇಲ್ಲಿಗೆ ಬಂದರು ಸೂರಚಂದ್ರರು ಅಂತರಿಕ್ಷಮಾರ್ಗವನ್ನು ಬೆಳಗಿಸುವಂತೆ ಇವರು ತಮ್ಮ ತನುಕಾಂತಿಯಿಂದ ದಶದಿಕ್ಕು ಗಳನ್ನೂ ಬೆಳಗಿಸುತ್ತಿದ್ದಾರೆ. ಆಕಾರದಿಂದಲೂ ಮನೋಭಾವದಿಂದಲೂ ನಡತೆಯಿಂದಲೂ ಇವರಿಬ್ಬರೂ ಅನ್ಯೋ ಸಮಾನರಾಗಿದ್ದಾರೆ. ಇವರು ಯಾರೆಂಬುದನ್ನು ತಿಳುಹಿಸಬೇಕು ಎಂದು ಕೇಳಿದನು. ಆಗ ವಿಶ್ವಾಮಿತ್ರನು ಆತನನ್ನು ನೋಡಿ ಎಲೈ ಜನಕರಾಯನೆ, ಈ ಕುಮಾರರು ದಶರಥ ರಾಯನ ಮಕ್ಕಳು. ಇವರನ್ನು ನನ್ನ ಯಾಗ ರಕ್ಷಣಾರ್ಥವಾಗಿ ಕರೆತಂದೆನು ಎಂದು ನುಡಿದು ಅವರ ಪೂರ್ವೋತ್ತರಗಳನ್ನೂ ಸಿದ್ಧಾಶ್ರಮಕ್ಕೆ ಬಂದ ವೃತ್ತಾಂತವನ್ನೂ ರಾಕ್ಷಸರ ಸಂಹಾರವನ್ನು ಮಾಡಿದ ಬಗೆಯನ್ನೂ ವಿಶಾಲಪುರಿಯಲ್ಲಿ ಒಂದು ರಾತ್ರಿ ಇದ್ದ ವೃತ್ತಾಂತವನ್ನೂ ಅಹಲ್ಯಾ ದರ್ಶನ ಮಾಡಿದ ಪ್ರಸ್ತಾವವನ್ನೂ ಗೌತಮಮುನಿಯೊಡನೆ ಸಂಭಾಷಣೆ ಮಾಡಿದ ವೃತ್ತಾಂತವನ್ನೂ ಹೇಳಿದನು. ಅನಂತರ ಇವರು ನಿನ್ನ ಬಳಿಯಲ್ಲಿರುವ ಧನುಸ್ಸಿನ ಸತ್ತ್ವವನ್ನು ನೋಡಬೇಕೆಂದು ಬಂದರು ಎಂದು ನುಡಿದು ಸುಮ್ಮನಾದನು.

### ವಿಶ್ವಾಮಿತ್ರನು ವಸಿಷ್ಠನ ಬಳಿಗೆ ಹೋದ ವೃತ್ತಾಂತ

ಮಹಾತ್ಮನಾದ ವಿಶ್ವಾಮಿತ್ರನ ಮಾತನ್ನು ಕೇಳಿ ಮಹಾತಪಸ್ವಿಯಾದ ಗೌತಮಮುನೀಶ್ವರನ ಹಿರಿಯಮಗನಾದ ಶತಾನಂದಮುನಿಯ ಶರೀರವೆಲ್ಲವೂ ಪುಲಕಿತವಾಯಿತು. ಆತನು ಸುಖವಾಗಿ ಕುಳಿತಿದ್ದ ರಾಮಲಕ್ಷ್ಮಣರನ್ನು ನೋಡುತ್ತ ವಿಶ್ವಾಮಿತ್ರಮುನೀಶ್ವರನನ್ನು ಕುರಿತು ಮುನೀಶ್ವರರೆ. ಬಹುಕಾಲ ತಪಸ್ಸು ಮಾಡಿ ಮಹಾಕೀರ್ತಿವಂತೆಯಾದ ನನ್ನ ತಾಯಿ ಅಹಲ್ಯಾದೇವಿಯನ್ನು ರಘುನಾಥನಿಗೆ ತೋರಿಸಿದಿರಾ ಆಕೆಯು ಶ್ರೀರಾಮನಿಗೆ ಕಂದಮೂಲಫಲಾಹಾರಗಳಿಂದ ಸತ್ಕಾರ ಗಳನ್ನು ಮಾಡಿದಳೆ ನನ್ನ ತಾಯಿಗೆ ದೇವೇಂದ್ರನು ಮಾಡಿದ ಉಪದ್ರವವನ್ನು ಈತನಿಗೆ ತಿಳುಹಿಸಿದಿರಾ

ಮುಂದುವರಿಯುವುದು...

# ಈ ಕೆಳಗಿನ ಆಹಾರಗಳನ್ನು ಒಟ್ಟಿಗೆ ಸೇವಿಸಬೇಡಿ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ



ಹಾಲಿನೊಂದಿಗೆ ಹುಳಿ ಪದಾರ್ಥಗಳು. ಕರೆದ ಆಹಾರಗಳು ಮತ್ತು ಹಣ್ಣುಗಳು ಹಾನಿಕಾರಕ. ಹಾಲಿನೊಂದಿಗೆ ಮೊಸರು, ಉಪ್ಪು, ಹುಣಸೆಹಣ್ಣು, ಕಲ್ಲಂಗಡಿ, ಮಸಾಲೆಯುಕ್ತ, ಹುಳಿ ಆಹಾರವನ್ನು ಸೇವಿಸಬೇಡಿ. ಮೊಸರು ಜೊತೆಗೆ ಪಾಯಸ, ಪನೀರ್, ಹಾಲು, ಕಲ್ಲಂಗಡಿ, ಬಾಳೆಹಣ್ಣು, ಮೂಲಂಗಿ, ಬಿಸಿ ಆಹಾರ ಅಥವಾ ಬಿಸಿ ಊಟ ಹಾನಿಕಾರಕ

ಮೂಲಂಗಿ, ಕಲ್ಲಂಗಡಿ, ದ್ರಾಕ್ಷಿ, ಮಳೆನೀರು, ಬಿಸಿನೀರು, ಇವು ಜೇನುತುಪ್ಪದ ಜೊತೆಗೆ ಹಾನಿಕಾರಕ. ತುಪ್ಪ ಮತ್ತು ಜೇನುತುಪ್ಪವನ್ನು ಎಂದಿಗೂ ಸಮಾನ ಪ್ರಮಾಣದಲ್ಲಿ ಸೇವಿಸಬಾರದು. ಪಾಯಸದೊಂದಿಗೆ ಖಿಚಡಿ, ಹುಳಿ ಆಹಾರ, ಹಲಸಿನ ಹಣ್ಣು, ಸಾತು, ಮದ್ಯ, ಇತ್ಯಾದಿಗಳನ್ನು ತೆಗೆದುಕೊಳ್ಳಬೇಡಿ. ಬೆಳ್ಳುಳ್ಳಿಯೊಂದಿಗೆ ಕಲ್ಲಂಗಡಿ, ಮೂಲಂಗಿ, ಮೂಲಂಗಿ ಎಲೆಗಳು, ಹಾಲು, ಮೊಸರು ಹಾನಿಕಾರಕ. ಕಲ್ಲಂಗಡಿ ಜೊತೆ ಪುದೀನ, ತಣ್ಣೀರು ಕುಡಿಯಬೇಡಿ. ತಣ್ಣೀರಿನ ಜೊತೆ ಕಡಲೆಕಾಯಿ, ತುಪ್ಪ, ಎಣ್ಣೆ, ಕಲ್ಲಂಗಡಿ, ಸಿಬೆ, ನೇರಳೆ, ಸೌತೆಕಾಯಿ ಅಥವಾ ಬಿಸಿ ಆಹಾರವನ್ನು ಸೇವಿಸಬೇಡಿ. ಚಹಾದೊಂದಿಗೆ ಸೌತೆಕಾಯಿ, ಸೆಲರಿ, ತಿನ್ನಬೇಡಿ. ಮೂಲಂಗಿಗಳೊಂದಿಗೆ ಬೆಲ್ಲ ಹಾನಿಕಾರಕವಾಗಿದೆ. ಅಕ್ಕಿಯೊಂದಿಗೆ ವಿನೆಗರ್ ಹಾನಿ ಮಾಡುತ್ತದೆ.

ಸೊಂಟ ನೋವು ಅಥವಾ ಕೀಲು ನೋವು ಇದ್ದಲ್ಲಿ ಬಾಳೆಹಣ್ಣು, ಪಾಲಕ್, ಟೊಮೆಟೊ, ಅಕ್ಕಿ, ಮೊಸರು, ಇತ್ಯಾದಿ ಮತ್ತು ಹುಳಿ ಆಹಾರವನ್ನು ಸೇವಿಸಬೇಡಿ. ಅವು ರೋಗವನ್ನು ಹೆಚ್ಚಿಸುತ್ತವೆ.

> **ಮೂಲಂಗಿ ಗಳೊಂದಿಗೆ ಬೆಲ್ಲ ಹಾನಿಕಾರಕವಾಗಿದೆ**

ಇ) ಚೈತ್ರ ಮಾಸದಲ್ಲಿ ಬೆಲ್ಲ, ವೈಶಾಖ ತಿಂಗಳಲ್ಲಿ ತೈಲ, ಸೇವಿಸಬೇಡಿ.

ಜ್ಯೇಷ್ಠ ಮಾಸದಲ್ಲಿ ಸೂರ್ಯನ ಪ್ರಕಾಶದಲ್ಲಿ ನಡೆಯುವುದು, ಆಷಾಢ ಮಾಸದಲ್ಲಿ ಬಿಲ್ವ ಫಲ ತಿನ್ನಬಾರದು, ಶ್ರಾವಣ ಮಾಸದಲ್ಲಿ ಎಲೆ ತರಕಾರಿ ಸೇವನೆ ಕಾರ್ತಿಕ ಮಾಸದಲ್ಲಿ ಮೊಸರು ಸೇವಿಸಬಾರದು ಭಾದ್ರಪದ ಮತ್ತು ಅಶ್ವಿನ ಮಾಸದಲ್ಲಿ ಹಾಗಲಕಾಯಿ ಸೇವಿಸಬಾರದು, ಮಾರ್ಗಶೀರ್ಷ ಮಾಸದಲ್ಲಿ ಜೀರಿಗೆಯನ್ನು ಸೇವಿಸಬಾರದು. ಪೌಷ ಮಾಸದಲ್ಲಿ ಸ್ತ್ರೀಯೊಂದಿಗೆ ಒಡನಾಟ, ಫಾಲ್ಗುಣ ಮಾಸದಲ್ಲಿ ಕಡಲೆಯ ಸೇವನೆಯು ಹಾನಿಕಾರಕವಾಗಿದೆ.

- ಪ್ಲಾಸ್ಟಿಕ್ ಪಾತ್ರೆಗಳಲ್ಲಿ ದ್ರವಗಳನ್ನು ಇಡುವುದು ಅದರಲ್ಲಿ ಕುದಿಸುವುದು ಮತ್ತು ಅದರಲ್ಲಿಟ್ಟ ಆಹಾರ ಮತ್ತು ಪಾನೀಯಗಳನ್ನು ಸೇವಿಸುವುದರಿಂದ ರೋಗಗಳು ಉಂಟಾಗುತ್ತವೆ. ಆಹಾರ ಪದಾರ್ಥಗಳಿಗಾಗಿ ಪ್ಲಾಸ್ಟಿಕ್‌ಗಳನ್ನು ಬಳಸಬಾರದು.
- ಕಂಚು, ತಾಮ್ರ, ಅಲ್ಯುಮಿನಿಯಂ ಅಥವಾ ಹಿತ್ತಾಳೆಯ ಪಾತ್ರೆಗಳಲ್ಲಿ ಇರಿಸಲಾದ ವಸ್ತುಗಳು ತುಪ್ಪ, ಎಣ್ಣೆ, ಹುಳಿ, ಮೊಸರು, ಮಜ್ಜಿಗೆ, ಹಾಲು, ಬೆಣ್ಣೆ, ಬೇಯಿಸಿದ ಬೇಳೆ, ತರಕಾರಿಗಳು ಇತ್ಯಾದಿ ವಿಷವಾಗುತ್ತದೆ. ಇಂಥ ಪಾತ್ರೆಗಳಲ್ಲಿ ಆಹಾರ ಪದಾರ್ಥಗಳನ್ನು ತುಂಬ ಹೊತ್ತು ಇಡಬಾರದು.

# ನಿಮ್ಮ ಮಕ್ಕಳು ತುಂಬಾ ತೆಳ್ಳಗೆ, ದುರ್ಬಲವಾಗಿದ್ದಾರಾ? ಈ ಆಹಾರ ಅತ್ಯುತ್ತಮ

• ಉದಯವಾಹಿನಿ ಬೆಂಗಳೂರು



ಪೋಷಕರು ತಮ್ಮ ಮಕ್ಕಳನ್ನ ಆರೋಗ್ಯವಾಗಿಡಲು ಶ್ರಮಿಸುತ್ತಾರೆ. ಅವರಿಗೆ ಆರೋಗ್ಯಕರ ಆಹಾರ ನೀಡಲು ವಿಶೇಷ ಕಾಳಜಿ ವಹಿಸುತ್ತಾರೆ. ಆದ್ರೆ, ಕೆಲವು ಮಕ್ಕಳು ಸರಿಯಾಗಿ ಊಟ ಮಾಡುವುದಿಲ್ಲ. ಇದು ಅವರನ್ನು ತುಂಬಾ ತೆಳ್ಳಗೆ ಮತ್ತು ದುರ್ಬಲವಾಗಿರುತ್ತಾರೆ. ಇದರಿಂದ ಪಾಲಕರು ಕೂಡ ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಮಗುವಿನ ಮಾನಸಿಕ ಬೆಳವಣಿಗೆಗೆ ಮಾತ್ರವಲ್ಲದೇ ದೇಹದ ಬಗ್ಗೆಯೂ ಗಮನ ನೀಡಬೇಕು. ತೆಳ್ಳಗಿನ ಚರ್ಮ ಗೋಚರ ಮೂಳೆಗಳನ್ನ ಹೊಂದಿರುವ ಮಕ್ಕಳು ಅನೇಕ ಸಮಸ್ಯೆಗಳೊಂದಿಗೆ ರೋಗನಿರ್ಣಯ ಮಾಡಬೇಕು. ವೈದ್ಯರ ಸಲಹೆಯಂತೆ ಅವರಿಗೆ ಆಹಾರ ನೀಡಬೇಕು. ಅವರ ಊಟಕ್ಕೆ ಕೆಲವು ರೀತಿಯ ಆಹಾರಗಳನ್ನ ಸೇರಿಸಬೇಕು ಇವುಗಳು ಮಕ್ಕಳಿಗೆ ಆರೋಗ್ಯಕರ ತೂಕವನ್ನ ಪಡೆಯಲು ಸಹಾಯ ಮಾಡುತ್ತದೆ.

> **ಮಗುವಿನ ಮಾನಸಿಕ ಬೆಳವಣಿಗೆಗೆ ಮಾತ್ರವಲ್ಲದೇ ದೇಹದ ಬಗ್ಗೆಯೂ ಗಮನ**

**ಬಾಳೆಹಣ್ಣು :** ಮಕ್ಕಳಿಗೆ ಪ್ರತಿದಿನ ಬಾಳೆಹಣ್ಣು ತಿನ್ನಿಸಿ. ಬಾಳೆಹಣ್ಣು ತಿನ್ನುವುದರಿಂದ ಮಕ್ಕಳು ಆರೋಗ್ಯಕರ ತೂಕವನ್ನ ಪಡೆಯಲು ಸಹಾಯ ಮಾಡುತ್ತದೆ. ಈ ಹಣ್ಣಿನಲ್ಲಿ ವಿಟಮಿನ್ ಸಿ, ಎ, ಬಿ6 ಜೊತೆಗೆ ಫೈಬರ್, ಮೆಗ್ನಿಸಿಯಮ್ ಮತ್ತು ಪೊಟ್ಯಾಸಿಯಮ್ ಇದೆ. ಬಾಳೆಹಣ್ಣು ಮಕ್ಕಳಿಗೆ ತ್ವರಿತ ಶಕ್ತಿಯನ್ನು ನೀಡುತ್ತದೆ. ರೋಗನಿರೋಧಕ ಶಕ್ತಿಯೂ ಹೆಚ್ಚುತ್ತದೆ. ಅವರೂ ಕ್ರಿಯಾಶೀಲರಾಗಿದ್ದಾರೆ.

**ತುಪ್ಪ :** ಮಕ್ಕಳಿಗೆ ನೀಡಬೇಕಾದ ಆಹಾರಗಳಲ್ಲಿ ತುಪ್ಪವೂ ಒಂದು. ತುಪ್ಪವನ್ನ ಸೇರಿಸುವುದರಿಂದ ಮಕ್ಕಳ ಚರ್ಮ ಮತ್ತು ಕೂದಲು ಆರೋಗ್ಯಕರವಾಗಿರುತ್ತದೆ. ಇದಲ್ಲದೆ, ಅವು ದೇಹವನ್ನ ಭಾರವಾಗಿ ಮತ್ತು ಬಲವಾಗಿ ಬೆಳೆಯುತ್ತವೆ. ಒಳ್ಳೆಯ ಕೊಬ್ಬುಗಳು ಲಭ್ಯವಿವೆ. ಮೆದುಳು ಕೂಡ ಸಕ್ರಿಯವಾಗಿ ಕೆಲಸ ಮಾಡುತ್ತದೆ. ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

**ಹಾಲು :** ಸ್ತನ್ಯಪಾನವು ಮಕ್ಕಳು ಆರೋಗ್ಯಕರ ತೂಕವನ್ನ ಪಡೆಯಲು ಸಹ ಸಹಾಯ ಮಾಡುತ್ತದೆ. ಇದಲ್ಲದೆ, ಮಕ್ಕಳ ಚರ್ಮ ಮತ್ತು ಕೂದಲು ಕೂಡ ಆರೋಗ್ಯಕರವಾಗಿರುತ್ತದೆ. ಇದರಲ್ಲಿರುವ ಪೋಷಕಾಂಶಗಳನ್ನು ಮಕ್ಕಳು ಚೆನ್ನಾಗಿ ಸ್ವೀಕರಿಸುತ್ತಾರೆ. ಅವರನ್ನು ಕ್ರಿಯಾಶೀಲರನ್ನಾಗಿಸುತ್ತದೆ. ಪ್ರತಿದಿನ ಬೆಳಗ್ಗೆ, ಮತ್ತು ರಾತ್ರಿ ಮಲಗುವ ಮುನ್ನ ಹಾಲು ನೀಡುವುದು ತುಂಬಾ ಒಳ್ಳೆಯದು. ಹಾಗೆಯೇ ಜೇನು ಒಳ್ಳೆಯದು.

### ಕೋಳಿ ಮೊಟ್ಟೆ


ಬೇಯಿಸಿದ ಮೊಟ್ಟೆಯನ್ನ ಮಗುವಿಗೆ ಪ್ರತಿದಿನ ತಿನ್ನಿಸಬೇಕು. ಇದು ಮಕ್ಕಳಿಗೆ ತ್ವರಿತ ಶಕ್ತಿಯನ್ನ ನೀಡುವುದು ಮಾತ್ರವಲ್ಲದೆ ಅವರನ್ನ ಆರೋಗ್ಯವಾಗಿಡುತ್ತದೆ. ಇದು ಉತ್ತಮ ಕೊಬ್ಬನ್ನ ಹೊಂದಿರುತ್ತದೆ. ಇವು ಮಕ್ಕಳ ತೂಕವನ್ನ ಹೆಚ್ಚಿಸುತ್ತವೆ. ಪ್ರತಿದಿನ ಮೊಟ್ಟೆ ತಿನ್ನುವ ಮಕ್ಕಳ ಬೆಳವಣಿಗೆಯಲ್ಲೂ ಬದಲಾವಣೆಗಳು ಕಂಡುಬರುತ್ತವೆ. ಮಕ್ಕಳನ್ನ ಆರೋಗ್ಯವಾಗಿ ಮತ್ತು ಸದೃಢವಾಗಿಡಲು ಮೊಟ್ಟೆಗಳು ಬಹಳಷ್ಟು ಸಹಾಯ ಮಾಡುತ್ತವೆ.

# ಸಾಮಾಜಿಕ ಕಳಕಳಿ



ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ
• ಉದಯವಾಹಿನಿ, ವಿಶೇಷ

ಬೆನ್ನಿನಲಿ ಇರುವುದನು ನೋಡಲದು ಸಾಧ್ಯವೆ
ಅನ್ನ ಹಾಕಿದವರನು ಮರೆಯಲೆಂತು
ತನ್ನವಗೆ ಎಂದೆಂದು ದ್ರೋಹವನು ಮಾಡದಿರು
ಮನ್ನವದು ಆಗದದು ಲಕ್ಷ್ಮಿ ದೇವಿ....



## ದಿನಕ್ಕೊಂದು ಮುಕ್ತಕ -46

**ಭಾವಾರ್ಥ :** ಮನುಷ್ಯನ ದೇಹ ಪ್ರಾಣಿಗಳಿಗಿಂತ ವಿಭಿನ್ನವಾಗಿದೆ. ವಿಭಿನ್ನವಾದ ದೇಹದಾಢ್ಯತೆ, ಬುದ್ಧಿವಂತಿಕೆ, ಜ್ಞಾನವನ್ನು ಹೊಂದಿರುವಂತಹ ಮನುಜನ ಬೆನ್ನನ್ನು ಅವನಿಗೆ ನೋಡಿಕೊಳ್ಳಲು ಸಾಧ್ಯವಿಲ್ಲ. ಹಾಗೆಯೇ ಅನ್ನ ಹಾಕಿದವರ ಮನೆಗೆ ಕನ್ನವನ್ನು ಹಾಕಬಾರದು. ತನ್ನನ್ನು ನಂಬಿದವರಿಗೆ ದ್ರೋಹವನ್ನಾಗಿ ಇಂದಿಗೂ ಬಗೆಯಬಾರದು. ಆ ದ್ರೋಹ, ಮೋಸಕ್ಕೆ ಮನ್ನವು ಸಿಗುವುದು ಕಷ್ಟ. ದೈವ ಸೃಷ್ಟಿಯಿಂದ ಜನನವಾಗುವ ಮನುಜ ಬಹಳಷ್ಟು ಸಹಿಸುತ್ತಾ ಜೀವನವನ್ನು ನಡೆಸ ಬೇಕಾಗುತ್ತದೆ. ಅಂತಹ ಜೀವನದಲ್ಲಿ ಮಾಡಿದ ದ್ರೋಹಕ್ಕೆ ಮನ್ನಾ ಅಷ್ಟು ಸುಲಭವಾಗಿ ಸಿಗದು.

# ದಾಲ್ ಕಿಚಡಿ ರೆಸಿಪಿ- ನೀವು ತಯಾರಿಸುವುದಕ್ಕಿಂತಲೂ ಇದು ವಿಭಿನ್ನ..

• ಉದಯವಾಹಿನಿ ಬೆಂಗಳೂರು

ಮನೆಯಲ್ಲಿ ಸಾಮಾನ್ಯವಾಗಿ ದಾಲ್ ಕಿಚಡಿ ನೀವೆಲ್ಲಾರೂ ತಯಾರಿಸುತ್ತೀರಿ. ಆದರೆ ಅದೆಷ್ಟೋ ಗೃಹಿಣಿಯರು ತಯಾರಿಸುವ ದಾಲ್ ಕಿಚಡಿ ಹೋಟೆಲ್ ರುಚಿಯನ್ನು ಹೊಂದಿರುವುದಿಲ್ಲ. ಹೀಗಂತ ಮನೆಯಲ್ಲಿ ನೀವು ತಯಾರಿಸುವ ಈ ಖಾದ್ಯವನ್ನು ಸೇವಿಸದೇ ಇರಬಹುದು. ಇದರಿಂದಾಗಿ ನೀವು ಚಿಂತೆ ಕೂಡ ಮಾಡಬಹುದು. ನೀವು ತಯಾರಿಸುವ ದಾಲ್ ಕಿಚಡಿ ರುಚಿಯಾಗಿ ಇಲ್ಲದೆ ಇದ್ದರೆ ನಾವು ಹೇಳುವ ಸಿಂಪಲ್ ಟಿಪ್ಸ್ ಅನ್ನು ಫಾಲೋ ಮಾಡಿ ನಿಮ್ಮ ಮನೆಯ ಸದಸ್ಯರೆಲ್ಲರೂ ಈ ಖಾದ್ಯವನ್ನು ಮೆಚ್ಚಿಕೊಳ್ಳುವುದರಲ್ಲಿ ಅನುಮಾನವೇ ಹಾಗಾದರೆ ತಡ ಮಾಡುವುದು ಬೇಡ. ಹೋಟೆಲ್ ಸ್ಟೈಲ್ ದಾಲ್ ಕಿಚಡಿ ತಯಾರಿಸುವುದು ಹೇಗೆ ಎನ್ನುವುದನ್ನು ತಿಳಿಯೋಣ.

ನೀವು ಒಮ್ಮೆ ಇದನ್ನು ಮನೆಯಲ್ಲಿ ಟ್ರೈ ಮಾಡಿ. ನಿಮ್ಮ ಅನುಭವವನ್ನು ನಮ್ಮೊಂದಿಗೆ ಕಾಮೆಂಟ್ ಮಾಡುವ ಮೂಲಕ ಹಂಚಿಕೊಳ್ಳಿ. ಮೊದಲಿಗೆ ದಾಲ್ ಕಿಚಡಿ ಮಾಡಲು ಬೇಕಾಗುವ ಪದಾರ್ಥಗಳು ಯಾವುವು ಎನ್ನುವ ಬಗ್ಗೆ ತಿಳಿಯೋಣ.

### ಬೇಕಾಗುವ ಪದಾರ್ಥಗಳು

- ಅಕ್ಕಿ ಒಂದು ಕಪ್
- ಹೆಸರು ಕಾಳು ಅರ್ಧ ಕಪ್
- ಹಸಿ ಮೆಣಸಿನಕಾಯಿ 5
- ಈರುಳ್ಳಿ 1
- ಟೊಮೆಟೊ 1
- ಕಾಳುಮೆಣಸು ಅರ್ಧ ಟೇಬಲ್ ಸ್ಪೂನ್
- ಒಣ ಕೊಬ್ಬರಿ ತಂಡುಗಳು
- ಜೀರಿಗೆ ಕಾಲ್ ಚಮಚ
- ಸಾಸಿವೆ ಕಾಲ್ ಚಮಚ
- ಮೊಸರು ಅರ್ಧ ಕಪ್
- ಕೊತ್ತಂಬರಿ ಸ್ವಲ್ಪ
- ಕರಿಬೇವು ಸ್ವಲ್ಪ
- ಉಪ್ಪು ರುಚಿಗೆ
- ಅರಿಶಿಣ ಕಾಲ್ ಚಮಚ
- ಒಣಮೆಣಸಿನಕಾಯಿ

### ತಯಾರಿಸುವ ವಿಧಾನ:-

★ ಒಂದು ಕುಕ್ಕರ್ ಒಲೆಯ ಮೇಲೆ ಇಟ್ಟು ಎಣ್ಣೆ ಹಾಕಿ, ಕಾದ ಬಳಿಕ ಜೀರಿಗೆ, ಸಾಸಿವೆ ಹಾಕಿ ಚಟಪಟ ಅಂದ ಬಳಿಕ ಹೆಚ್ಚಿದ ಹಸಿ ಮೆಣಸಿನಕಾಯಿ ಹಾಕಿ ಬಾಡಿಸಿಕೊಳ್ಳಿ

★ ನಂತರ ಇದಕ್ಕೆ ಹೆಚ್ಚಿದ ಈರುಳ್ಳಿ ಹಾಕಿ ಹುರಿದು ಹೆಚ್ಚಿದ ಟೊಮೆಟೊ ಹಾಕಿ ಚೆನ್ನಾಗಿ ಬಾಡಿಸಿಕೊಳ್ಳಿ


★ ಬಳಿಕ ಇದಕ್ಕೆ ಕಾಳುಮೆಣಸು, ಸಣ್ಣಗಿ ಹೆಚ್ಚಿದ ಒಣ ಕೊಬ್ಬರಿ ತುಂಡು, ಕರಿಬೇವು, ಅರಿಶಿಣ ಹಾಕಿ ಚೆನ್ನಾಗಿ ಕಲಸಿಕೊಳ್ಳಿ

ನಂತರ ಇದಕ್ಕೆ ಐದು ಕಪ್ ನೀರು ಹಾಕಿ ರುಚಿಗೆ ತಕ್ಕಷ್ಟು ಉಪ್ಪು ಹಾಕಿ ನೀರು ಕುದಿಯಲು ಬಿಡಿ ಚೆನ್ನಾಗಿ ತೊಳೆದು ನೆನೆಸಿದ ಅಕ್ಕಿ ಹಾಗೂ ಹೆಸರು ಬೇಳೆಯನ್ನು ಕುದಿಯುವ ನೀರಿಗೆ ಹಾಕಿ ಕುಕ್ಕರ್ ಮುಚ್ಚಳ ಮುಚ್ಚಿ ಉರಿಯನ್ನು ನಿಧಾನಗೊಳಿಸಿ (ಉರಿ ನಿಧಾನವಾಗಿಟ್ಟು ಕುಕ್ಕರ್ ನಾಲ್ಕು ವಿಸಿಲ್ ಹಾಕುವವರೆಗೂ ಬಿಡಿ)

★ ಮತ್ತೊಂದು ಪಾತ್ರೆಯನ್ನು ಒಲೆಯ ಮೇಲೆ ಇಟ್ಟು ಇದಕ್ಕೆ ಎಣ್ಣೆ ಹಾಕಿ ಬಿಸಿ ಆದ ಬಳಿಕ ಜೀರಿಗೆ ಸಾಸಿವೆ ಒಣ ಮೆಣಸಿನಕಾಯಿ ಹಾಕಿ ಒಗ್ಗರಣೆ ಮಾಡಿಕೊಂಡು, ಇದು ಆರಿದ ಬಳಿಕ ಮೊಸರು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ ರುಚಿಗೆ ತಕ್ಕಷ್ಟು ಉಪ್ಪು ಬೆರೆಸಿ.

★ ಎಲ್ಲವೂ ಆದ ಬಳಿಕ ಕುಕ್ಕರ ಮುಚ್ಚಳ ತೆಗೆದು ದಾಲ್ ಕಿಚಡಿಯನ್ನು ಚೆನ್ನಾಗಿ ಕಲಸಿಕೊಳ್ಳಿ (ಇದು ಗಟ್ಟಿಯಾಗಿರದೆ ತೆಳುವಾಗಿದ್ದಷ್ಟು ರುಚಿಯಾಗಿರುತ್ತದೆ)

★ ಒಂದು ಬೌಲ್‌ಗೆ ದಾಲ್ ಕಿಚಡಿ ಹಾಕಿ ಮೊಸರು ಹಾಕಿ ಮೇಲೆ ಕೊತ್ತಂಬರಿ ಸೊಪ್ಪು ಉದುರಿಸಿದರೆ ರುಚಿರುಚಿಯಾದ ಹೋಟೆಲ್ ಸ್ಟೈಲ್ ದಾಲ್ ಕಿಚಡಿ ಸವಿಯಲು ಸಿದ್ಧ.



# ಚಡ್ಡಿ, ಬಿಕಿನಿ, ಚಪ್ಪಲಿ ಮೇಲೆ ಗಣೇಶನ ಚಿತ್ರ, ವಾಲ್ ಮಾರ್ಟ್‌ಗೆ ಬುದ್ಧಿ ಕಲಿಸಿದ ಹಿಂದೂಗಳು!

• ಉದಯವಾಹಿನಿ ಬೆಂಗಳೂರು



ಜಾಗತಿಕವಾಗಿ ಪ್ರಖ್ಯಾತಿ ಪಡೆದಿರುವ ರಿಟೇಲ್ ಮಾರುಕಟ್ಟೆಯ ದೈತ್ಯ, ವಾಲ್‌ಮಾರ್ಟ್ ಸಂಸ್ಥೆಯು ಇದೀಗ ಹಿಂದೂಗಳ ಕೆಂಗಣ್ಣಿಗೆ ಗುರಿಯಾಗಿದೆ. ಹಿಂದೂ ದೇವರಾದ ಗಣೇಶನ ಭಾವಚಿತ್ರವಿರುವ ಬಿಕಿನಿ, ಚಪ್ಪಲಿ, ಚಡ್ಡಿ, ಸೇರಿದಂತೆ ತರಹೇವಾರಿ ಒಳಒಡುಪುಗಳು ಹಾಗೂ ಚಪ್ಪಲಿಗಳನ್ನು ಆನ್‌ಲೈನ್‌ನಲ್ಲಿ ಮಾರಾಟಕ್ಕೆ ಇಟ್ಟಿತ್ತು.

ಇದಕ್ಕೆ ಭಾರಿ ಆಕ್ರೋಶ ವ್ಯಕ್ತವಾಗಿದೆ. ಇನ್ನು ಈ ಫೋಟೋಗಳನ್ನು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿರುವ ಹಲವರು ಹಿಂದೂ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದೆ ಎಂದು ವಾಲ್‌ಮಾರ್ಟ್ ವಿರುದ್ಧ ತಿರುಗಿಬಿದ್ದಿದ್ದಾರೆ. ಹಿಂದೂಗಳ ಪವಿತ್ರ ದೇವತೆ ಗಣೇಶನನ್ನು ಒಳಗೊಂಡ ಇಂತಹ ಉತ್ಪನ್ನಗಳನ್ನು ಮಾರಾಟ ಮಾಡುವ ವಾಲ್‌ಮಾರ್ಟ್‌ನ ಬಗ್ಗೆ ವಿಶ್ವದಾದ್ಯಂತ ಆಕ್ರೋಶ ಭುಗಿಲೆದ್ದಿದೆ.

ವಾಲ್‌ಮಾರ್ಟ್ ಮಾರಾಟ ಮಾಡುತ್ತಿರುವ ಚಪ್ಪಲಿಗಳು ಮತ್ತು ಒಳ ಉಡುಪುಗಳ ಮೇಲೆ ಪೂಜ್ಯ ಹಿಂದೂ ದೇವರಾದ ಗಣೇಶನನ್ನು ಚಿತ್ರಿಸಲಾಗಿದೆ. ಈ ಬಗ್ಗೆ ಹಿಂದೂ ಸಮುದಾಯ ತೀವ್ರ ಕಳವಳ ವ್ಯಕ್ತಪಡಿಸಿದೆ. ಇದು ವಾಲ್‌ಮಾರ್ಟ್ನ ಸಂಪೂರ್ಣ ನಿರ್ಲಕ್ಷ್ಯ, ಹಿಂದೂ ದೇವರುಗಳು, ಹಿಂದೂ ಭಾವನೆಗಳ ಮೇಲಿನ ಅಗೌರವಕ್ಕೆ ಹಿಡಿದ ಕನ್ನಡಿ ಎಂದು ಕಿಡಿಕಾರಿದ್ದಾರೆ. ಇನ್ನು ವಾಲ್‌ಮಾರ್ಟ್ ಗಣೇಶನ ಚಿತ್ರವನ್ನು ಹೊಂದಿರುವ ಬರೋಬ್ಬರಿ 74 ರೀತಿಯ ಒಳ ಉಡುಪುಗಳನ್ನು ಮಾರಾಟ ಮಾಡುತ್ತಿದ್ದು ಇದರ ವಿರುದ್ಧ ಅಮೇರಿಕಾದಲ್ಲಿ ಹಿಂದೂಗಳು ಆಕ್ರೋಶ ಹೊರಹಾಕಿ ಪ್ರತಿಭಟನೆ ಕೂಡ ನಡೆಸಿದ್ದಾರೆ. ಸೋಶಿಯಲ್ ಮೀಡಿಯಾದಲ್ಲಿ ಹಲವರು ಬಾಯ್ಕಾಟ್ ವಾಲ್‌ಮಾರ್ಟ್ ಎನ್ನುವ ಅಭಿಯಾನವನ್ನೂ ಶುರು ಮಾಡಿದ್ದಾರೆ.

> ಪಾದರಕ್ಷೆಗಳು ಮತ್ತು ಒಳ ಉಡುಪುಗಳ ಮೇಲೆ ಹಿಂದೂ ದೇವರ ಚಿತ್ರಣವನ್ನು ಅಸಹ್ಯಕರವಾಗಿ ಬಳಸಿರುವುದು ಹಿಂದೂ ಸಮುದಾಯದ ಕೋಪಕ್ಕೆ ಕಾರಣವಾಯಿತು. ಹಿಂದೂ ಭಾವನೆಗಳನ್ನು ಅಪಹಾಸ್ಯ ಮಾಡಿದ ಬಗ್ಗೆ, ಸಾಮಾಜಿಕ ಮಾಧ್ಯಮಗಳಲ್ಲಿ ವಾಲ್‌ಮಾರ್ಟ್ ವಿರುದ್ಧ ಖಂಡನೆ ವ್ಯಕ್ತಪಡಿಸಿದರು.

> ಈ ಅಚಾತುರ್ಯಕ್ಕೆ ಕ್ಷಮೆಯನ್ನೂ ಕೇಳಿದೆ ಎಂದು ವರದಿಯಾಗಿದೆ. ವಾಲ್‌ಮಾರ್ಟ್ ಶುಕ್ರವಾರದಂದು ಗಣೇಶನ ಚಿತ್ರವಿರುವ ಪಾದರಕ್ಷೆಗಳು ಮತ್ತು ಒಳ ಉಡುಪುಗಳನ್ನು ಮಾರಾಟ ಮಾಡುತ್ತಿರುವುದು ಬೆಳಕಿಗೆ ಬಂದ ನಂತರ ಭಾರಿ ವಿವಾದ ಸೃಷ್ಟಿಯಾಯಿತು.

ಜಾಗತಿಕವಾಗಿ ಈ ವಸ್ತುಗಳ ವಿರುದ್ಧ ಖಂಡನೆ ವ್ಯಕ್ತವಾದ ಬೆನ್ನಲ್ಲೇ ವಾಲ್ ಮಾರ್ಟ್ ಯೂಟರ್ನ್ ಹೊಡೆದಿದೆ. ತನ್ನ ವೆಬ್‌ಸೈಟ್‌ನಿಂದ ಗಣೇಶನ ಚಿತ್ರವಿದ್ದ ಈ ಚಪ್ಪಲಿ, ಬಿಕಿನಿ, ಚಡ್ಡಿ ಸೇರಿದಂತೆ ಇನ್ನಿತರ ವಸ್ತುಗಳನ್ನು ತೆಗೆದುಹಾಕಿರುವುದಾಗಿ ತಿಳಿಸಿದೆ.


# ಬಿಪಿಎಲ್ ಕಾರ್ಡ್ ಬಗ್ಗೆ ಮತ್ತೊಂದು ಅಪ್‌ಡೇಟ್ ಕೊಟ್ಟ ಸಚಿವ

• ಉದಯವಾಹಿನಿ ಬೆಂಗಳೂರು

ನಕಲಿ ದಾಖಲೆ ನೀಡಿ ಪಡೆದಂತಹ ಬಿಪಿಎಲ್ ಕಾರ್ಡ್‌ಗಳನ್ನು ರದ್ದು ಮಾಡಿ ಅಂತಹವರನ್ನು ಎಪಿಎಲ್‌ಗೆ ವರ್ಗಾಹಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ. ಇದೀಗ ಬಿಪಿಎಲ್ ಕಾರ್ಡ್‌ಗೆ ಸಂಬಂಧಿಸಿದಂತೆ ಆಹಾರ ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ ಅವರು ಅಪ್ಲೋಡ್ ಮಾಹಿತಿಯನ್ನು ಕೊಟ್ಟಿದ್ದಾರೆ ವಿವರ ಇಲ್ಲಿದೆ ಗಮನಿಸಿ. ಧಾರವಾಡ ಬೆಂಗಳೂರು ( ಮೈಸೂರು 23 ಬೆಳಗಾವಿ ಬಿಪಿಎಲ್ ಕಾರ್ಡ್ ಹೊಂದಿರುವ ಅನರ್ಹರು ಸ್ವಯಂ ಪ್ರೇರಿತವಾಗಿ ಪಡಿತರ ಚೀಟಿಯನ್ನು ಹಿಂದಿರುಗಿಸಿದರೆ ಮತ್ತಷ್ಟು ಅರ್ಹ ಫಲಾನುಭವಿಗಳಿಗೆ ಬಿಪಿಎಲ್ ಪಡಿತರ ಚೀಟಿ ವಿತರಣೆ ಮಾಡಲು ಅನುಕೂಲ ಆಗುತ್ತದೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರು ತಿಳಿಸಿದರು. 2. ಶಿವಮೊಗ್ಗ ಜಿಲ್ಲೆಗಳು + (9) ತುಮಕೂರಿನ ಕುಣಿಗಲ್ ರಸ್ತೆಯ ಅಮರಜ್ಯೋತಿ ಶಿರಡಿ ಸಾಯಿಬಾಬ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಉಳ್ಳವರು, ಶ್ರೀಮಂತರು ಬಿಪಿಎಲ್ ಕಾರ್ಡ್‌ಗಳನ್ನು ಪಡೆದಿದ್ದಾರೆ. ಅಂತಹವರು ಸ್ವಯಂಪ್ರೇರಿತವಾಗಿ ಹಿಂತಿರುಗಿಸಿದರೆ ಬಡವರಿಗೆ ಬಿಪಿಎಲ್ ಕಾರ್ಡ್ ವಿತರಣೆ ಮಾಡಲು ಸಹಾಯ ಆಗಲಿದೆ ಎಂದು ಹೇಳಿದರು.

ದೇಶದಲ್ಲೇ ಅತೀ ಹೆಚ್ಚು ಪಡಿತರ ಚೀಟಿಗಳನ್ನು ವಿತರಣೆ ಮಾಡುವ ರಾಜ್ಯ ಅಂದರೆ ಕರ್ನಾಟಕ ಮಾತ್ರ. ನಮ್ಮ ರಾಜ್ಯದಲ್ಲಿರುವ 7 ಕೋಟಿ ಜನರ ಪೈಕಿ ಶೇಕಡ 70ರಷ್ಟು ಫಲಾನುಭವಿಗಳಿಗೆ ಪಡಿತರ ಚೀಟಿ ಹಂಚಿಕೆ ಮಾಡಲಾಗಿದೆ. ರಾಜ್ಯದಲ್ಲಿ ಸುಮಾರು 4.50 ಕೋಟಿ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗಿದೆ.

ಇದರ ಸದುಪಯೋಗ ಅರ್ಹ ಫಲಾನುಭವಿಗಳಿಗೆ ಸಿಗುವಂತಾಗಬೇಕೆಂದು ನಮ್ಮ ಉದ್ದೇಶವಾಗಿದೆ ಎಂದು ತಿಳಿಸಿದರು.




### ಬೇಕಾಗುವ ದಾಖಲೆಗಳು

- ಆಧಾರ್ ಕಾರ್ಡ್
- 2-2
- ಮೊಬೈಲ್ ಸಂಖ್ಯೆ
- ವಿದ್ಯುತ್ ಬಿಲ್
- ಪ್ಯಾನ್ ಕಾರ್ಡ್

### ಪಡಿತರ ಚೀಟಿ ತಿದ್ದುಪಡಿ ವಿಧಾನಗಳು

- ಮುಖ್ಯ ಪುಟದಲ್ಲಿ ಇ-ಸೇವೆಗಳನ್ನು ಆಯ್ಕೆ ಮಾಡಿ. ಧಾರವಾಡ
- ತಿದ್ದುಪಡಿ ಅಥವಾ ಹೊಸ ಸೇರ್ಪಡೆಗೆ ವಿನಂತಿ ಆಯ್ಕೆಯನ್ನು ಕ್ಲಿಕ್ ಮಾಡಿ. ಬೆಂಗಳೂರು
- ಹೊಸ ಪೇಜ್‌ನಲ್ಲಿ ಫಾರ್ಮ್‌ಲ್ಲಿ ಅಗತ್ಯ ಮಾಹಿತಿಯನ್ನು ಭರ್ತಿ ಮಾಡಿ.
- ಬಳಿಕ ಅಲ್ಲಿ ತಿಳಿಸಲಾದ ಎಲ್ಲಾ ದಾಖಲೆಗಳನ್ನು ಸ್ಕ್ಯಾನ್ ಪ್ರತಿಯನ್ನು ಅಪ್ಲೋಡ್ ಮಾಡಿ.
- ಅಪ್ಲೋಡ್ ಮಾಡಿದ ನಂತರ ಫಾರ್ಮ್ ಅನ್ನು ಸಬ್ಮಿಟ್ ಮಾಡಿ. ಅರ್ಜಿ ಸಲ್ಲಿಕೆಯ ವೇಳೆ ನೀವು ನೀಡಿರುವಂತಹ ಎಲ್ಲಾ ದಾಖಲಾತಿಗಳು ಸರಿಯಾಗಿದ್ದರೆ ಮಾತ್ರ ನಿಮಗೆ ಅಪ್ಲೇಟ್ ಆಗಿರುವ ಹೊಸ ರೇಷನ್ ಕಾರ್ಡ್ ನೀಡಲಾಗುತ್ತದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ಹಿರಿಯರು ಉತ್ತಮ ಲಾಭ ಪಡೆಯಲು ತಮ್ಮ ಹೆಚ್ಚುವರಿ ಶಕ್ತಿಯನ್ನು ಸಕಾರಾತ್ಮಕ ಬಳಕೆಗೆ ವಿನಿಯೋಗಿಸಬೇಕು. ಇಂದು, ನೀವು ಸಾಕಷ್ಟು ಸಕಾರಾತ್ಮಕತೆಯೊಂದಿಗೆ ಮನೆಯಿಂದ ಹೊರಬರುತ್ತೀರಿ.

**ವೃಷಭ** ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ನೀವು ನಿಮ್ಮ ಸ್ನೇಹಿತರೊಂದಿಗೆ ಎಲ್ಲಿಗಾದರೂ ಸುತ್ತಾಡಲು ಹೋಗುತ್ತಿದ್ದರೆ, ಹಣವನ್ನು ಚೆನ್ನಾಗಿ ಯೋಚಿಸಿ ಖರ್ಚು ಮಾಡಿ.

**ಮಿಥುನ** ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು, ಇದು ಜೀವನದ ಅನೇಕ ಸಮಸ್ಯೆಗಳನ್ನು ತೆಗೆದುಹಾಕುತ್ತದೆ.

**ಕರ್ಕಾಟಕ** ಸಂಬಂಧಿಗಳು ಬೆಂಬಲ ನೀಡುತ್ತಾರೆ ಮತ್ತು ನಿಮ್ಮ ಮನಸ್ಸಿಗೆ ಆ ಹೊರೆಯಾದ ಆ ತೊಂದರೆಯನ್ನು ಕಡಿಮೆ ಮಾಡುತ್ತಾರೆ. ಭಿನ್ನಾಭಿಪ್ರಾಯಗಳ ಕಾರಣ ವೈಯಕ್ತಿಕ ಸಂಬಂಧದಲ್ಲಿ ಬಿರುಕು ಬಿಡಬಹುದು.

**ಸಿಂಹ** ತುಂಬಾ ಪ್ರಯಾಣ ನಿಮಗೆ ದಣಿವಾಗಿಸುತ್ತದೆ ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ. ಕುಟುಂಬದ ಸದಸ್ಯರು ಬಹಳ ಬೇಡಿಕೆಗಳನ್ನಿಡುತ್ತಾರೆ.

**ಕನ್ಯಾ** ಅನುಮಾನದ ಪ್ರಕೃತಿ ನಿಮಗೆ ಸೋಲಿನ ಮುಖ ತೋರಿಸಬಹುದು. ಇಂದಿನ ದಿನವನ್ನು ಉತ್ತಮಗೊಳಿಸಲು ಕಳೆದ ದಿನಗಳಲ್ಲಿ ಹಣವನ್ನು ಹೂಡಿಕೆ ಮಾಡಿದ್ದರೆ, ಅದರ ಪ್ರಯೋಜನವನ್ನು ಇಂದು ನೀವು ಪಡೆಯಬಹುದು.

**ತುಲಾ** ಕೆಲಸದ ನಡುವೆ ವಿಶ್ರಾಂತಿ ಪಡೆಯಲು ಪ್ರಯತ್ನಿಸಿ. ತಡರಾತ್ರಿ ಕೆಲಸ ಮಾಡುವುದನ್ನು ತಪ್ಪಿಸಿ. ರಿಯಲ್ ಎಸ್ಟೇಟ್ ನಲ್ಲಿ ಹೂಡಿಕೆ ಲಾಭದಾಯಕವಾಗಬಹುದು. ನಿಮ್ಮ ಅತಿಯಾದ ಜೀವನಶೈಲಿ ಮನೆಯಲ್ಲಿ ಆತಂಕ ಸೃಷ್ಟಿಸಬಹುದು

**ವೃಶ್ಚಿಕ** ನೀವು ಕಳೆದುಹೋದದ್ದರ ಬಗ್ಗೆ ಯೋಚಿಸುತ್ತಿದ್ದರೆ ನಿಮ್ಮ ಹತಾಶೆ ನಿಮ್ಮ ಆರೋಗ್ಯವನ್ನು ನಾಶಮಾಡಬಹುದು – ಸಾಧ್ಯವಾದಷ್ಟೂ ವಿಶ್ರಾಂತಿ ತಗೆದುಕೊಳ್ಳಲು ಪ್ರಯತ್ನಿಸಿ.

**ಧನಸ್ಸು** ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ. ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ.

**ಮಕರ** ದೇಹದ ನೋವು ಮತ್ತು ಒತ್ತಡ ಸಂಬಂಧಿತ ಸಮಸ್ಯೆಗಳನ್ನು ತಳ್ಳಿಹಾಕಲು ಸಾಧ್ಯವಿಲ್ಲ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಸಂಗಾತಿ ಧೂಮಪಾನ ಬಿಡುವಂತೆ ನಿಮ್ಮನ್ನು ಉತ್ತೇಜಿಸುತ್ತಾರೆ.

**ಕುಂಭ** ನಿಮ್ಮ ಸಂಗಾತಿಯ ಜೊತೆಗೆ ನಿಮ್ಮ ಜೀವನದ ಅತ್ಯುತ್ತಮ ದಿನವನ್ನು ಕಳೆಯುತ್ತೀರಿ. ಕುಟುಂಬವು ಜೀವನದ ಅವಿಭಾಜ್ಯ ಅಂಗವಾಗಿದೆ. ನಿಮ್ಮ ಕುಟುಂಬದೊಂದಿಗೆ ನೀವು ಸುತ್ತಾಡುವುದನ್ನು ಆನಂದಿಸಬಹುದು.

**ಮೀನ** ನಿಮ್ಮ ಭಾವನೆಗಳನ್ನು ನಿಯಂತ್ರಿಸಲು ನಿಮಗೆ ಕಷ್ಟವಾಗಬಹುದು – ನಿಮ್ಮ ಅಸಾಮಾನ್ಯ ವರ್ತನೆ ನಿಮ್ಮ ಸುತ್ತಲಿನ ಜನರನ್ನು ಗೊಂದಲದಲ್ಲಿ ಕೆಡವಬಹುದು ಮತ್ತು ನಿಮ್ಮನ್ನು ನಿರಾಸೆಗೊಳಿಸಬಹುದು.

# ವ್ಯಾಪಾರಸ್ಥರಿಗೇ ಬೇಡವಾದ ಸಂತೆ ಮಾರುಕಟ್ಟೆ: ಗ್ರಾಹಕರಿಗೆ ತೊಂದರೆ

## ಮಾರುಕಟ್ಟೆ ಸ್ಥಳದಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತವೆ, ಕಿಡಿಗೇಡಿಗಳು ಮದ್ಯಪಾನ ಮಾಡಲು ಉಪಯೋಗಿಸುತ್ತಾರೆ

• ಉದಯವಾಹಿನಿ ಚನ್ನಗಿರಿ

ಪಟ್ಟಣದಲ್ಲಿ ಎರಡು ವರ್ಷಗಳ ಹಿಂದೆ ಸುಸಜ್ಜಿತವಾದ ಸಂತೆ ಮಾರುಕಟ್ಟೆ ನಿರ್ಮಿಸಿದ್ದರೂ ವ್ಯಾಪಾರಿಗಳು ಅದನ್ನು ಬಳಸದೇ ರಸ್ತೆ ಬದಿಯಲ್ಲಿಯೇ ತರಕಾರಿ, ದಿನಸಿ ಮುಂತಾದ ಅಂಗಡಿಗಳನ್ನು ಹಾಕಿಕೊಂಡು ವ್ಯಾಪಾರ ನಡೆಸುತ್ತಿದ್ದು, ಗ್ರಾಹಕರಿಗೆ ತುಂಬಾ ತೊಂದರೆಯಾಗುತ್ತಿದೆ.

**ಜನರಿಗೆ ಕಿರಿಕಿರಿ**

ಪುರಸಭೆ ಅಧಿಕಾರಿಗಳ ನಿರ್ಲಕ್ಷ್ಯದಿಂದಲೇ ಜನರು ಪರದಾಡುವಂತಾಗಿದೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ. ಅನೇಕ ವರ್ಷಗಳಿಂದ ಪ್ರತಿ ಶುಕ್ರವಾರ ಪಟ್ಟಣದಲ್ಲಿ ವಾರದ ಸಂತೆ ನಡೆಯುತ್ತದೆ.

ತಾಲ್ಲೂಕಿನಲ್ಲಿ ಈ ಸಂತೆಯೇ ಅತ್ಯಂತ ದೊಡ್ಡದು ಎಂಬ ಪ್ರತೀತಿಯೂ ಇದೆ. ಪ್ರತಿ ವಾರ ಸುತ್ತಮುತ್ತಲ ಹತ್ತಾರು ಹಳ್ಳಿಗಳ ಸಾವಿರಾರು ಜನರೂ ಸೇರಿದಂತೆ ಸಂತೆಗೆ ಇಲ್ಲಿಗೇ ಬರುತ್ತಾರೆ. ಇಕ್ಕಟ್ಟಿನ ಸ್ಥಳದಲ್ಲಿ ಸಂತೆ ನಡೆಯುತ್ತಿರುವುದರಿಂದ ಜನರಿಗೆ ಕಿರಿಕಿರಿಯಾಗುತ್ತಿದೆ.

> ಚನ್ನಗಿರಿ ಪಟ್ಟಣದಲ್ಲಿ ನಿರ್ಮಿಸಿರುವ ಸುಸಜ್ಜಿತವಾದ ಸಂತೆ ಮಾರುಕಟ್ಟೆ ಸ್ಥಳ ಖಾಲಿ ಇರುವುದು ಸದಾ ಕತ್ತಲು, ಇಕ್ಕಟ್ಟು ಜಾಗ ಈ ರಾಷ್ಟ್ರೀಯ ಸಂತೆ ಮಾರುಕಟ್ಟೆ ಸ್ಥಳದಲ್ಲಿ ವ್ಯಾಪಾರಿಗಳಿಗೆ ಅಂಗಡಿ ಇಟ್ಟುಕೊಳ್ಳಲು ಜಾಗ ಕಡಿಮೆಯಾಗುತ್ತದೆ. ಅಲ್ಲದೇ ಈ ಸ್ಥಳದಲ್ಲಿ ಸದಾ ಕತ್ತಲು ಇರುವುದರಿಂದ ವ್ಯಾಪಾರ ವಹಿವಾಟು ನಡೆಸಲು ತೊಂದರೆಯಾಗುತ್ತಿದೆ. ಹಾಗಾಗಿ ಮಾರುಕಟ್ಟೆ ಸ್ಥಳದಲ್ಲಿ ವ್ಯಾಪಾರ ಮಾಡಲು ವ್ಯಾಪಾರಸ್ಥರು ಹಿಂದೇಟು ಹಾಕುತ್ತಿದ್ದಾರೆ. ಈ ಸಮಸ್ಯೆಯನ್ನು ಪುರಸಭೆಯವರು ಬಗೆಹರಿಸಿದರೆ ಮಾರುಕಟ್ಟೆ ಸ್ಥಳದಲ್ಲೇ ವ್ಯಾಪಾರ ಮಾಡಲು ಸಿದ್ಧರಿದ್ದೇವೆ
> -ಮನ್ಸೂರ್ ಬೇಗ್, ತರಕಾರಿ ವ್ಯಾಪಾರಿ


ಉದಯವಾಹಿನಿ ಚಿತ್ರ

ಬೆಂಗಳೂರು ಗ್ರಾಮಾಂತರ ಜನರು ಓಡಾಡುವ ರಸ್ತೆ ಬದಿಯಲ್ಲಿಯೇ ವ್ಯಾಪಾರಿಗಳು ಗುಡಾರ ಹಾಕಿಕೊಂಡು ವ್ಯಾಪಾರ ವಹಿವಾಟು ನಡೆಸುವುದರಿಂದ ಗ್ರಾಹಕರು ರಸ್ತೆಯಲ್ಲಿ ನಿಂತುಕೊಂಡೇ ಅಗತ್ಯ ವಸ್ತುಗಳನ್ನು ಖರೀದಿಸುವ ಸ್ಥಿತಿ ನಿರ್ಮಾಣವಾಗಿದೆ.

ಇಂತಹ ಕಿರಿಕಿರಿ ತಪ್ಪಿಸುವ ಉದ್ದೇಶದಿಂದ ಶಾಸಕರಾಗಿದ್ದ ಮಾಡಾಳ್ ವಿರೂಪಾಕ್ಷಪ್ಪ ಅವರ ಪ್ರಯತ್ನದಿಂದ 2021ರಲ್ಲಿ ಎಪಿಎಂಸಿಯಿಂದ 2.50 ಕೋಟಿ ಅನುದಾನ ಬಿಡುಗಡೆ ಮಾಡಿಸಿ 160 ವ್ಯಾಪಾರಿಗಳು, ವಿವಿಧ ಪ್ರಕಾರಗಳ ಅಂಗಡಿ ಇಟ್ಟುಕೊಳ್ಳಲು ಅನುಕೂಲ ಆಗುವಂತಹ ಸುಸಜ್ಜಿತ ಸಂತೆ ಮಾರುಕಟ್ಟೆ ನಿರ್ಮಿಸಲಾಗಿತ್ತು.

ಸಂತೆ ಕಟ್ಟೆಯಲ್ಲಿ ಕುಡಿಯುವ ನೀರು, ಶೌಚಾಲಯ, ದ್ವಿಚಕ್ರ ವಾಹನಗಳ ನಿಲುಗಡೆಗೆ ಪಾರ್ಕಿಂಗ್ ವ್ಯವಸ್ಥೆಯಂತಹ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗಿತ್ತು.

> ಬೆಳಕಿನ ವ್ಯವಸ್ಥೆಗೆ ಪ್ರಸ್ತಾವ ಸಂತೆ ಮಾರುಕಟ್ಟೆಯಲ್ಲಿ ಎಲ್ಲಾ ರೀತಿಯ ಮೂಲ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರೂ ವ್ಯಾಪಾರಸ್ಥರು ಜಾಗದ ಕೊರತೆ ಎಂದು ಹೇಳುತ್ತಾರೆ. ಬೆಳಕು ಸಾಕಾಗುವುದಿಲ್ಲ ಎಂಬ ಕಾರಣದಿಂದ ರಸ್ತೆ ಬದಿಯಲ್ಲಿಯೇ ಅಂಗಡಿ ಇಟ್ಟಿರುತ್ತಾರೆ. ವರ್ಷದಿಂದ ವ್ಯಾಪಾರಿಗಳ ಮನವೊಲಿಸಲು ಪ್ರಯತ್ನಪಟ್ಟರೂ ಸಫಲವಾಗುತ್ತಿಲ್ಲ ಬೆಳಕಿನ ವ್ಯವಸ್ಥೆ ಕಲ್ಪಿಸಲು ಅಗತ್ಯ ಅನುದಾನಕ್ಕಾಗಿ ಪ್ರಸ್ತಾವ ಸಲ್ಲಿಸಲಾಗಿದೆ. ಮುಂದಿನ ದಿನಗಳಲ್ಲಿ ಮಾರುಕಟ್ಟೆ ಸ್ಥಳದಲ್ಲೇ ಸಂತೆ ನಡೆಯುವಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದು
> – ಕೃಷ್ಣ ಡಿ.ಕಟ್ಟಿಮನಿ, ಪುರಸಭೆ ಮುಖ್ಯಾಧಿಕಾರಿ

**ಬೆಳಕಿನ ವ್ಯವಸ್ಥೆಗೆ ಪ್ರಸ್ತಾವ**

ವಿವಿಧ ಕಾರಣಗಳಿಗಾಗಿ ಸುಸಜ್ಜಿತ ಮಾರುಕಟ್ಟೆ ಸ್ಥಳದಲ್ಲಿ ಅಂಗಡಿ ಇಡಲು ವ್ಯಾಪಾರಸ್ಥರು ಹಿಂದೇಟು ಹಾಕುತ್ತಿದ್ದಾರೆ. ವ್ಯಾಪಾರಿಗಳ ಮನವೊಲಿಸುವಲ್ಲಿ ಪುರಸಭೆ ಅಧಿಕಾರಿಗಳು ವಿಫಲರಾಗಿದ್ದಾರೆ. ಹಾಗಾಗಿ ಸುಸಜ್ಜಿತ ಸಂತೆ ಮಾರುಕಟ್ಟೆ ಸದುಪಯೋಗವಾಗದೇ ಹಾಳು ಬಿದ್ದಿದೆ ಎಂದು ಗ್ರಾಹಕರು ದೂರುತ್ತಾರೆ.

ಪ್ರತಿ ದಿನ ಸಂಜೆಯಾದರೆ ಮಾರುಕಟ್ಟೆ ಸ್ಥಳದಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತವೆ. ಕಿಡಿಗೇಡಿಗಳು ಮದ್ಯಪಾನ ಮಾಡಲು ಉಪಯೋಗಿಸುತ್ತಾರೆ. ಇನ್ನು ಮಳೆಗಾಲದಲ್ಲಿ ರಸ್ತೆ ಬದಿಯಲ್ಲಿ ಸಂತೆ ಮಾಡುವುದು ತುಂಬಾ ಪ್ರಯಾಸವಾಗಿದೆ.

ಪುರಸಭೆ ಅಧಿಕಾರಿಗಳು ಮಾರುಕಟ್ಟೆ ಸ್ಥಳದಲ್ಲೇ ಸಂತೆ ನಡೆಯುವಂತೆ ಮಾಡಿ ಗ್ರಾಹಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕು ಎನ್ನುತ್ತಾರೆ ಗ್ರಾಹಕರಾದ ಮಂಜಮ್ಮ, ಗಿರಿಜಮ್ಮ.

## ಕೋಟೆ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮ

• ಉದಯವಾಹಿನಿ, ಚಿತ್ರದುರ್ಗ

ಭಾರತೀಯ ಪುರಾತತ್ವ ಇಲಾಖೆ ಚಿತ್ರದುರ್ಗ, ಕೋಟೆ ವಾಯುವಿಹಾರ ಸಂಘ ಚಿತ್ರದುರ್ಗ, ಜಿಲ್ಲಾ ಪರಿಸರ ಪ್ರೇಮಿಗಳ ಒಕ್ಕೂಟ ಚಿತ್ರದುರ್ಗ, ಭಾರತೀಯ ಯೋಗ ಶಿಕ್ಷಣ ಸಂಸ್ಥೆ (ರಿ.) ಚಿತ್ರದುರ್ಗ, ನೆಹರು ಯುವ ಕೇಂದ್ರ, ಚಿತ್ರದುರ್ಗ, ಎಸ್ .ಜೆ ಎಂ ಫಾರ್ಮಸಿ ಕಾಲೇಜ್ ಎನ್ಎಸ್ಎಸ್ ಘಟಕ ಚಿತ್ರದುರ್ಗ ಇವರುಗಳ ಸಂಯುಕ್ತಾಶ್ರಯದಲ್ಲಿ ಶನಿವಾರ ಬೆಳಗ್ಗೆ 7:00 ಗಂಟೆಯಿಂದ ಚಿತ್ರದುರ್ಗದ ಐತಿಹಾಸಿಕ ಕೋಟೆ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಜಿಲ್ಲಾ ಪರಿಸರ ಪ್ರೇಮಿಗಳ ಒಕ್ಕೂಟದ ಅಧ್ಯಕ್ಷ ಮಲ್ಲಿಕಾರ್ಜುನಯ್ಯ ಮಾತನಾಡಿ ಕೋಟೆ ಆವರಣದಲ್ಲಿ ಬಹುದಿನಗಳಿಂದ ಪ್ಲಾಸ್ಟಿಕ್ ತ್ಯಾಜ್ಯ ಮುಳ್ಳು ಗಿಡಗಂಟಿಗಳು ಬೆಳೆದಿದ್ದು ಇದರಿಂದ ಕೋಟೆಗೆ ಭೇಟಿ ನೀಡುವ ಪ್ರವಾಸಿಗರಲ್ಲಿ ಕೋಟೆಯ ಬಗ್ಗೆ ಕೀಳರಿಮೆ ಉಂಟಾಗುತ್ತಿದ್ದು ಅದಕ್ಕಾಗಿ ವಿವಿಧ ಸಂಘಟನೆಗಳ ಸಯೋಗದಲ್ಲಿ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಇದರಲ್ಲಿ ಕಾಲೇಜು ವಿದ್ಯಾರ್ಥಿಗಳ ಪಾತ್ರ ಬಹುದೊಡ್ಡದಾಗಿದೆ ವಿದ್ಯಾರ್ಥಿ ವಿಷಯದಿಂದಲೇ ಮಕ್ಕಳಲ್ಲಿ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವುದು


ಉದಯವಾಹಿನಿ ಚಿತ್ರ

ಅಗತ್ಯವಾಗಿದೆ ಎಂದು ಅಭಿ ಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಕೋಟೆ ವಾಯು ವಿಹಾರಿಗಳ ಸಂಘದ ಅಧ್ಯಕ್ಷ ಆರ್ ಸತ್ಯಣ್ಣ ಮಾತನಾಡಿ ಕೋಟಿ ಪ್ರವಾಸಿಗರು ತಿಂಡಿ ತಿಂದು ಬಿಸಾಡಿದ ಪ್ಲಾಸ್ಟಿಕ್ ಪೊಟ್ಟಣಗಳಲ್ಲಿನ ಆಹಾರ ಸೇವಿಸುವ ಕೋಟೆಯಲ್ಲಿ ಆಶ್ರಯ ಪಡೆದಿರುವ ನೂರಾರು ಕೋತಿಗಳು ನವಿಲುಗಳು ಗಿಳಿಗಳು ಪ್ರಾಣ ಕಳೆದುಕೊಳ್ಳುತ್ತಿವೆ ಸಾಧ್ಯವಾದಷ್ಟು ಸಾರ್ವಜನಿಕರು ಪ್ರವಾಸಿಗರು ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಕೋಟೆಯ ಆವರಣದೊಳಗೆ ತರದೆ ಇರುವುದು ಒಳ್ಳೆಯದು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಪರಿಸರ ಪ್ರೇಮಿಗಳಾದ ಕ್ಯಾಬಾನಾಯಕ್, ನಾಗರಾಜ್, ಮಲ್ಲಿಕಾರ್ಜುನಚಾರ್ ,ಚಿತ್ರದುರ್ಗ ಭಾರತೀಯ ಪುರಾತತ್ವ ಇಲಾಖೆ

> ಕೋಟೆಯ ಸುರಕ್ಷತೆ ಮತ್ತು ಸ್ವಚ್ಛತೆಗಾಗಿ ಭಾರತೀಯ ಪುರಾತತ್ವ ಇಲಾಖೆ ಕಾರ್ಮಿಕರು ಸಾಕಷ್ಟು ಶ್ರಮವಹಿಸುತ್ತಿದ್ದು ಆದರೂ ಕೆಲವೊಂದು ಸಮಯದಲ್ಲಿ ಪ್ರವಾಸದ ಸಂಖ್ಯೆ ಹೆಚ್ಚಾದಾಗ ಪ್ಲಾಸ್ಟಿಕ್ ಬಾಟಲಿಗಳು ಪ್ಲಾಸ್ಟಿಕ್ ಚೀಲಗಳು ಎಲ್ಲೆಂದರಲ್ಲಿ ಬಿಟ್ಟು ಹೋದರಿಂದ ಸ್ವಚ್ಛತೆಯ ಸಮಸ್ಯೆ ಉಂಟಾಗುತ್ತದೆ ಕೋಟೆ ಆವರಣದಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವ ಯಾವುದೇ ಸಂಘಟನೆ ಜೊತೆಗೆ ಎಂದಿಗೂ ಸಹಕಾರ ನೀಡುತ್ತದೆ - ಶ್ರೀಮತಿ ರಾಣಿ

ಅಧಿಕಾರಿ ಇಫ್ರಾನ್, ಭಾರತೀಯ ಯೋಗ ಶಿಕ್ಷಾ ಸಂಸ್ಥೆಯ ಅಧ್ಯಕ್ಷ ರವಿ ಕೆ. ಅಂಬೇಡ್ಕರ್, ಯೋಗ ಶಿಕ್ಷಕಿರಾದ ಶ್ರೀಮತಿ ಮಂಜುಳಾ ವಸಂತಲಕ್ಷ್ಮಿ ಕವಯಿತ್ರಿ ಶೋಭಾ ಮಲ್ಲಿಕಾರ್ಜುನ್ ಹಾಗೂ ಎಸ್ ಜೆ ಎಂ ಫಾರ್ಮಸಿ ಕಾಲೇಜಿನ ಎನ್ಎಸ್ಎಸ್ ಘಟಕದ ವಿದ್ಯಾರ್ಥಿಗಳು ಸ್ವಚ್ಛತಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

## ಉದಯವಾಹಿನಿ ವಿಶೇಷ ವರದಿಗೆ ಎಚ್ಚೆತ್ತುಕೊಂಡ ಅಧಿಕಾರಿಗಳ ತಂಡ ವಸತಿನಿಲಯಕ್ಕೆ ಭೇಟಿ

• ಉದಯವಾಹಿನಿ, ಚಿಂಚೋಳಿ


ಉದಯವಾಹಿನಿ ಚಿತ್ರ




ಪಟ್ಟಣದ ಹೊರವಲಯದಲ್ಲಿರುವ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಬಾಲಕಿಯರ ವಸತಿನಿಲಯದ ಕುರಿತು ವಿವಿಧ ಸಮಸ್ಯೆಗಳ ಕುರಿತು **ಉದಯವಾಹಿನಿ** ಪತ್ರಿಕೆಯಲ್ಲಿ ಡಿ.05ರಂದು ಬಾಲಕಿಯರ ವಸತಿನಿಲಯ ಸಮಸ್ಯೆಗಳ ಆಗರ ಮುಕ್ತಿ ಯಾವಾಗ ಎಂಬ ಶೀರ್ಷಿಕೆಯಡಿಯಲ್ಲಿ ವಿಶೇಷ ವರದಿ ಪ್ರಕಟಿಸಲಾಗಿತ್ತು.

ವರದಿಗೆ ಎಚ್ಚೇತುಕೊಂಡ ಅಧಿಕಾರಿಗಳು ವಸತಿನಿಲಯಕ್ಕೆ ಡಿ.06ರಂದು ಸಾಯಂಕಾಲ ಅಧಿಕಾರಿಗಳ ತಂಡದೊಂದಿಗೆ ತೆರಳಿ ವಿದ್ಯಾರ್ಥಿನಿಯರ ಸಮಸ್ಯೆ ಆಲಿಸಿ ನೂತನ ತಟ್ಟೆಗಳು,ಪಾತ್ರೆಗಳು ಬಗೋಣೆಗಳು,ಆಹಾರ ಸಾಮಾಗ್ರಿಗಳನ್ನು ವಸತಿನಿಲಯಕ್ಕೆ ವಿತರಿಸಿ ವಸತಿನಿಲಯದಲ್ಲಿಯೇ ಅಡುಗೆ ಮಾಡಿಸಿ ವಿದ್ಯಾರ್ಥಿನಿಯರ ಜೋತೆಯಲ್ಲಿ ಶಿಕ್ಷಣಾಧಿಕಾರಿ ಲಕ್ಷ್ಮಯ್ಯ,ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಜಯಪ್ಪ ಚಾಪಲ್,ವಾರ್ಡನ್ ಸಂಗೀತ ಊಟ ಮಾಡಿದರು.

24ಗಂಟೆಯಲ್ಲಿಯೇ **ಉದಯವಾಹಿನಿ** ಪತ್ರಿಕೆ ಪ್ರಕಟಿಸಿದ ವಿಶೇಷ ವರದಿಗೆ ಫಲಶೃತಿ ವಸತಿನಿಲಯದ ವಿದ್ಯಾರ್ಥಿನಿಯರಿಂದ **ಪತ್ರಿಕೆಗೆ ಅಭಿನಂದನೆಗಳ ಸುರಿಮಳೆ** ವಿದ್ಯಾರ್ಥಿನಿಯರು ಫುಲ್ ಖುಷಿಪಟ್ಟರು.

## ಡಾ.ಬಿ.ಆರ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ

• ಉದಯವಾಹಿನಿ, ಚಿಂಚೋಳಿ


ಉದಯವಾಹಿನಿ ಚಿತ್ರ

ತಾಲ್ಲೂಕಿನ ನಾಗಾಯಿದ್ಲಾಯಿ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಡಾ.ಬಿ.ಆರ್ ಅಂಬೇಡ್ಕರ್‌ರವರ 68ನೇ ಮಹಾಪರಿನಿರ್ವಾಣ ದಿನದ ಅಂಗವಾಗಿ ಪ್ರಭಾರಿ ಮುಖ್ಯ ಗುರುಗಳು ಸುಷ್ಮಿತಾ ಅವರು ಅಂಬೇಡ್ಕರ್ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಶಿಕ್ಷಕರಾದ ನಾಗರತ್ನ, ವೈಶಾಲಿದೇವಿ, ಕಸ್ತೂರಿಬಾಯಿ,ಮಹೇಬೂಬ ಪಟೇಲ್, ಜಗದೇವ ಗೌತಮ್, ರಾಘವೇಂದ್ರ ಹಾಗೂ ಕುಸರಂಪಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕ ಸಂತೋಷ ಸೇರಿದಂತೆ ಶಾಲಾ ಮಕ್ಕಳು ಉಪಸ್ಥಿತರಿದ್ದರು.

## ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ 30 ಸಾವಿರ ಕೋಟಿ ಮೀಸಲಿಡಲು ಆಗ್ರಹ

• ಉದಯವಾಹಿನಿ,ಬೆಳಗಾವಿ

ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಪ್ರತಿವರ್ಷ 130 ಸಾವಿರ ಕೋಟಿ ಅನುದಾನವನ್ನು ಪ್ರತ್ಯೇಕವಾಗಿ ಮೀಸಲಿಡಬೇಕು ಎಂದು ಆಡಿ ಹಂದಿಗುಂದದ ಶಿವಾನಂದ ಸ್ವಾಮೀಜಿ ಆಗ್ರಹಿಸಿದರು. ಜಿಲ್ಲೆ ನಗರದಲ್ಲಿ ನಾಗನೂರು ರುದ್ರಾಕ್ಷಿಮಠದ ಲಿಂ.ಶಿವಬಸವ ಸ್ವಾಮೀಜಿ 135ನೇ ಜಯಂತಿ ಮಹೋತ್ಸವ ಪ್ರಯುಕ್ತ, ಸಮಗ್ರ ಉತ್ತರ ಕರ್ನಾಟಕ ಅಭಿವೃದ್ಧಿಯಾಗಲಿ' ಎಂಬ ಧ್ಯೇಯವಾಕ್ಯದೊಂದಿಗೆ ಶನಿವಾರ ನಡೆದ ಜಾಗೃತಿ ಜಾಥಾ ಸಮಾರೋಪ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬೆಂಗಳೂರು ಗ್ರಾಮಾಂತರ 'ದಕ್ಷಿಣ ಕರ್ನಾಟಕಕ್ಕೆ ಹೋಲಿಸಿದರೆ, ಉತ್ತರ ಕರ್ನಾಟಕ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ಹೆಸರಿಗೆ ಮಾತ್ರ ಇಲ್ಲಿ ಸುವರ್ಣ ವಿಧಾನಸೌಧ ನಿರ್ಮಾಣವಾಯಿತು.

ಆದರೆ, ಜನರ ಬದುಕು ಸುಧಾರಿಸಲಿಲ್ಲ. ಬಹಳ ವರ್ಷಗಳಿಂದಲೂ ಉತ್ತರ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆ ಮುಂದುವರಿದೇ ಇದೆ. ಇದಕ್ಕೆ ಕಡಿವಾಣ ಬೀಳದಿದ್ದರೆ, ಪ್ರತ್ಯೇಕ ರಾಜ್ಯದ ಬೇಡಿಕೆಗೆ ಮತ್ತೆ ಧ್ವನಿ ಬರಲಿದೆ' ಎಂದು ಎಚ್ಚರಿಕೆ ಕೊಟ್ಟರು.

ರಾಜ್ಯ ಸರ್ಕಾರ ಇನ್ನಾದರೂ ಎಚ್ಚೆತ್ತುಕೊಳ್ಳದಿದ್ದರೆ ಉತ್ತರ ಕರ್ನಾಟಕದ ಹಳ್ಳಿ–ಹಳ್ಳಿಗಳಿಂದ ಜನರು ಹೋರಾಟಕ್ಕೆ ಧುಮುಕುತ್ತಾರೆ. ಅದಕ್ಕಿಂತ ಮುನ್ನವೇ ಈ ಭಾಗಕ್ಕೆ ಅನ್ಯಾಯ ಸರಿಪಡಿಸಲು ಮುಂದಾಗಬೇಕು' ಎಂದು ಆಗ್ರಹಿಸಿದರು.

## ತುರ್ತು ಚಿಕಿತ್ಸೆ ನೀಡದ ವೈದ್ಯರು: ಆಸ್ಪತ್ರೆ ಎದುರೇ ರೋಗಿ ಮಲಗಿಸಿದ ಕುಟುಂಬಸ್ಥರು

• ಉದಯವಾಹಿನಿ, ಭದ್ರಾವತಿ

ತುರ್ತು ಚಿಕಿತ್ಸೆಗಾಗಿ ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ಸಂಜೆ ಭೇಟಿ ನೀಡಿದ್ದ ಯುವಕನೊಬ್ಬನಿಗೆ ಸೂಕ್ತ ಚಿಕಿತ್ಸೆ ನೀಡದೆ ವೈದ್ಯರು ಕರ್ತವ್ಯಲೋಪ ಎಸಗಿದ್ದಾರೆ' ಎಂದು ಕುಟುಂಬದ ಸದಸ್ಯರು ಆಸ್ಪತ್ರೆ ಎದುರು ಆಕ್ರೋಶ ವ್ಯಕ್ತಪಡಿಸಿದರು. ಅನಿಲ್ ಎಂಬಾತನನ್ನು ಸಂಜೆ 4ರ ಸುಮಾರಿಗೆ ಆಸ್ಪತ್ರೆಗೆ ಕರೆ ತಂದಾಗ ಸೂಕ್ತ ಚಿಕಿತ್ಸೆ ನೀಡದ ಸಿಬ್ಬಂದಿ. ಉದಾಸೀನತೆಯಿಂದ ವರ್ತಿಸಿದರು.

ಮನೆಗೆ ತೆರಳುವಂತೆ ಏರು ಧ್ವನಿಯಲ್ಲಿ ಸೂಚಿಸಿದರು' ಎಂದು ಕುಟುಂಬದವರು ಆರೋಪಿಸಿದರು. ನಗರಸಭೆ ಮಾಜಿ ಸದಸ್ಯ ಬಾಲಕೃಷ್ಣ ಅವರು ಕರೆ ಮಾಡಿ ಸೂಚಿಸಿದಾಗ ಚಿಕಿತ್ಸೆ ನೀಡಲು ಮುಂದಾದರು. ಯುವಕನನ್ನು 2 ಗಂಟೆವರೆಗೆ ಆಸ್ಪತ್ರೆಯ ಬಾಗಿಲಲ್ಲೇ ಮಲಗಿಸಬೇಕಾಗಿತ್ತು.

ಕರ್ತವ್ಯ ಲೋಕ ಎಸಗಿದ ಆಸ್ಪತ್ರೆಯ ಶುಶೂಷಕ ಅಧಿಕಾರಿ ಸೂರಜ್ ಮತಿ ಎಲಿಜಬೆತ್ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಮುಖ್ಯ ವೈದ್ಯಾಧಿಕಾರಿ ಡಾ. ಶಂಕರಪ್ಪ ಅವರಿಗೆ ದೂರು ಸಲ್ಲಿಸಿದರು. 'ತುರ್ತು ಚಿಕಿತ್ಸೆಗೆ ಬಂದ ಯುವಕನಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡದೇ ಕರ್ತವ್ಯ ಲೋಪ ಎಸಗಿದ ಸಂಬಂಧ ದೂರು ಬಂದಿದ್ದು, ಕಾರಣ ನೀಡುವಂತೆ ಸೂರಜ್ ಮತಿ ಎಲಿಜಬೆತ್ ಅವರಿಗೆ ಸೂಚಿಸಲಾಗಿದೆ' ಎಂದು ಡಾ. ಶಂಕರಪ್ಪ ತಿಳಿಸಿದರು.

## ಶ್ರೀ ಬನದ ರಾಚೋಟೇಶ್ವರ ಅದ್ಧೂರಿ ಜಾತ್ರಾ ಮಹೋತ್ಸವ

• ಉದಯವಾಹಿನಿ, ವಡಗೇರಾ

ಜಾತ್ರೆಗಳು ಸೌಹಾರ್ದತೆಯ ಸಂಕೇತವಾಗಿದೆ ಪ್ರತಿಯೊಬ್ಬರು ಧಾರ್ಮಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ದೋರನಳ್ಳಿಯ ಮಹಾಂತೇಶ್ವರ ಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಶ್ರೀ ಷಟಸ್ಥಲ ಬ್ರಹ್ಮಿ ಶ್ರೀ ಮಡಿವಾಳೇಶ್ವರ ಸ್ವಾಮೀಜಿ ಹೇಳಿದರು. ಪಟ್ಟಣದ ಶ್ರೀ ಬನದ ರಾಚೋಟೇಶ್ವರ ಜಾತ್ರಾ ಮಹೋತ್ಸವ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಮಠ ಮಂದಿರಗಳು ನೆಮ್ಮದಿ ನೀಡುವ ತಾಣಗಳಾಗಿವೆ ಶುದ್ಧ ಕಾಯಕದಲ್ಲಿ ದೇವರಿದ್ದಾನೆ ಧಾರ್ಮಿಕ ಸಾಮಾಜಿಕ ಕಾರ್ಯಗಳಿಂದ ಮಾತ್ರ ಮೋಕ್ಷ ಕಾಣಲು ಸಾಧ್ಯ ಶ್ರೀ ಬನದ ರಾಚೋಟೇಶ್ವರರು ಪವಾಡ ಪುರುಷರಾಗಿದ್ದರು ಅವರ ಆಶೀರ್ವಾದ ಸದಾಕಾಲ ತಮ್ಮೆಲ್ಲರ ಮೇಲೆ ಇರಲಿ ಎಂದು ಆಶೀರ್ವಚನ ನೀಡಿದರು .


ಉದಯವಾಹಿನಿ ಚಿತ್ರ

ಈ ಮೊದಲು ಶುಕ್ರವಾರದಂದು ಬೆಳಿಗ್ಗೆಯಿಂದಲೇ ಪಟ್ಟಣದ ಶ್ರೀ ಬನದ ರಾಚೋಟೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ಬೆಳಿಗ್ಗೆ ಕರ್ತೃ ಗದ್ದುಗೆ ಉತ್ಸವ ಮೂರ್ತಿಗೆ ರುದ್ರಾಭಿಷೇಕ ಪೂಜೆ ಕಾರ್ಯಕ್ರಮ ಜರುಗಿದವು ಸಾಯಂಕಾಲ 5:00ಗೆ ಪಟ್ಟಣದ ಬಸಯ್ಯಸ್ವಾಮಿ ಕೊಡಮನಹಳ್ಳಿ ರವರ ಮನೆಯಿಂದ ರಥೋತ್ಸವದ ಕಳಸವು ಬಾಜಾ ಭಜಂತ್ರಿ ಪುರವಂತಿಗೆ ಸೇವೆ ಮುಖಾಂತರ ದೇವಸ್ಥಾನಕ್ಕೆ ತಲುಪಿತು. ನಂತರ ಸಂಜೆ ಶ್ರೀ ಬನದ ರಾಚೋಟೇಶ್ವರರ ರಥೋತ್ಸವವು ಅತ್ಯಂತ ಸಡಗರ ಸಂಭ್ರಮದಿಂದ ಜರುಗಿತು ಭಕ್ತರು ತೇರಿಗೆ ಬಾಳೆಹಣ್ಣು ಹುತ್ತತ್ತಿ ಎಸೆದು ಭಕ್ತಿ ಸಮರ್ಪಿಸಿದರು. ರಥೋತ್ಸವ ಹಿನ್ನೆಲೆಯಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ದರ್ಶನ ಪಡೆದು ಉಪವಾಸ ವೃತ ಆಚರಿಸಿ ನೈವೇದ್ಯ ಸಮರ್ಪಿಸಿದರು ಜಾತ್ರೆಯಲ್ಲಿ ಮಕ್ಕಳು ಮಹಿಳೆಯರು ಯುವಕರು ಸಂಭ್ರಮಿಸಿ ಮಕ್ಕಳ ಆಟಿಕೆ ಸಾಮಾನುಗಳು ಬೆಂಡು ಬೆತ್ತಾಸು ಮಂಡಾಳು ಲಡ್ಡು ಇನ್ನಿತರ ಸಿಹಿ ತಿಂಡಿಗಳನ್ನು ಖರೀದಿಸಿದರು.

ಈ ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ ಭಕ್ತರಿಗೆ ಶ್ರೀ ಬನದ ರಾಚೋಟೇಶ್ವರ ಸೇವಾ ಟ್ರಸ್ಟ್‌ನ ವತಿಯಿಂದ ಪ್ರಸಾದ ವ್ಯವಸ್ಥೆ ಹಮ್ಮಿಕೊಳ್ಳಲಾಗಿತ್ತು. ರಾತ್ರಿ ಇಡೀ ಭಜನಾ ಕಾರ್ಯಕ್ರಮ ಜರಗಿತ್ತು ಈ ಜಾತ್ರಾ ಮಹೋತ್ಸವದ ಕಾರ್ಯಕ್ರಮದಲ್ಲಿ ಪಟ್ಟಣದ ಸಾರ್ವಜನಿಕರು ಸುತ್ತಮುತ್ತಲು ಗ್ರಾಮದ ಭಕ್ತಾದಿಗಳು ಭಾಗವಹಿಸಿದ್ದರು ಜಾತ್ರಾ ಕಾರ್ಯಕ್ರಮದ ನಿರೂಪಣೆಯನ್ನು ಶಿಕ್ಷಕ ಸುರೇಶ ಕರಣಗಿ ನಿರೂಪಿಸಿ ವಂದಿಸಿದರು.

## ಸಾರ್ವಜನಿಕರ ಬಳಕೆಗೆ ಯೋಗ್ಯವಾಗಿರದ ಶೌಚಾಲಯಗಳು

• ಉದಯವಾಹಿನಿ, ತೀರ್ಥಹಳ್ಳಿ

ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿನ ಸಾರ್ವಜನಿಕ ಶೌಚಾಲಯಗಳ ಸ್ಥಿತಿ ದುರ್ಗತಿಗೆ ತಲುಪಿರುವ ಕಾರಣ ಸಾರ್ವಜನಿಕರ ಬಳಕೆಯಿಂದ ದೂರ ಉಳಿದಿವೆ.

ಶಿವಮೊಗ್ಗ ಈ ರಾಷ್ಟ್ರೀಯ ತುಂಗಾ ನದಿಗೆ ಹೊಂದಿಕೊಂಡಂತೆ ರಥಬೀದಿಯಲ್ಲಿ ನಿರ್ಮಿಸಿರುವ ಸಾರ್ವಜನಿಕ ಶೌಚಾಲಯದ ಬಾಗಿಲು ಮುರಿದಿದೆ.

ಸ್ನಾನಗೃಹವು ಮದ್ಯಪ್ರಿಯರ ಅಡಗು ತಾಣವಾಗಿ ಬದಲಾಗಿದೆ. ಕಟ್ಟಡದ ಮೇಲ್ಭಾಗದಲ್ಲಿ ನೀರಿನ ತೊಟ್ಟಿ ನಿರ್ಮಿಸಿದ್ದರೂ ನಲ್ಲಿ ಸಂಪರ್ಕ ನೀಡಿಲ್ಲ.

ನೀರೇ ಇಲ್ಲದೆ ಶೌಚಾಲಯದ ಬಳಕೆ ಹೇಗೆ ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಟಿಎಪಿಸಿ ಎಂಎಸ್ ರಸ್ತೆಯ ಶೌಚಾಲಯಕ್ಕೆ ಶೌಚ ಗುಂಡಿಯೇ ಇಲ್ಲ. ಮಲ, ಮೂತ್ರ ನೇರವಾಗಿ ರಾಜಕಾಲುವೆ ಸೇರುತ್ತಿದೆ. ರಾಜಕಾಲುವೆ ನೀರು ಶುದ್ಧೀಕರಣಗೊಳ್ಳದೆ ತುಂಗಾ ನದಿ ಸೇರುತ್ತಿದೆ. ಸಂತೆ ಮಾರ್ಕೆಟ್ ಶೌಚಾಲಯಕ್ಕೂ ನೀರಿನ ಸೌಲಭ್ಯ,



ಉದಯವಾಹಿನಿ ಚಿತ್ರ

ಬಾಗಿಲುಗಳು ಇಲ್ಲ. ಶೌಚಾಲಕ್ಕೆ ತೆರಳುವ ರಸ್ತೆಯಲ್ಲಿ ಕಸದ ರಾಶಿ ಬಿದ್ದಿದ್ದು, ಜನರು ತಿರುಗಾಡಲು ಸಾಧ್ಯವಾಗದ ಸ್ಥಿತಿ ಇದೆ.

ಜೆಸಿ ಆಸ್ಪತ್ರೆಗೆ ಹೊಂದಿಕೊಂಡಂತೆ ಕೊಪ್ಪ ಸರ್ಕಲ್‌ನಲ್ಲಿ ಶೌಚಾಲಯ ನಿರ್ಮಿಸಿದ್ದು, ಆಸ್ಪತ್ರೆಗೆ ಬರುವ ರೋಗಿಗಳು ಮತ್ತು ವೀಕ್ಷಕರು ಬಳಸುತ್ತಾರೆ. ಸುತ್ತಮುತ್ತಲ ವಾಣಿಜ್ಯ ಮಳಿಗೆಗಳ ವ್ಯಾಪಾರಸ್ಥರಿಗೂ ಅನುಕೂಲವಾಗಿತ್ತು. ಆದರೆ, ಈಚೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಶೃಂಗೇರಿ ಮಾರ್ಗವಾಗಿ ರಸ್ತೆ ನಿರ್ಮಿಸಿದ್ದು ಬೃಹತ್ ತಡೆಗೋಡೆ ನಿರ್ಮಿಸಿರುವ ಕಾರಣ ಶೌಚಾಲಯ ಇದೆ ಎಂಬುದೇ ಯಾರಿಗೂ ತಿಳಿಯದಂತಾಗಿದೆ.

ಮುಖ್ಯ ಬಸ್ ನಿಲ್ದಾಣ, ತಾಲ್ಲೂಕು ಕಚೇರಿ, ಆಗುಂಬೆ ವೃತ್ತದಲ್ಲಿ ಪಾವತಿಸಿ ಉಪಯೋಗಿಸುವ ಶೌಚಾಲಯಗಳಿವೆ. ಇದರ ನಿರ್ವಹಣೆ ಜವಾಬ್ದಾರಿಯನ್ನು ಖಾಸಗಿ ಸಂಸ್ಥೆಗೆ ವಹಿಸಲಾಗಿದೆ. ಆದರೆ, ಸೆಪ್ಟಿಕ್ ಟ್ಯಾಂಕ್ ಅನ್ನು ಅವೈಜ್ಞಾನಿಕವಾಗಿ ನಿರ್ಮಿಸಿರುವ ಕಾರಣ ಎರಡು– ಮೂರು ದಿನಗಳಿಗೊಮ್ಮೆ ಶೌಚ ಗುಂಡಿ ಭರ್ತಿಯಾಗುತ್ತಿದೆ.

> ಒಮ್ಮೆ ಸಕ್ಕಿಂಗ್ ಯಂತ್ರ ರಸ್ತೆಗೆ ಇಳಿದರೆ ಸುತ್ತಮುತ್ತಲ 500 ಮೀಟರ್ ವ್ಯಾಪ್ತಿಯಲ್ಲಿ ದುರ್ವಾಸನೆ ಹರಡುತ್ತಿದೆ. ಸಾರ್ವಜನಿಕರು ಪಟ್ಟಣದ ವ್ಯವಸ್ಥೆಯನ್ನು ನಿತ್ಯ ಶಪಿಸುವಂತಾಗಿದೆ. ರಥಬೀದಿಯಲ್ಲಿರುವ ಸಾರ್ವಜನಿಕ ಶೌಚಾಲಯದ ಮುಂಭಾಗದಲ್ಲಿ ಅಂಗನವಾಡಿ ಕೇಂದ್ರವಿದೆ. ಬೀದರ್ ಅಲ್ಲಿನ ಮಕ್ಕಳು ಮತ್ತು ಸಿಬ್ಬಂದಿ ಶೌಚಾಲಯ ಬಳಸುತ್ತಿದ್ದರು.

## ಸೊಸೆಗೆ ಸರ್ಕಾರ ಖಾಯಂ ನೌಕರಿ ಕೊಡಕ್ಕೆ ಮನಸ್ಸು ಮಾಡಿ

• ಉದಯವಾಹಿನಿ, ಚಿತ್ರದುರ್ಗ

> ಸದ್ಯಕ್ಕೆ ನನ್ನ ಸೊಸೆ, ಮೊಮ್ಮಗು ಮನೆಯಲ್ಲಿಲ್ಲ. ಅವರ ತವರು ಮನೆಯಲ್ಲಿದ್ದಾರೆ. ಅವರು ಇಲ್ಲಿ ಇದ್ದಿದ್ರೆ ಚೆನ್ನಾಗಿರುತ್ತಿತ್ತು ಗುರುಗಳು ಈ ಕಡೆ ಬಂದಾಗ ಮನೆಗೆ ಬಂದು ಪೂಜೆ ಮಾಡಿ ಹೋಗಿದ್ದಾರೆ. ನಿನ್ನೆಯೇ ಬಂದು ಮನೆಯಲ್ಲಿ ವಾಸ್ತವ್ಯ ಹೂಡಿ ಪೂಜೆ ಮಾಡಿ ಹೋಗಿದ್ದಾರೆ. ಗುರುಗಳ ದಯೆಯಿಂದ ನಮಗೆ ಎಲ್ಲಾ ಒಳ್ಳೆಯದಾಗುತ್ತದೆ ಎಂಬ ವಿಶ್ವಾಸವಿದೆ' ಎಂದಿದ್ದಾರೆ.

ದರ್ಶನ್ ಆಂಡ್ ಗ್ಯಾಂಗ್ ನಿಂದ ಹತನಾಗಿದ್ದಾನ ಎನ್ನಲಾಗಿರುವ ಚಿತ್ರದುರ್ಗದ ರೇಣುಕಾಸ್ವಾಮಿ ಪತ್ನಿಗೆ ಸರ್ಕಾರ ಖಾಯಂ ಸರ್ಕಾರೀ ನೌಕರಿ ಕೊಡಲಿ ಎಂದು ರೇಣುಕಾ ತಂದೆ ಮತ್ತೆ ಡಿಮ್ಯಾಂಡ್ ಮಾಡಿದ್ದಾರೆ. ನಿನ್ನ ರೇಣುಕಾಸ್ವಾಮಿ ಮನೆಯಲ್ಲಿ ರಂಭಾಪುರಿ ಶ್ರೀಗಳ ನೇತೃತ್ವದಲ್ಲಿ ಪೂಜೆ ನಡೆಸಲಾಗಿತ್ತು. ಮನೆಯಲ್ಲಿ ಸುಖ, ಶಾಂತಿ, ನೆಮ್ಮದಿಗಾಗಿ ರಂಭಾಪುರಿ ಶ್ರೀಗಳು ಪೂಜೆ ಮಾಡಿದ್ದರು. ಇದಾದ ಬಳಿಕ ರೇಣುಕಾಸ್ವಾಮಿ ತಂದೆ ಕಾಶೀನಾಥಯ್ಯನವರನ್ನು ಮಾಧ್ಯಮಗಳು ಮಾತನಾಡಿಸಿವೆ. ಈ ವೇಳೆ ಅವರು ತಮ್ಮ ಅಳಲು ತೋಡಿಕೊಂಡಿದ್ದಾರೆ.

'ನಮ್ಮ ಜಗದ್ಗುರುಗಳಾದ ರಂಭಾಪುರ ಶ್ರೀಗಳು ನಮ್ಮ ಮನೆಗೆ ಬಂದು ಪೂಜೆ ಮಾಡಿ ನಮ್ಮ ಮಗನ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥನೆ ಮಾಡಿ ಹೋಗಿದ್ದಾರೆ. ನಿಮಗೆ ಒಳ್ಳೆಯದಾಗುತ್ತದೆ ಎಂದು ಹೇಳಿ ಹೋಗಿದ್ದಾರೆ.

ನಾವು ಇಲ್ಲಿಯವರೆಗೂ ನ್ಯಾಯಾಂಗ, ಪೊಲೀಸರ ಮೇಲೆ ನಂಬಿಕೆ ಇಟ್ಟುಕೊಂಡಿದ್ದೇವೆ. ಮುಂದೆಯೂ ಇರುತ್ತದೆ.

ಇದರ ಜೊತೆಗೆ ನಮ್ಮ ಸೊಸೆ ಸಹಾನುಭೂತಿಯಿಂದ ಸರ್ಕಾರ ಒಂದು ಸರ್ಕಾರಿ ಖಾಯಂ ನೌಕರಿ ಕೊಡಲಿ ಎಂದು ಕೇಳಿಕೊಳ್ಳುತ್ತೇವೆ' ಎಂದು ಕಾಶೀನಾಥಯ್ಯ ಮಾಧ್ಯಮಗಳು ಮುಂದೆ ಕಣ್ಣೀರು ಹಾಕಿದ್ದಾರೆ.

# ಇಲ್ಲದ ನಗರ ಸಾರಿಗೆ ಸೇವೆ: ಪ್ರಯಾಣಿಕರ ಪರದಾಟ

## • ನಗರದಾದ್ಯಂತ ಆಟೋ ಲಾಬಿ ವಿಪರೀತವಾಗಿದ್ದು ಸ್ಥಳೀಯವಾಗಿ ಪ್ರಯಾಣಿಕರು ಪರದಾಡುವ ಸ್ಥಿತಿ ನಿರ್ಮಾಣ

• ಉದಯವಾಹಿನಿ ಚಿತ್ರದುರ್ಗ

ಕೋಟೆನಗರಿ ದಿನೇದಿನೇ ವಿಸ್ತಾರಗೊಳ್ಳುತ್ತಿದ್ದು ಸ್ಥಳೀಯ ಬಡಾವಣೆಗಳಿಗೆ 'ನಗರ ಸಾರಿಗೆ ಸೇವೆ' ಕಲ್ಪಿಸಬೇಕು ಎನ್ನುವ ಜನರ ಕೂಗಿಗೆ ಕೆಎಸ್ಆರ್‌ಟಿಸಿ ಅಧಿಕಾರಿಗಳು ಇನ್ನೂ ಸ್ಪಂದಿಸಿಲ್ಲ.

ನಗರದಾದ್ಯಂತ ಆಟೋ ಲಾಬಿ ವಿಪರೀತವಾಗಿದ್ದು ಸ್ಥಳೀಯವಾಗಿ ಪ್ರಯಾಣಿಕರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಈ ಹಿಂದೆ ನಗರ ವ್ಯಾಪ್ತಿಯಲ್ಲಿ ನಾಲ್ಕು ಬಾರಿ ಸ್ಥಳೀಯ ಬಸ್ ಸೇವೆ ಆರಂಭಗೊಂಡು ಸ್ಥಗಿತವಾಗಿದೆ. ಸಿಬ್ಬಂದಿ ಕೊರತೆ, ಬಸ್ ಕೊರತೆ, ರಸ್ತೆಗಳ ದುರವಸ್ಥೆ ನೆಪದಲ್ಲಿ ಬಸ್ ಸಂಚಾರಕ್ಕೆ ಅಂತ್ಯ ಹಾಡಲಾಗಿದೆ. ಈಚೆಗೆ ಕೋವಿಡ್ ನಂತರ ನಿಂತು ಹೋದ ಸ್ಥಳೀಯ ಬಸ್ ಸಂಚಾರ ಸೇವೆ ಇಲ್ಲಿಯವರೆಗೂ ಆರಂಭಗೊಂಡಿಲ್ಲ. ಹೀಗಾಗಿ ನಗರ ವ್ಯಾಪ್ತಿಯಲ್ಲಿ ಆಸ್ಪತ್ರೆ, ಬಸ್ ನಿಲ್ದಾಣ, ರೈಲು ನಿಲ್ದಾಣ, ಮಾರುಕಟ್ಟೆಗೆ ಬರುವ ಜನರು ಆಟೊಗಳ ಮೇಲೆ ಅವಲಂಬಿಸುವಂತಾಗಿದೆ.

ಸದ್ಯ ನಗರದಲ್ಲಿ ಐಯುಡಿಪಿ ಲೇಔಟ್ ಹಾಗೂ ಕೋಡನಹಟ್ಟಿ ಮಾರ್ಗದಲ್ಲಿ ಮಾತ್ರ ಬಸ್ ಸಂಚರಿಸುತ್ತಿದೆ. ಉಳಿದಂತೆ ಯಾವ ಬಡಾವಣೆಗಳಿಗೂ ಬಸ್ ಸಂಪರ್ಕವಿಲ್ಲ. ಈ ಹಿಂದೆ 15ಕ್ಕೂ ಹೆಚ್ಚು ಬಸ್‌ಗಳು ವಿವಿಧ ಮಾರ್ಗಗಳಲ್ಲಿ ಓಡಾಡುತ್ತಿದ್ದವು. ಜೋಗಿಮಟ್ಟಿ ರಸ್ತೆ– ಮಾಳಪ್ಪನಹಟ್ಟಿ, ಮಾಸ್ತಮ್ಮ ಲೇಔಟ್– ಮಾಳಪ್ಪನಹಟ್ಟಿ, ಮಠದ ಕುರುಬರಹಟ್ಟಿ– ಇಂಗಳದಾಳ, ಮಾಳಪ್ಪನಹಟ್ಟಿ– ಆಡುಮಲ್ಲೇಶ್ವರ ಕಿರು ಮೃಗಾಲಯ ಸೇರಿದಂತೆ ಹಲವು ಮಾರ್ಗಗಳಲ್ಲಿ ಬಸ್ ಓಡಾಡುತ್ತಿದ್ದವು.

**ಕೂಲಿಕಾರರಿಗೆ ತೊಂದರೆ**

> ಅಪಾಯಕಾರಿ ಸ್ಥಿತಿಯಲ್ಲಿ ಆಟೋ ರಿಕ್ಷಾಗಳ ಓಡಾಟ ಶಾಲಾ ಮಕ್ಕಳು, ರೋಗಿಗಳು, ಕೂಲಿಕಾರರಿಗೆ ತೊಂದರೆ ಐತಿಹಾಸಿಕ ಪ್ರವಾಸಿ ತಾಣಗಳಿಗೆ ಬಸ್ ಸಂಪರ್ಕವಿಲ್ಲ ಶ್ರೀನಿವಾಸ್ ವಿಭಾಗೀಯ ನಿಯಂತ್ರಣಾಧಿಕಾರಿ ಚಿತ್ರದುರ್ಗಸದ್ಯ ನಗರ ಸಾರಿಗೆ ಸೇವೆ ನೀಡುವ ಯಾವುದೇ ಪ್ರಸ್ತಾವ ಇಲ್ಲ. ಮುಂದಿನ ದಿನಗಳಲ್ಲಿ ಹೆಚ್ಚುವರಿ ಸಿಬ್ಬಂದಿ ನೇಮಕಾತಿಯಾದರೆ ನಗರದಲ್ಲಿ ಬಸ್ ಓಡಿಸುವ ಬಗ್ಗೆ ಚಿಂತಿಸಲಾಗುವುದು

ನರ್ಮ್' ಯೋಜನೆಯಡಿ ಬಂದಿದ್ದ ಬಸ್‌ಗಳನ್ನು ಸ್ಥಳೀಯವಾಗಿ ಓಡಿಸಲಾಗುತ್ತಿತ್ತು.


ಉದಯವಾಹಿನಿ ಚಿತ್ರ

ಆದರೆ ಕೋವಿಡ್ ನಂತರ ನಗರ ಸೇವೆ ಸ್ಥಗಿತಗೊಂಡಿದ್ದು ಈ ಬಸ್‌ಗಳನ್ನು ಶಿವಮೊಗ್ಗ, ದಾವಣಗೆರೆ ಮಾರ್ಗಗಳಲ್ಲಿ ಓಡಿಸಲಾಗುತ್ತಿದೆ. ಬಸ್ ಸಂಚಾರ ಸ್ಥಗಿತಕ್ಕೆ ರಸ್ತೆ ದುರವಸ್ಥೆ ಕಾರಣ ಎಂದು ಅಧಿಕಾರಿಗಳು ಕಾರಣ ನೀಡಿದ್ದರು. ಆದರೆ ಸದ್ಯ ವಿವಿಧೆಡೆ ರಸ್ತೆ ದುರಸ್ತಿಯಾಗಿದ್ದು ಮತ್ತೆ ಬಸ್ ಸಂಚಾರ ಆರಂಭಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ನಗರದಿಂದ 10–15 ಕಿ.ಮೀ ವ್ಯಾಪ್ತಿಯಲ್ಲಿರುವ ಹಳ್ಳಿಗಳಿಗೂ ಸ್ಥಳೀಯ ಬಸ್ ಸಂಚಾರ ಸೇವೆ ಒದಗಿಸಬೇಕು ಎಂಬ ಒತ್ತಾಯವಿದೆ. ನಗರದ ಮಾರುಕಟ್ಟೆಗಳಿಗೆ ಬರುವ ವ್ಯಾಪಾರಿಗಳು, ಕಟ್ಟಡ ಕೆಲಸಕ್ಕೆ ಬರುವ ಕಾರ್ಮಿಕರು, ಶಾಲಾ– ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳು, ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಬಸ್ ಸೇವೆ ಒದಗಿಸಬೇಕು ಎಂಬ ಒತ್ತಡವಿದೆ.

> ಕಲ್ಲಿನಕೋಟೆ ಸೇರಿದಂತೆ ನಗರದ ವಿವಿಧ ಐತಿಹಾಸಿಕ ಸ್ಮಾರಕ ಸ್ಥಳಗಳಿಗೆ ಭೇಟಿ ನೀಡಲು ಆಟೊ ಹೊರತುಪಡಿಸಿ ಬೇರೆ ಯಾವುದೇ ಸಂಪರ್ಕವಿಲ್ಲ. ಚಂದ್ರವಳ್ಳಿ, ಆಡುಮಲ್ಲೇಶ್ವರ ಕಿರುಮೃಗಾಲಯಕ್ಕೂ ಬಸ್ ಸೇವೆ ಇಲ್ಲದಾಗಿದೆ. ಹೀಗಾಗಿ ಪ್ರವಾಸಿಗರು ಆಟೊಗಳಿಗೆ ದುಪ್ಪಟ್ಟು ಹಣ ನೀಡುವುದು ಅನಿವಾರ್ಯವಾಗಿದೆ. 'ಮೈಸೂರಿನಲ್ಲಿರುವ ಅಂಬಾರಿ ಮಾದರಿಯಲ್ಲಿ ಚಿತ್ರದುರ್ಗದ ಸ್ಮಾರಕಗಳ ಪ್ರದಕ್ಷಿಣೆಗಾಗಿ ಬಸ್ ಸಂಚಾರ ಆರಂಭಿಸಬೇಕು. ಮೈಸೂರಿ ರೀತಿ ಡಬಲ್ ಡೆಕ್ಕರ್ ಬಸ್ ಅಲ್ಲದಿದ್ದರೂ ಸಾಮಾನ್ಯ ವಾಹನವನ್ನಾದರೂ ಹಾಕಬೇಕು -ರುದ್ರಮುನಿ, ಜೋಗಿಮಟ್ಟಿ ರಸ್ತೆಯ ನಿವಾಸಿ

**ಬಸ್ ಸಂಚಾರ ಸ್ಥಗಿತಕ್ಕೆ ರಸ್ತೆ ದುರವಸ್ಥೆ ಕಾರಣ**

ನಗರದಲ್ಲಿ ಯಾವುದೇ ಬಡಾವಣೆಗೆ ತೆರಳುವುದಕ್ಕೂ ಆಟೋಗಳನ್ನು ಆಶ್ರಯಿಸಬೇಕಾಗಿದೆ.

ಲಗೇಜ್ ಸಾಗಿಸುವ ಆಟೊಗಳಲ್ಲಿ ಪ್ರಯಾಣಿಕರನ್ನು ಕರೆದೊಯ್ಯುತ್ತಾರೆ. ಅವರು ಕೇಳಿದಷ್ಟು ಹಣವನ್ನು ತೆರಬೇಕಾಗಿದೆ. ಸಿಟಿ ಬಸ್ ಸೇವೆ ಆರಂಭಿಸಬೇಕು ಎಂದು ಒತ್ತಾಯಿಸುತ್ತಿದ್ದರೂ ಸಾರಿಗೆ ಸಂಸ್ಥೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ' ಎಂದು ಪ್ರಯಾಣಿಕರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ಪ್ರಯಾಣಿಕರು, ಶಾಲಾ ಮಕ್ಕಳು ಆಟೊಗಳಲ್ಲಿ ಅಪಾಯಕಾರಿ ಸ್ಥಿತಿಯಲ್ಲಿ ಪ್ರಯಾಣ ಮಾಡುತ್ತಿದ್ದಾರೆ.

5–6 ಜನ ಪ್ರಯಾಣಿಸಬೇಕಾದ ಆಟೋಗಳಲ್ಲಿ 10–15 ಜನರನ್ನು ತುಂಬಿಕೊಂಡು ಓಡಾಡುತ್ತಿದ್ದಾರೆ. ಗಾಂಧಿ ವೃತ್ತ, ಚಳ್ಳಕೆರೆ ಗೇಟ್‌ಗಳಲ್ಲಿ ಆಟೊಗಳು ಪ್ರಯಾಣಿಕರನ್ನು ಹತ್ತಿಸಿಕೊಂಡು ತೆರಳುತ್ತವೆ. ಆಟೋಗಳಿಗೆ ನಿಯಂತ್ರಣ ಹೇರುವ ಕೆಲಸವನ್ನು ಪೊಲೀಸರು ಮಾಡುತ್ತಿಲ್ಲ ಎಂದು ಪ್ರಯಾಣಿಕರು ಆರೋಪಿಸುತ್ತಾರೆ.

# ಕಾಂಗೋದಲ್ಲಿ ನಿಗೂಢ ಜ್ವರಕ್ಕೆ 97 ಮಂದಿ ಬಲಿ

## ಹೊಸ ಕಾಯಿಲೆಗೆ 'ಡಿಸೀಸ್ ಎಕ್ಸ್' ಎಂದು ಹೆಸರಿಟ್ಟ ವಿಜ್ಞಾನಿಗಳು, ಇದು 5 ವರ್ಷದೊಳಗಿನ ಮಕ್ಕಳಲ್ಲಿ ಮಾತ್ರ ಕಂಡುಬರುತ್ತಿದೆ

**ಆಫ್ರಿಕಾ:** ಆಫ್ರಿಕಾ ಖಂಡದ ಹಿಂದುಳಿದ ರಾಷ್ಟ್ರಗಳಲ್ಲೊಂದಾದ ಕಾಂಗೋ ಗಣರಾಜ್ಯದಲ್ಲಿ ನಿಗೂಢ ಜ್ವರವೊಂದು ಕಾಣಿಸಿಕೊಂಡಿದೆ. ಜ್ವರ ಕಾಣಿಸಿಕೊಂಡ ಕೆಲವೇ ದಿನಗಳಲ್ಲಿ 79 ಸಾವುಗಳಾಗಿವೆ. ಇದರಿಂದ ಬೆಚ್ಚಿಬಿದ್ದಿರುವ ವೈದ್ಯರು ಹಾಗೂ ವಿಜ್ಞಾನಿಗಳು ಇದಕ್ಕೆ ಸದ್ಯಕ್ಕೆ ಡಿಸೀಸ್ ಎಕ್ಸ್ ಎಂದು ಹೆಸರಿಟ್ಟಿದ್ದಾರೆ. ಈ ಜ್ವರ ಗಾಳಿಯಿಂದಲೇ ಹರಡುತ್ತಿರುವುದು ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ, ಎರಡು ವರ್ಷಗಳ ಹಿಂದೆ ಕೊರೋನಾ ಸಂದರ್ಭದಲ್ಲಿ ವಿಶ್ವದ ಹಲವಾರು ದೇಶಗಳು ತಮ್ಮ ಗಡಿಗಳನ್ನು ಅನ್ಯ ದೇಶದ ಜನರಿಗೆ ಮುಚ್ಚಿದಂಥ ಸನ್ನಿವೇಶವನ್ನು ಈ ನಿಗೂಢ ಜ್ವರ ಕೂಡ ತರುವ ಸಾಧ್ಯತೆಯಿದೆ ಎಂದು ಹೇಳಿದೆ. ಇದು ಕೇವಲ 5 ವರ್ಷದೊಳಗಿನ ಮಕ್ಕಳಲ್ಲಿ ಮಾತ್ರ ಕಂಡುಬರುತ್ತಿದೆ. ಅ. 24ರಂದು ಕಾಂಗಾ ದೇಶದ ಕ್ವಾಂಗೋ ಪ್ರಾಂತ್ಯದಲ್ಲಿರುವ ಪೆಂಝಿ ಹೆಲ್ತ್ ಝೋನ್ ನಲ್ಲಿನ ಆಸ್ಪತ್ರೆಯಲ್ಲಿ ಈ ನಿಗೂಢ ಜ್ವರದ ಮೊದಲ ಕೇಸ್ ಕಾಣಿಸಿಕೊಂಡಿತ್ತು. ಅಲ್ಲಿಂದ ಇಲ್ಲಿಯವರೆಗೆ ಸತತವಾಗಿ ಈ ಜ್ವರ ಹಲವಾರು ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿದೆ. ಜ್ವರ ವ್ಯಾಪಕವಾಗಿ ಹಬ್ಬುತ್ತಿರುವ ಹಿನ್ನೆಲೆಯಲ್ಲಿ, ಎಲ್ಲಾ ಮಕ್ಕಳನ್ನೂ ವ್ಯಾಪಕವಾಗಿ ಟೆಸ್ಟಿಂಗ್‌ಗೆ ಒಳಪಡಿಸಲಾಗುತ್ತಿದೆ.



ರಾಷ್ಟ್ರ ವ್ಯಾಪ್ತಿಯಲ್ಲಿ ಎಚ್ಚರಿಕೆ

### ವಿಶ್ವ ಆರೋಗ್ಯ ಸಂಸ್ಥೆಯಿಂದ ತಜ್ಞರ ತಂಡ ರವಾನೆ

**ಕಾಂಗೋದಲ್ಲಿನ ಕಾಯಿಲೆಯ ಬಗ್ಗೆ ತಿಳಿಯುತ್ತಲೇ ವಿಶ್ವ ಆರೋಗ್ಯ ಸಂಸ್ಥೆಯು ತನ್ನ ತಜ್ಞ ವೈದ್ಯರ ತಂಡವೊಂದನ್ನ ಕಾಂಗೋಕ್ಕೆ ರವಾನಿಸಿದೆ. ಆ ತಂಡವು ಅಲ್ಲಿ ಅಧ್ಯಯನ ನಡೆಸಿ ವಿಶ್ವ ಆರೋಗ್ಯ ಸಂಸ್ಥೆಗೆ ವರದಿ ಸಲ್ಲಿಸಲಿದೆ. ಮತ್ತೊಂದೆಡೆ, ಕಾಂಗೋದಲ್ಲಿ ನಿಗೂಢ ಜ್ವರ ಕಾಣಿಸಿಕೊಳ್ಳುತ್ತಿದ್ದಂತೆಯೇ ಕಾಂಗೋದೊಂದಿಗೆ ನೇರ ವಾಣಿಜ್ಯ ವ್ಯವಹಾರಗಳನ್ನು ಹೊಂದಿರುವ ದೇಶಗಳೆಲ್ಲವೂ ತಮ್ಮಲ್ಲಿ ಟೆಸ್ಟಿಂಗ್ ಆರಂಭಿವೆ.**


**ಗುಣಲಕ್ಷಣಗಳೇನು?:** ಇದೊಂದು ಫ್ಲೂ ಮಾದರಿಯ ಜ್ವರವಾಗಿದ್ದು, ಒಮ್ಮೆ ಜ್ವರ ಕಾಣಿಸಿಕೊಂಡರೆ ಅದು ಕಡಿಮೆಯಾಗುವುದೇ ಇಲ್ಲ. ಜ್ವರದ ಜೊತೆಗೆ ತಲೆ ನೋವು, ಕೆಮ್ಮು, ಉಸಿರಾಟದ ತೊಂದರೆ ಹಾಗೂ ರಕ್ತ ಹೀನತೆ ಕಾಣಿಸಿಕೊಳ್ಳುತ್ತದೆ. ನ. 24ರ ನಂತರ ದಾಖಲಾಗುತ್ತಿರುವ ಹಲವಾರು ಮಕ್ಕಳಲ್ಲಿ ಒಂದೇ ರೀತಿಯ ಲಕ್ಷಣಗಳು ಕಾಣಿಸಿಕೊಂಡಿರುವುದನ್ನು ವೈದ್ಯಕೀಯ ಪರಿಷತ್ತು, ಕಾಂಗೋದ ರಾಷ್ಟ್ರೀಯ ಆಯೋಗಕ್ಕೆ ಡಿ. 1ರಂದು ವರದಿ ಮಾಡಿತ್ತು.

ವರದಿ ಸಲ್ಲಿಸಿದ ಬಳಿಕ ರಾಷ್ಟ್ರೀಯ ಆಯೋಗದ ಸದಸ್ಯರು ಈ ಪ್ರಕರಣಗಳ ಅಧ್ಯಯನ ನಡೆಸಿ ಇದನ್ನು ಗಂಭೀರ ಕಾಯಿಲೆಂದು ಪರಿಗಣಿಸಿ ರಾಷ್ಟ್ರ ವ್ಯಾಪ್ತಿಯಲ್ಲಿ ಎಚ್ಚರಿಕೆಯನ್ನು ರವಾನಿಸಿತು. ಮೊದಲ ಕೇಸ್ ಕಾಣಿಸಿಕೊಂಡ ನಂತರ ಇಲ್ಲಿಯವರೆಗೆ ಈಗಾಗಲೇ ನಾಲ್ಕಾರು ವಾರಗಳೇ ಕಳೆದು ಹೋಗಿವೆ. ಇಷ್ಟರಲ್ಲಿ ಇದು ಆಫ್ರಿಕಾದ ಬಹುತೇಕ ಕಡೆಗಳಲ್ಲಿ ಹಬ್ಬಿರಬಹುದು ಎಂದು ಅಲ್ಲಿನ ವೈದ್ಯರು ಲೆಕ್ಕಾಚಾರ ಹಾಕಿದ್ದಾರೆ.

# ಸ್ಯಾಮ್ ಪಿತ್ರೋಡಾ ಸರ್ವರ್ ಹ್ಯಾಕ್ ಮಾಡಿ ಕ್ರಿಪ್ಟೋ ಕರೆನ್ಸಿ ಒತ್ತಾಯ

**ನವದೆಹಲಿ:** ಭಾರತೀಯ ಸಾಗರೋತ್ತರ ಕಾಂಗ್ರೆಸ್‌ನ ಅಧ್ಯಕ್ಷ ಸ್ಯಾಮ್ ಪಿತ್ರೋಡಾ ಅವರು ತಮ್ಮ ಸರ್ವರ್ ಅನ್ನು ಹ್ಯಾಕ್ ಮಾಡಲಾಗಿದೆ, ಹ್ಯಾಕರ್‌ಗಳು ಕ್ರಿಪ್ಟೋ ಕರೆನ್ಸಿ ಯಲ್ಲಿ ಹತ್ತು ಸಾವಿರ ಡಾಲರ್‌ಗಳನ್ನು ಪಾವತಿಸುವಂತೆ ಒತ್ತಾಯಿಸಿದ್ದಾರೆ ಎಂದು ಹೇಳಿದ್ದಾರೆ. ಕಳೆದ ಕೆಲವು ವಾರಗಳಲ್ಲಿ ನನ್ನ ಲ್ಯಾಪ್‌ಟಾಪ್, ಸಾರ್ಟ್‌ಫೋನ್ ಮತ್ತು ಸರ್ವರ್‌ಗಳು ಪದೇ ಪದೇ ಹ್ಯಾಕ್ ಆಗಿವೆ ಎಂಬ ನಿರ್ಣಾಯಕ ವಿಷಯವನ್ನು ನಿಮ್ಮ ಗಮನಕ್ಕೆ ತರಲು ನಾನು ಬಯಸುತ್ತೇನೆ ಎಂದು ಪಿತ್ರೋಡಾ ಎಎನ್‌ಐಗೆ ಇಮೇಲ್‌ನಲ್ಲಿ ತಿಳಿಸಿದ್ದಾರೆ.

ಕ್ರಿಪ್ಟೋಕರೆನ್ಸಿಯಲ್ಲಿ ಹತ್ತಾರು ಸಾವಿರ ಡಾಲರ್‌ಗಳನ್ನು ಪಾವತಿಸಲು ವಿಫಲವಾದರೆ ಹ್ಯಾಕರ್‌ಗಳು ಅವರ ಖ್ಯಾತಿಯನ್ನು ಹಾಳುಮಾಡುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ. ಹ್ಯಾಕರ್‌ಗಳು ಕ್ರಿಪ್ಟೋಕರೆನ್ಸಿಯಲ್ಲಿ ಹತ್ತಾರು ಸಾವಿರ ಡಾಲರ್‌ಗಳನ್ನು ಪಾವತಿಸುವಂತೆ ಬೆದರಿಕೆ ಹಾಕಿದ್ದಾರೆ. ಪಾವತಿಸದಿದ್ದರೆ ಅವರು ನನ್ನ ನೆಟ್‌ವರ್ಕ್‌ನಲ್ಲಿರುವ ಜನರನ್ನು ಸಂಪರ್ಕಿಸುವ ಮೂಲಕ ನನ್ನ ಖ್ಯಾತಿಯನ್ನು ಹಾಳುಮಾಡಲು ಸೀಯರ್ ಮತ್ತು ತಪ್ಪು ಮಾಹಿತಿ ಅಭಿಯಾನವನ್ನು ಪ್ರಾರಂಭಿಸುತ್ತಾರೆ ಎಂದು ಅವರು ತಿಳಿಸಿದ್ದಾರೆ.



ಯಾವುದೇ ಲಿಂಕ್‌ಗಳನ್ನು ಕ್ಲಿಕ್ ಮಾಡಬೇಡಿ ಅಥವಾ ಪ್ರತಿಕ್ರಿಯಿಸಬೇಡಿ ಎಂದು ಅವರು ಒತ್ತಾಯಿಸಿದರು ಏಕೆಂದರೆ ಅವುಗಳು ಸಾಧನಗಳನ್ನು ರಾಜಿ ಮಾಡಿಕೊಳ್ಳುವ ಮಾಲ್‌ವೇರ್‌ಗಳನ್ನು ಹೊಂದಿರಬಹುದು.

ಯಾವುದೇ ಅಪರಿಚಿತ ಇಮೇಲ್/ಮೊಬೈಲ್ ಸಂಖ್ಯೆಯಿಂದ ನನ್ನ ಬಗ್ಗೆ ತೋರುವ ಯಾವುದೇ ಇಮೇಲ್‌ಗಳು ಅಥವಾ ಸಂದೇಶಗಳನ್ನು ನೀವು ಸ್ವೀಕರಿಸಿದರೆ, ಅವುಗಳನ್ನು ತೆರೆಯಬೇಡಿ, ನನ್ನ ಲಿಂಕ್‌ಗಳನ್ನು ಕ್ಲಿಕ್ ಮಾಡಬೇಡಿ ಮತ್ತು ಯಾವುದೇ ಲಗತ್ತುಗಳನ್ನು ಡೌನ್‌ಲೋಡ್ ಮಾಡಬೇಡಿ (ಅದನ್ನು ಅಳಿಸಿ) ಮಾಲ್‌ವೇರ್ ಹೊಂದಿರಬಹುದು ಎಂದು ಅವರು ಸಲಹೆ ನೀಡಿದ್ದಾರೆ.

> **ಇದು ಹಳತಾದ ಹಾರ್ಡ್‌ವೇರ್ ಅನ್ನು ಬದಲಿಸುವುದು, ಸಾಫ್ಟ್‌ವೇರ್ ಅನ್ನು ಅಪ್‌ಗ್ರೇಡ್ ಮಾಡುವುದು ಮತ್ತು ನನ್ನ ಡಿಜಿಟಲ್ ಉಪಸ್ಥಿತಿಯನ್ನು ಕಾಪಾಡಲು ದಢವಾದ ಹೊಸ ಭದ್ರತಾ ಕ್ರಮಗಳನ್ನು ಅಳವಡಿಸುವುದನ್ನು ಒಳಗೊಂಡಿರುತ್ತದೆ. ಈ ಪರಿಸ್ಥಿತಿಯು ಉಂಟುಮಾಡಬಹುದಾದ ಯಾವುದೇ ಅನಾನುಕೂಲತೆ ಅಥವಾ ಕಾಳಜಿಗಾಗಿ ನಾನು ಪ್ರಾಮಾಣಿಕವಾಗಿ ಕ್ಷಮೆಯಾಚಿಸುತ್ತೇನೆ ಎಂದು ಪಿತ್ರೋಡಾ ತಿಳಿಸಿದ್ದಾರೆ.**

# ಧಾರ್ಮಿಕ ಘೋಷಣೆ ಕೂಗಲು ಒತ್ತಾಯಿಸಿ ಥಳಿತ

**ರತ್ಲಾಮ್:** ಮಧ್ಯಪ್ರದೇಶದ ರತ್ಲಾಮ್‌ನಿಂದ ವಿಡಿಯೋ ವೊಂದು ವೈರಲ್ ಆಗಿದೆ. ಇದರಲ್ಲಿ ಅಲ್ಲಾ ಎಂದು ಹೇಳಿದ್ದಕ್ಕೆ ಮೂವರು ಮಕ್ಕಳಿಗೆ ಕಪಾಳಮೋಕ್ಷ ಮಾಡಿರುವ ಘಟನೆ ನಡೆದಿದೆ. ಜೈ ಶ್ರೀ ರಾಮ್ ಎಂದು ಕೂಗಲು ಹೇಳಲಾಗಿದೆ ಮೂರು ಮಕ್ಕಳು ಜೈ ಶ್ರೀ ರಾಮ್ ಎಂದು ಹೇಳುವವರೆಗೂ ಅವರನ್ನು ಹೊಡೆಯುತ್ತಲೇ ಚಪ್ಪಲಿಯಿಂದ ಥಳಿಸಿದ್ದಾರೆ ಎಂದು ಹೇಳಲಾಗುತ್ತಿದೆ. ವಿಡಿಯೋದಲ್ಲಿ 16 ವರ್ಷ ಬಾಲಕ 6, 9 ಮತ್ತು 11 ವರ್ಷದ ಮೂವರು ಮಕ್ಕಳಿಗೆ ಪದೇ ಪದೇ ಚಪ್ಪಲಿಯಿಂದ ಹೊಡೆದು ಧಾರ್ಮಿಕ ಘೋಷಣೆ ಕೂಗುವಂತೆ ಒತ್ತಾಯಿಸಿದ್ದಾನೆ.

ಮತ್ತೊರ್ವ 14 ವರ್ಷದ ಬಾಲಕ ಈ ಘಟನೆಯನ್ನು ವಿಡಿಯೋ ಮಾಡುತ್ತಿದ್ದಾನೆ. ವಿಡಿಯೋ ಕಾಣಿಸಿಕೊಂಡ ನಂತರ, ಮುಸ್ಲಿಂ ಸಮುದಾಯದ ಸದಸ್ಯರು ಮಧ್ಯಪ್ರದೇಶದ ರತ್ಲಾಮ್ ಜಿಲ್ಲೆಯ ಸ್ಥಳೀಯ ಪೊಲೀಸ್ ಠಾಣೆಯ ಹೊರಗೆ ಪ್ರತಿಭಟನೆ ನಡೆಸಿದ್ದಾರೆ ಮತ್ತು ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿದ್ದಾರೆ. ಇದೀಗ 16 ವರ್ಷ ಮತ್ತು 14 ವರ್ಷದ ಬಾಲಕರ ವಿರುದ್ಧ ಹಲ್ಲೆ, ಅವಾಚ್ಯ ಪದಗಳಿಂದ ನಿಂದನೆ, ಬೆದರಿಕೆ ಮತ್ತು ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡಿದ ಪ್ರಕರಣವನ್ನು ದಾಖಲಿಸಲಾಗಿದೆ. ವಿಡಿಯೋ ಮಾಡಿದ ಯುವಕ ಹಾಗೂ 16 ವರ್ಷದ ಮತ್ತೊಬ್ಬ ಯುವಕನನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ರತ್ಲಾಮ್‌ನ ಅಮೃತಸಾಗರ ಕೊಳದ ಬಳಿ ನಿರ್ಮಾಣ ಹಂತದಲ್ಲಿರುವ ಅಮ್ಯೂಸ್‌ಮೆಂಟ್ ಪಾರ್ಕ್‌ನಿಂದ ವೀಡಿಯೊ ಹೊರ ಬಂದಿದೆ.



ಒಂದೂವರೆ ತಿಂಗಳ ಹಿಂದೆ ಈ ಘಟನೆ ನಡೆದಿದೆ. ಇತ್ತೀಚೆಗಷ್ಟೇ ವಿಡಿಯೋ ಬಹಿರಂಗವಾಗಿದೆ, ಇದು ಜನರ ಆಕ್ರೋಶಕ್ಕೆ ಕಾರಣವಾಗಿದೆ. ಸ್ಥಳೀಯ ಪೊಲೀಸ್ ಠಾಣೆಯ ಹೊರಗೆ ಗುಂಪು ಜಮಾಯಿಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲು ಒತ್ತಡ ಹೇರಿದೆ, ಆದರೆ ಅಧಿಕಾರಿಗಳು ಸೂಕ್ತ ಕ್ರಮದ ಭರವಸೆ ನೀಡಿದ ನಂತರ ಗುಂಪು ಚದುರಿದೆ ಎನ್ನಲಾಗಿದೆ. ರತ್ಲಾಮ್‌ನ ಸಾಮಾಜಿಕ ಕಾರ್ಯಕರ್ತ ಇಮ್ರಾನ್ ಖೋಖರ್ ಮಕ್ಕಳ ಪರವಾಗಿ ಪ್ರಕರಣ ದಾಖಲಿಸಿದ್ದಾರೆ.

# ನಾಯಕತ್ವ ರಹಿತ ಬಾಂಗ್ಲಾ ದುರ್ಬಲ

**ಕೊಲ್ಕತ್ತಾ:** ನಾಯಕತ್ವ ರಹಿತ ಬಾಂಗ್ಲಾದೇಶ ಇಂದು ದುರ್ಬಲ ಆಡಳಿತ ಹಾಗೂ ಮಾಫಿಯಾ ಹಿಡಿತದಲ್ಲಿ ಸಿಲುಕಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅಭಿಪ್ರಾಯಪಟ್ಟಿದ್ದಾರೆ.

ಬಾಂಗ್ಲಾದೇಶ ಜತೆ ಅತಿ ಉದ್ದದ ಗಡಿಯನ್ನು ಹಂಚಿಕೊಂಡಿರುವ ಬಂಗಾಳ, ಆ ದೇಶದ ರಾಜಕೀಯ ಮತ್ತು ಸಾಮಾಜಿಕ ಅಸ್ಥಿರತೆ ಯಿಂದಾಗಿ ಸದಾ ಅಪಾಯ ಸಾಧ್ಯತೆಯನ್ನು ಹೊಂದಿದೆ ಎಂದು ಟಿವಿ ಸಂದರ್ಶನವೊಂದರಲ್ಲಿ ಹೇಳಿದ್ದಾರೆ. ಬಂಗಾಳ ಗಡಿಯಲ್ಲಿ ಗುಂಡಿನದಾಳಿ ಆರಂಭಿಸಿದರೆ ಬಿಹಾರ ಮತ್ತು ಒಡಿಶಾಗೆ ಕೂಡಾ ಅಪಾಯ ಇದೆ.

ನಮ್ಮೊಂದಿಗೆ ಎಲ್ಲಾ ನೆರೆಹೊರೆಯವರು ಕೂಡಾ ಶಾಂತಿಯಿಂದ ಬದುಕಬೇಕು ಎನ್ನುವುದು ನನ್ನ ಬಯಕೆ ಎಂದು ಸ್ಪಷ್ಟಪಡಿಸಿದರು. ಪ್ರತಿಯೊಂದನ್ನೂ ರಕ್ಷಿಸಲು, ಪ್ರತಿಯೊಬ್ಬರೂ ಶಾಂತಿಯುತ ಜೀವನ ನಡೆಸಲು ಅನುವಾಗುವಂತೆ ಬಾಂಗ್ಲಾದೇಶದ ಜತೆ ಮಾತುಕತೆ ಆರಂಭಿಸಲು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ದೇಶದ್ರೋಹ ಆರೋಪದ ಮೇಲೆ ಹಿಂದೂ ಧಾರ್ಮಿಕ ಮುಖಂಡ ಚಿನ್ಮಯ್ ದಾಸ್ ಅವರ ಬಂಧನದ ಹಿನ್ನೆಲೆಯಲ್ಲಿ ಬಾಂಗ್ಲಾದೇಶದಲ್ಲಿ ಇಸ್ಕಾನ್ ನಿಷೇಧಿಸುವಂತೆ ಒತ್ತಡ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಮಮತಾ ಇಸ್ಕಾನ್‌ಗೆ ಬೆಂಬಲ ಸೂಚಿಸಿದರು.



> **ಬಾಂಗ್ಲಾದೇಶದಲ್ಲಿ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಭಾರತೀಯರನ್ನು ಸ್ಥಳಾಂತರಿಸಲು ಅನುವಾಗುವಂತೆ ಶಾಂತಿಪಾಲನಾ ಪಡೆಯನ್ನು ಕಳುಹಿಸುವಂತೆ ವಿಶ್ವಸಂಸ್ಥೆಗೆ ಮನವಿ ಮಾಡಿಕೊಳ್ಳುವಂತೆ ಅವರು ಪ್ರಧಾನಿ ನರೇಂದ್ರ ಮೋದಿಯವರನ್ನು ಇತ್ತೀಚೆಗೆ ಒತ್ತಾಯಿಸಿದ್ದರು.**

# ಭಾರತದ ಅಂತರ್ಗತ ಬೆಳವಣಿಗೆಗೆ ಅಂತಾರಾಷ್ಟ್ರೀಯ ಶ್ಲಾಘನೆ

**ವಾಷಿಂಗ್ಟನ್:** ಪ್ರಪಂಚದ ಉನ್ನತ ಆರ್ಥಿಕ ತಜ್ಞ, ಪ್ರಸ್ತುತ ಅಂತರರಾಷ್ಟ್ರೀಯ ಹಣಕಾಸು ನಿಧಿಯ ಕಾರ್ಯನಿರ್ವಾಹಕ ನಿರ್ದೇಶಕ ಕೃಷ್ಣಮೂರ್ತಿ ವಿ. ಸುಬ್ರಮಣಿಯನ್ ಅವರು ಭಾರತದ ಸಾರ್ವಜನಿಕ ಡಿಜಿಟಲ್ ಮೂಲ ಸೌಕರ್ಯ, ಅಂತರ್ಗತ ಬೆಳವಣಿಗೆ ಯ ಬಗ್ಗೆ ಮಾತನಾಡುವುದು ಮಾತ್ರ ವಲ್ಲದೆ ಅಂತಾರಾಷ್ಟ್ರೀಯ ಸಮುದಾಯದಲ್ಲಿ ಶ್ಲಾಘನೆಯೂ ಇದೆ ಎಂದು ಹೇಳಿದ್ದಾರೆ.

ಭಾರತದ ಆರ್ಥಿಕತೆಯು ಒಟ್ಟಾರೆಯಾಗಿ ಉತ್ತಮವಾಗಿ ಬೆಳೆಯುತ್ತಿದೆ ಎಂದು ನಾನು ಭಾವಿಸುತ್ತೇನೆ. ಕೋವಿಡ್ ನಂತರದ ಬೆಳವಣಿಗೆ ದರವು ಸ್ಥಿರವಾಗಿ ಶೇಕಡ ಏಳು ಆಗಿದೆ. ಸಹಜವಾಗಿ, ಈ ತ್ರೈಮಾಸಿಕದಲ್ಲಿ ಸ್ವಲ್ಪ ಕುಸಿತವಾಗಿದೆ. ಭಾಗಶಃ ಇದು ಬಂಡವಾಳ ವೆಚ್ಚಗಳಲ್ಲಿನ ನಿಧಾನಗತಿಯ ಕಾರಣ. ಅದಕ್ಕೆ ಕೆಲವು ಚುನಾವಣಾ ಚಕ್ರಗಳೇ ಕಾರಣ. ಅಲ್ಲದೆ, ರಫ್ತಿನ ಮೇಲೆ ಸ್ವಲ್ಪ ಪರಿಣಾಮ ಬೀರಿದೆ. ಆದರೆ ಈ ಕುಸಿತವು ತಾತ್ಕಾಲಿಕವಾಗಿರುತ್ತದೆ ಎಂದು ನಾನು ನಿರೀಕ್ಷಿಸುತ್ತೇನೆ ಎಂದಿದ್ದಾರೆ.

ನಾನು ಐಎಂಎಫ್ ಮಂಡಳಿಯಲ್ಲಿ ಕುಳಿತಿರುವ ದಷ್ಟಿಕೋನದಿಂದ, ಜಗತ್ತು ಭಾರತದ ಮೇಲೆ ಬುಲ್ಲಿಷ್ ಆಗಿದೆ ಎಂದು ಹೇಳಲು ನನಗೆ ಯಾವುದೇ ಹಿಂಜರಿಕೆಯಿಲ್ಲ. ಭಾರತವು ಜಾರಿಗೆ ತಂದಿರುವ ಸಾರ್ವಜನಿಕ ಡಿಜಿಟಲ್ ಮೂಲಸೌಕರ್ಯವನ್ನು ನನ್ನ ಬಹುತೇಕ ಮಂಡಳಿಯ ಸಹೋದ್ಯೋಗಿಗಳು ಸಾಮಾನ್ಯವಾಗಿ ಉಲ್ಲೇಖಿಸುತ್ತಾರೆ.

ಅವರು ಅದನ್ನು ಪ್ರಾಮಾಣಿಕ ಮೆಚ್ಚುಗೆಯೊಂದಿಗೆ ಉಲ್ಲೇಖಿಸುತ್ತಾರೆ. ಇದಲ್ಲದೆ, ಕಳೆದ ದಶಕದಲ್ಲಿ ಭಾರತವು ಅನುಸರಿಸಿದ ರೀತಿಯ ಅಂತರ್ಗತ ಬೆಳವಣಿಗೆಯು ಮೆಚ್ಚುಗೆಗೆ ಅರ್ಹವಾಗಿದೆ ಎಂದು ಭಾರತದ ಮಾಜಿ ಮುಖ್ಯ ಆರ್ಥಿಕ ಸಲಹೆಗಾರ, ಇತ್ತೀಚಿನ ಪುಸ್ತಕ ಇಂಡಿಯಾ100 ನ ಲೇಖಕ ಸುಬ್ರಮಣಿಯನ್ ಪಿಟಿಐಗೆ ತಿಳಿಸಿದ್ದಾರೆ.




> **ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಸುಬ್ರಮಣಿಯನ್, ಕೋವಿಡ್ ಸಮಯದಲ್ಲಿ ಭಾರತವು ಪ್ರಪಂಚದ ಇತರ ಭಾಗಗಳಿಗಿಂತ ಭಿನ್ನವಾದ ಆರ್ಥಿಕ ನೀತಿಯನ್ನು ಜಾರಿಗೆ ತರಲು ಆಯ್ಕೆ ಮಾಡಿದೆ, ಪ್ರಪಂಚದ ಉಳಿದ ಭಾಗಗಳು ಕೋವಿಡ್ ಅನ್ನು ಸಂಪೂರ್ಣವಾಗಿ ಬೇಡಿಕೆ-ಬದಿಯ ಆಘಾತ ಎಂದು ಗುರುತಿಸಿದರೆ, ಕೋವಿಡ್ ಅನ್ನು ಬೇಡಿಕೆ-ಬದಿಯ ಮತ್ತು ಪೂರೈಕೆ-ಭಾಗದ ಆಘಾತ ಎಂದು ನಿರ್ಣಯಿಸುವ ಏಕೈಕ ದೊಡ್ಡ ಆರ್ಥಿಕತೆ ಭಾರತವಾಗಿದೆ ಎಂದು ಅವರು ಹೇಳಿದರು.**

# ಅದಾನಿಗೆ ಲಾಭಮಾಡಿಕೊಡಲು ವಿದ್ಯುತ್ ದರ ಏರಿಕೆ: ಕಾಂಗ್ರೆಸ್ ಆರೋಪ

**ತಿರುವನಂತಪುರ:** ಕೇರಳ ಸರ್ಕಾರವು ವಿದ್ಯುತ್ ದರ ಏರಿಕೆ ಮಾಡಿ, ಅದಾನಿಗೆ ಲಾಭ ಮಾಡಿಕೊಳ್ಳಲು ನೆರವಾಗುತ್ತಿದೆ ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡ ರಮೇಶ್ ಚೆನ್ನಿತ್ತಲ ಆರೋಪಿಸಿದ್ದಾರೆ.

ಯುಡಿಎಫ್ ಸರ್ಕಾರದ ಅವಧಿಯಲ್ಲಿ ಪ್ರತಿ ಯೂನಿಟ್‌ಗೆ 5 ದರದಲ್ಲಿ ವಿದ್ಯುತ್ ಉತ್ಪಾದನಾ ಕಂಪನಿಗಳೊಂದಿಗೆ ದೀರ್ಘಾವಧಿಗೆ ವಿದ್ಯುತ್ ಖರೀದಿಯ ಒಪ್ಪಂದ' ಮಾಡಿಕೊಳ್ಳಲಾಗಿತ್ತು. ಎಲ್‌ಡಿಎಫ್ ಸರ್ಕಾರವು ಅಧಿಕಾರಕ್ಕೆ ಬಂದ ಬಳಿಕ ಈ ಒಪ್ಪಂದ ರದ್ದುಗೊಳಿಸಿ, ವ್ಯವಸ್ಥೆಯ ಒಳಗೆ ಅದಾನಿ ಪ್ರವೇಶಕ್ಕೆ ದಾರಿ ಮಾಡಿಕೊಟ್ಟಿತು' ಎಂದು ಅವರು ಆರೋಪಿಸಿದರು. 2024-25ನೇ ಆರ್ಥಿಕ ವರ್ಷದಲ್ಲಿ ಪ್ರತಿ ಯೂನಿಟ್‌ಗೆ 16 ಪೈಸೆ ದರ ಏರಿಕೆ ಮಾಡಲಾಗುವುದು ಎಂದು ಕೇರಳ ಸರ್ಕಾರ ಘೋಷಿಸಿದೆ. ನಂತರದ ವರ್ಷದಲ್ಲಿ ಹೆಚ್ಚುವರಿಯಾಗಿ 12 ಪೈಸೆ ಏರಿಕೆ ಯಾಗಲಿದೆ ಎಂದು ತಿಳಿಸಿದೆ. ಸರ್ಕಾರದ ಈ ನಡೆಯು ವಿದ್ಯುತ್ ಉತ್ಪಾದಿಸುವವರ ಕೈಗೊಂಬೆಯಂತೆ ವರ್ತಿಸುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಅದರಲ್ಲೂ ವಿಶೇಷವಾಗಿ ಅದಾನಿ ಪರವಾಗಿದೆ ಎಂದು ಚೆನ್ನಿತ್ತಲ ದೂರಿದರು. 'ಈ ನಡೆ ಯಿಂದ ಅದಾನಿ ಸಂಸ್ಥೆಯು ದೊಡ್ಡದಾಗಿ ಲಾಭ ಪಡೆ ಯಲಿದೆ. ಕೇರಳದಲ್ಲಿ ವಿದ್ಯುತ್ ಖರೀದಿ ವ್ಯವಸ್ಥೆಯ ಒಳಗಡೆ ಅದಾನಿಯನ್ನು ಕರೆತರುವುದೇ ಸರ್ಕಾರದ ಉದ್ದೇಶ ವಾಗಿದೆ. ಇದರಿಂದ ಪ್ರತಿ ಯೂನಿಟ್ ವಿದ್ಯುತ್ ಅನ್ನು 10ರಿಂದ 14ಕ್ಕೆ ಖರೀದಿಸಲಿದೆ. ಯುಡಿಎಫ್ ಸರ್ಕಾರ ಮಾಡಿಕೊಂಡಿದ್ದ ಖರೀದಿ ಒಪ್ಪಂದ ರದ್ದುಪಡಿಸಲು ಸಿಪಿಎಂ ಪಕ್ಷದ ಜೊತೆಗೆ ನಿಕಟ ಸಂಪರ್ಕ ಹೊಂದಿರುವ ವಿದ್ಯುತ್ ನಿಯಂತ್ರಣ ಆಯೋಗದ ಕೆಲವು ಅಧಿಕಾರಿಗಳು ಕಾರಣ' ಎಂದು ಆರೋಪಿಸಿದರು.

**ಸಮರ್ಥನೆ:** 'ಮಾಸಿಕ 40 ಯೂನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಸುವವರಿಗೆ ಬೆಲೆ ಏರಿಕೆ ಅನ್ವಯವಾಗಲಿದೆ. ಸಿಂಗಲ್ ಫೇಸ್ ಮತ್ತು ತ್ರಿ-ಫೇಸ್‌ಗೆ ನಿಗದಿತ ಶುಲ್ಕದಲ್ಲಿ ಏರಿಕೆ ಮಾಡಲಾಗಿದೆ. ಕನಿಷ್ಠ ಪ್ರಮಾಣದಲ್ಲಿ ದರ ಏರಿಕೆ ಮಾಡಿದ್ದು, ಇದರಿಂದ ಜನಸಾಮಾನ್ಯರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ' ಎಂದು ಕೇರಳದ ಇಂಧನ ಸಚಿವ ಕೆ.ಕೃಷ್ಣಕುಟ್ಟಿ ತಿಳಿಸಿದ್ದಾರೆ.



> **ಸರ್ಕಾರದ ಈ ನಿರ್ಧಾರವನ್ನು ರಾಜ್ಯ ಕಾಂಗ್ರೆಸ್ ಘಟಕವು ತೀವ್ರವಾಗಿ ಖಂಡಿಸಿದೆ. ಬೆಲೆ ಏರಿಕೆ ಖಂಡಿಸಿ, ಶನಿವಾರ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪಂಜಿನ ಮೆರವಣಿಗೆ ನಡೆಸಿ ಪ್ರತಿಭಟನೆ ನಡೆಸಲಾಗಿದೆ**
> **-ಕೆ. ಸುಧಾಕರನ್**
> **ರಾಜ್ಯ ಘಟಕದ ಅಧ್ಯಕ್ಷ**

# ಡಿ. 14ರಿಂದ ಅಸಹಕಾರ ಚಳವಳಿ

**ಇಸ್ಲಾಮಾಬಾದ್:** ಸರ್ಕಾರದ ವಿರುದ್ಧ ನಾಗರಿಕ ಅಸಹಕಾರ ಚಳವಳಿ ನಡೆಸಲು ಕರೆ ನೀಡಲಾಗುವುದು ಎಂದು ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಎಚ್ಚರಿಸಿದ್ದಾರೆ. ಪಕ್ಷದಿಂದ ನಡೆದ ಪ್ರತಿಭಟನೆ ವೇಳೆ ಪ್ರತಿಭಟನಕಾರರನ್ನು ಪೊಲೀಸ್ ಬಲ ಬಳಸಿ ಬಲವಂತವಾಗಿ ಚದುರಿಸಿದ ಬೆನ್ನಲ್ಲೇ ಈ ಎಚ್ಚರಿಕೆಯ ಮಾತು ಆಡಿದ್ದಾರೆ. 'ಮೇ 9ರ ಹಿಂಸಾಚಾರ ಕುರಿತು ನ್ಯಾಯಾಂಗ ತನಿಖೆಗೆ ಆಗ್ರಹ ಹಾಗೂ ರಾಜಕೀಯ ಕೈದಿಗಳ ಬಿಡುಗಡೆಗೆ ಒತ್ತಾಯಿಸಲು ಐವರು ಸದಸ್ಯರ ಸಮಿತಿ ರಚಿಸಲಾಗುವುದು ಎಂದು ಪಾಕಿಸ್ತಾನ್-ತೆಹ್-ಇ- ಇನ್ಸಾಫ್ ಪಕ್ಷದ ಅಧ್ಯಕ್ಷರಾದ, ಅವರು ಅವರು ಎಕ್ಸ್ ಮೂಲಕ ತಿಳಿಸಿದ್ದಾರೆ.

ಈ ಬೇಡಿಕೆಗಳನ್ನು ಈಡೇರಿಸಲು ಒಪ್ಪದಿದ್ದರೆ, ಡಿ.14ರಿಂದ ಅಸಹಕಾರ ಚಳವಳಿ ನಡೆಸಲಿದ್ದೇವೆ. ಪ್ರತಿಕೂಲ ಪರಿಣಾಮಗಳಿಗೆ ಸರ್ಕಾರವೇ ನೇರ ಹೊಣೆ' ಎಂದು ಹೇಳಿದ್ದಾರೆ.

ಇಮ್ರಾನ್ ವಿರುದ್ಧ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿ 99 ಪ್ರಕರಣ, ಇಸ್ಲಾಮಾಬಾದ್‌ನಲ್ಲಿ 76 ಹಾಗೂ ಖೈಬರ್ ಪುಂಖ್ವಾದಲ್ಲಿ ಎರಡು ಪ್ರಕರಣಗಳು ದಾಖಲಾಗಿವೆ.

# ಮಿಲಿಟರಿ ಆಡಳಿತ: ಕ್ಷಮೆ ಕೋರಿದ ಅಧ್ಯಕ್ಷ ಯೂನ್ ಸುಕ್ ಯೋಲ್

**ಸೋಲ್:** ಮಿಲಿಟರಿ ಆಡಳಿತವನ್ನು ಹೇರಿದ್ದ ನಿರ್ಧಾರಕ್ಕಾಗಿ ದಕ್ಷಿಣ ಕೊರಿಯಾದ ಅಧ್ಯಕ್ಷ ಯೂನ್ ಸುಕ್ ಯೋಲ್ ಅವರು ಶನಿವಾರ ದೇಶದ ಜನರಲ್ಲಿ ಕ್ಷಮೆ ಯಾಚಿಸಿದ್ದಾರೆ. ಸಾರ್ವಜನಿಕವಾಗಿ ತೀವ್ರ ಆಕ್ರೋಶ ವ್ಯಕ್ತವಾದ ಹಿಂದೆಯೇ ಅವರು ದೇಶದ ಜನರ ಕ್ಷಮೆ ಕೇಳಿದ್ದಾರೆ. ಈ ಕಾರಣಕ್ಕಾಗಿ ನನ್ನ ಅಧಿಕಾರವಧಿ ಕುರಿತ ಚರ್ಚೆಗೂ ಗ್ರಾಸವಾಗಿದೆ. ಈ ಕುರಿತ ನಿರ್ಧಾರವನ್ನು ಪಕ್ಷದ ವಿವೇಚನೆಗೆ ಬಿಡು ತ್ತೇನೆ ಎಂದು ಯೋಲ್ ಹೇಳಿದ್ದಾರೆ.

ಮಿಲಿಟರಿ ಆಡ ಳಿತದ ನಿರ್ಧಾರಕ್ಕಾಗಿ ಅಧ್ಯಕ್ಷರನ್ನು ವಾಗ್ದಂಡನೆಗೆ ಒಳಪಡಿಸುವ ನಿರ್ಣಯವನ್ನು ಮತಕ್ಕೆ ಹಾಕಲು ರಾಷ್ಟ್ರೀಯ ಅಸೆಂಬ್ಲಿ ಸಿದ್ಧತೆ ನಡೆಸಿರುವಂತೆಯೇ ಅವರು ಈ ಮಾತು ಹೇಳಿದ್ದಾರೆ. ಟಿ.ವಿಯಲ್ಲಿ ದೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ನಾನು ಕಾನೂನು, ರಾಜಕೀಯ ಹೊಣೆ ಯಿಂದ ನುಣುಚಿಕೊಳ್ಳುವುದಿಲ್ಲ. ಮತ್ತೆ, ಮಿಲಿಟರಿ ಆಡ ಳಿತ ಹೇರಲು ಯತ್ನಿಸುವುದಿಲ್ಲ. ನನ್ನ ನಿರ್ಧಾರ, ಅದರಿಂದ ಜನರಿಗಾದ ಅನಾನುಕೂಲತೆಗಳಿಗೆ ಕ್ಷಮೆ ಯಾಚಿಸುತ್ತೇನೆ ಎಂದು ಹೇಳಿದ್ದಾರೆ.

ಮಿಲಿಟರಿ ಆಡಳಿತ ಹೇರಿದ್ದಕ್ಕೆ ದೇಶವ್ಯಾಪಿ ಆಕ್ರೋಶ ವ್ಯಕ್ತವಾಗಿದ್ದು, ತೀವ್ರ ಪ್ರತಿಭಟನೆ ನಡೆದಿವೆ. ಈ ಮಧ್ಯೆ, ಅವರನ್ನು ವಾಗ್ದಂಡನೆಗೆ ಗುರಿಪಡಿಸಲು, ಅವರನ್ನು ಪದಚ್ಯುತಿಗೊಳಿಸಲು ಒತ್ತಾಯಿ ಸುವ ನಿರ್ಣಯ ಮಂಡಿಸಲು ದಕ್ಷಿಣ ಕೊರಿಯಾದ ವಿರೋಧಪಕ್ಷಗಳು ಸಜ್ಜಾಗಿವೆ. ಪ್ರತಿಪಕ್ಷಗಳ ನಿರ್ಣಯಕ್ಕೆ ಮೂರನೇ ಎರಡರಷ್ಟು ಬೆಂಬಲ ಸಿಗುವುದೇ ಎಂದು ಖಚಿತವಾಗಿಲ್ಲ. ಅತ್ತ, ಯೋಲ್ ಅವರ ಪಕ್ಷ ಅಧ್ಯಕ್ಷರ ಸಾಂವಿಧಾನಿಕ ಅಧಿಕಾರ ಅಮಾನತುಪಡಿಸಬೇಕು ಎಂದು ಒತ್ತಾಯಿಸಿದೆ ರಾಷ್ಟ್ರೀಯ ಅಸೆಂಬ್ಲಿ ಸದಸ್ಯ ಬಲ 300. ವಾಗ್ದಂಡನೆಗೆ ಗುರಿಪಡಿಸಲು ಕನಿಷ್ಠ 200 ಸದಸ್ಯರ ಬೆಂಬಲ ಅಗತ್ಯ. ನಿರ್ಣಯ ತಂದಿರುವ ಪ್ರತಿಪಕ್ಷಗಳ ಸದಸ್ಯ ಬಲ 192 ಆಗಿದೆ. ಇದರ ಅಂಗೀಕಾರಕ್ಕೆ ಯೋಲ್ ಪ್ರತಿನಿಧಿಸುವ ಪೀಪಲ್ ಪವರ್ ಪಾರ್ಟಿಯ ಕನಿಷ್ಠ 8 ಸದಸ್ಯರ ಬೆಂಬಲವು ಅಗತ್ಯವಾಗಿದೆ. ಮಿಲಿಟರಿ ಆಡಳಿತದ ರದ್ದು ಕೋರಿ ಮಂಡಿಸಿದ್ದ ನಿರ್ಣಯವನ್ನು ಪಿಪಿಪಿಯ 18 ಸದಸ್ಯರು ಬೆಂಬಲಿಸಿದ್ದರು. ನಿರ್ಣಯ ಮಂಡನೆ ಹಿನ್ನೆಲೆಯಲ್ಲಿ ಮತದಾನಕ್ಕೆ ಅಡ್ಡಿ ಪಡಿಸುವ ಸಾಧ್ಯತೆ ತಡೆಯಲು ರಾಷ್ಟ್ರೀಯ ಅಸೆಂಬ್ಲಿ ಆಸುಪಾಸಿನಲ್ಲಿ ಬಿಗಿ ಭದ್ರತೆಯನ್ನು ಏರ್ಪಡಿಸಲಾಗಿದೆ.



> **ಅಸೆಂಬ್ಲಿ ಮೊದಲಿಗೆ ಯೋನ್ ಅವರ ಪತ್ನಿ ವಿರುದ್ಧದ ಆರೋಪಗಳ ತನಿಖೆಗಾಗಿ ವಿಶೇಷ ಪ್ರಾಸಿಕ್ಯೂಟರ್ ನೇಮಿಸುವ ವಿಷಯ ಚರ್ಚಿಸಲಿದೆ. ಬಳಿಕ ವಾಗ್ದಂಡನೆ ನಿರ್ಣಯ ಚರ್ಚೆಗೆ ಬರಲಿದೆ. ಆದರೆ, ನಿರ್ಣಯ ವಿರೋಧಿಸಲು ಪಿಪಿಪಿ ನಿರ್ಧರಿಸಿದೆ. ಆದರೆ, ಜನತೆಗೆ ಹೆಚ್ಚು ಸಮಸ್ಯೆ ಆಗುವುದನ್ನು ತಡೆಯಲು ಅಧ್ಯಕ್ಷರ ಧಿಕಾರಗಳನ್ನು ತಕ್ಷಣಕ್ಕೆ ಅಮಾನತಿನಲ್ಲಿ ಇಡಬೇಕು ಎಂದು ಒತ್ತಾಯಿಸಿದೆ.**

# ಆತಂಕಕಾರಿ ಸನ್ನಿವೇಶದ ನಡುವೆ ನಾಗರಿಕರಿಗೆ ಭಾರತದ ಸಲಹೆ

## ಆದಷ್ಟು ಬೇಗನೆ ಸಿರಿಯಾದಿಂದ ನಿರ್ಗಮಿಸಲು, ಸುರಕ್ಷತೆ ನೋಡಿಕೊಳ್ಳಲು ನಾಗರಿಕರಿಗೆ ಸೂಚನೆ

**ಹೊಸದಿಲ್ಲಿ:** ಸಿರಿಯಾದಲ್ಲಿ ಬಂಡುಕೋರ ಪಡೆಗಳ ಹಿಂಸಾತ್ಮಕ ಕೃತ್ಯಗಳು ತೀವ್ರಗೊಂಡಿದ್ದು, ಪರಿಸ್ಥಿತಿ ಬಿಗಡಾಯಿಸುತ್ತಿದೆ. ಈ ಹಿನ್ನೆಲೆಯಲ್ಲಿ, ಸಿರಿಯಾದಲ್ಲಿರುವ ತನ್ನ ಪ್ರಜೆಗಳು ಈ ಕೂಡಲೆ ಅಲ್ಲಿಂದ ನಿರ್ಗಮಿಸುವಂತೆ ಮತ್ತು ಮುಂದಿನ ಸೂಚನೆವರೆಗೂ ಅಲ್ಲಿಗೆ ಪ್ರಯಾಣಿಸದಂತೆ ಭಾರತ ತಡರಾತ್ರಿ ಸಲಹೆ ಹೊರಡಿಸಿದೆ. ಸಿರಿಯಾದಲ್ಲಿರುವ ಭಾರತದ ಎಲ್ಲಾ ನಾಗರಿಕರು ಡಮಾಸ್ಕಸ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಜತೆ ಸಂಪರ್ಕದಲ್ಲಿ ಇರುವಂತೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮನವಿ ಮಾಡಿದ್ದು, ತನ್ನ ತುರ್ತು ಸಹಾಯವಾಣಿ ಮತ್ತು ಇ- ಮೇಲ್ ವಿಳಾಸವನ್ನು ಹಂಚಿಕೊಂಡಿದೆ. ಲಭ್ಯವಿರುವ ವಾಣಿಜ್ಯ ವಿಮಾನಗಳ ಮೂಲಕ ಸಾಧ್ಯವಾದಷ್ಟು ತ್ವರಿತವಾಗಿ ಸಿರಿಯಾವನ್ನು ತೊರೆಯಬೇಕು. ಇದು ಸಾಧ್ಯವಾಗದೆ ಇದ್ದವರು, ತಮ್ಮ ಸುರಕ್ಷತೆಗೆ ಅತಿ ಹೆಚ್ಚಿನ ಆದ್ಯತೆ ನೀಡಬೇಕು ಹಾಗೂ ತಮ್ಮ ಚಲನವಲನಗಳನ್ನು ನಿರ್ಬಂಧಿಸಿಕೊಳ್ಳಬೇಕು ಎಂದು ತುರ್ತು ಸೂಚನೆ ಹೊರಡಿಸಲಾಗಿದೆ. ಡಮಾಸ್ಕಸ್‌ನಲ್ಲಿರುವ ಭಾರತೀಯ ರಾಯ ಭಾರ ಕಚೇರಿಯ +963 993385973 ತುರ್ತು ಸಹಾಯವಾಣಿಯನ್ನು ಹಂಚಿಕೊಳ್ಳಲಾಗಿದೆ. ಈ ಸಂಖ್ಯೆಯನ್ನು ವಾಟ್ಸಾಪ್‌ನಲ್ಲಿ ಕೂಡ ಬಳಸಿ ಕೊಳ್ಳಬಹುದಾಗಿದೆ ಎಂದು ಹೇಳಿಕೆ ತಿಳಿಸಿದೆ. ಜತೆಗೆ hoc.damscus@mea.gov.in ತುರ್ತು ಇ ಮೇಲ್ ವಿಳಾಸವನ್ನು ಸಹ ನೀಡಿದೆ.



ಈ ಕೂಡಲೇ ಸಿರಿಯಾದಿಂದ ಹೊರಡಿ

### ತಡರಾತ್ರಿ ಸೂಚನೆ

**ಸಿರಿಯಾದಲ್ಲಿ ಮತ್ತೆ ಸಂಘರ್ಷ ಭುಗಿಲೆದ್ದಿದೆ. ಅಫ್ಘಾನಿಸ್ತಾನ ಮಾದರಿಯಲ್ಲಿ ಅಲ್ಲಿನ ಬಂಡುಕೋರ ಪಡೆಗಳು ಹಾಗೂ ಉಗ್ರಗಾಮಿ ಸಂಘಟನೆಗಳು ಜತೆಗೂಡಿ ಬಶರ್ ಅಲ್ ಅಸಾದ್ ಸರ್ಕಾರದ ವಿರುದ್ಧ ಆಕ್ರಮಣಕಾರಿ ದಾಳಿಗಳನ್ನು ನಡೆಸುತ್ತಿವೆ. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವ ಹಿನ್ನೆಲೆಯಲ್ಲಿ ವಿದೇಶಾಂಗ ಇಲಾಖೆಯು ಅಲ್ಲಿರುವ ಭಾರತೀಯರಿಗೆ ತಡರಾತ್ರಿ ಸೂಚನೆ ಹೊರಡಿಸಿದೆ.**

**ಸಿರಿಯಾದಲ್ಲಿ ಏನಾಗುತ್ತಿದೆ?:** ಸತತ ನಾಗರಿಕ, ಸೇನಾ ಸಂಘರ್ಷಗಳಿಂದ ನಲುಗುತ್ತಿರುವ ಸಿರಿಯಾದಲ್ಲಿ ರಾಜಕೀಯ ಕ್ಷೋಭೆ ತೀವ್ರಗೊಂಡಿದೆ. ರಷ್ಯಾ ಹಾಗೂ ಇರಾನ್ ಬೆಂಬಲಿತ ಬಶರ್ ಅಲ್ ಅಸಾದ್ ಸರ್ಕಾರವನ್ನು ಬಂಡುಕೋರ ಹಾಗೂ ಉಗ್ರಗಾಮಿ ಪಡೆಗಳು ಸುತ್ತುವರಿದಿವೆ. ಈ ಗುಂಪುಗಳಿಗೆ ಟರ್ಕಿ ಬೆಂಬಲವಿದೆ. ಅಧ್ಯಕ್ಷ ಬಶರ್ ಅಲ್ ಅಸಾದ್ ಅವರನ್ನು ಅಧಿಕಾರದಿಂದ ಕಿತ್ತೊಗೆಯುವ ಗುರಿಯೊಂದಿಗೆ ಈ ಬಂಡುಕೋರ ಸಂಘಟನೆಗಳು ಕಳೆದ ಒಂದು ವಾರಕ್ಕೂ ಹೆಚ್ಚು ಸಮಯದಿಂದ ಸಿರಿಯಾ ಉದ್ದಕ್ಕೂ ವಿಧ್ವಂಸಕ ಕೃತ್ಯಗಳನ್ನು ಎಸಗುತ್ತಿದೆ.

ಇಸ್ಲಾಮಿಸ್ಟ್ ನೇತೃತ್ವದ ಬಂಡುಕೋರರು ಸಿರಿಯಾದ ಹೋಮ್ಸ್ ನಗರದ ಪ್ರವೇಶ ದ್ವಾರದಲ್ಲಿದ್ದು, ಸರ್ಕಾರದ ನಿಯಂತ್ರಣದಿಂದ ಅನೇಕ ನಗರಗಳನ್ನು ಕಿತ್ತುಕೊಂಡಿವೆ. ಕೆಲವು ಕಡೆ ಒಂದೇ ಒಂದು ಗುಂಡು ಕೂಡ ಹಾರಿಸದೆಯೇ ನಗರಗಳನ್ನು ವಶಪಡಿಸಿಕೊಂಡಿವೆ. ಇಸ್ಲಾಮಿಸ್ಟ್ ಬಂಡುಕೋರರು ಎಸಗುತ್ತಿರುವ ಆಕ್ರಮಣ ಹಾಗೂ ಹಿಂಸಾಚಾರ ತೀವ್ರಗೊಂಡಿದೆ. ಸಿರಿಯಾದ ಎರಡನೇ ಅತಿ ದೊಡ್ಡ ನಗರ ಅಲೆಪ್ಪೋ ಹಾಗೂ ಕಾರ್ಯತಂತ್ರದ ದೃಷ್ಟಿಯಿಂದ ಮಹತ್ವದ್ದಾಗಿರುವ ಹಮಾ ನಗರಗಳು ಈಗಾಗಲೇ ಅಧ್ಯಕ್ಷ ಬಶರ್ ಅಲ್ ಅಸಾದ್ ಹಿಡಿತದಿಂದ ಕೈತಪ್ಪಿವೆ. 2011ರಲ್ಲಿ ನಾಗರಿಕ ಯುದ್ಧ ಆರಂಭವಾದಾಗಿನಿಂದ ಮೊದಲ ಬಾರಿ ಈ ರೀತಿ ನಡೆದಿದೆ. ಕಳೆದ ಐದು ದಶಕಗಳಿಂದಲೂ ಸಿರಿಯಾವನ್ನು ಬಶರ್ ಅಲ್ ಅಸಾದ್ ವಂಶ ಆಳುತ್ತಿದೆ. ಆದರೆ ಇದೇ ಮೊದಲ ಬಾರಿಗೆ ಅವರ ಕುಟುಂಬದ ಅಧಿಕಾರ ಸಂಪೂರ್ಣ ಕುಸಿಯುವ ಸನ್ನಿವೇಶ ಎದುರಾಗಿದೆ.

- **ಸಿರಿಯಾದಲ್ಲಿನ ತನ್ನ ಪ್ರಜೆಗಳಿಗಾಗಿ ತಡರಾತ್ರಿ ಸಲಹೆ ಹೊರಡಿಸಿದ ವಿದೇಶಾಂಗ ಸಚಿವಾಲಯ**
- **ಅಧ್ಯಕ್ಷ ಬಶರ್ ಅಲ್ ಅಸಾದ್ ವಿರುದ್ಧ ಸಮರ ಸಾರಿರುವ ಇಸ್ಲಾಮಿಸ್ಟ್ ಪಡೆಗಳಿಂದ ಆಕ್ರಮಣ**

# ಮಿನಿ ನ್ಯೂಸ್

## ಬೇನಾಮಿ ಆಸ್ತಿ ಪ್ರಕರಣದಲ್ಲಿ ಅಜಿತ್ ಪವಾರ್‌ಗೆ ಕ್ಲೀನ್‌ಚಿಟ್

**ಮುಂಬೈ:** ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರಿಗೆ ಬಿಗ್ ರಿಲೀಫ್ ಸಿಕ್ಕಿದೆ. ಆದಾಯ ತೆರಿಗೆ ಇಲಾಖೆಯು 2021 ರಲ್ಲಿ ವಶಪಡಿಸಿಕೊಂಡ 1,000 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿಯನ್ನು ಬಿಡುಗಡೆ ಮಾಡಲಾಗಿದೆ. ಬೇನಾಮಿ ಆಸ್ತಿ ವಹಿವಾಟು ತಡೆ ಮೇಲನವಿ ನ್ಯಾಯಮಂಡಳಿ ಪವಾರ್ ಕುಟುಂಬ ಬೇನಾಮಿ ಆಸ್ತಿ ಹೊಂದಿದ್ದಾರೆ. ಎಂಬ ಆರೋಪಗಳನ್ನು ವಜಾಗೊಳಿಸಿದ ನಂತರ ಈ ಕ್ರಮ ಕೈಗೊಳ್ಳಲಾಗಿದೆ.

ದೇವೇಂದ್ರ ಫಡ್ನವಿಸ್ ಮುಖ್ಯ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭದಲ್ಲಿ ಪವಾರ್ ಅವರು ಶಿವಸೇನೆಯ ಏಕನಾಥ್ ಶಿಂಧೆ ಅವರೊಂದಿಗೆ ಉಪಮುಖ್ಯ ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಒಂದು ದಿನದ ನಂತರ ಈ ತೀರ್ಪು ಬಂದಿದೆ. ಅವರು ಬೇನಾಮಿ ಆಸ್ತಿ ಹೊಂದಿದ್ದಾರೆ ಎಂಬ ಆರೋಪದ ಮೇಲೆ 2021 ರ ಅಕ್ಟೋಬರ್ 7 ರಂದು ಎನ್‌ಸಿಪಿ ನಾಯಕ, ಅವರ ಕುಟುಂಬಕ್ಕೆ ಸಂಬಂಧಿಸಿದ ಹಲವಾರು ಸ್ಥಳಗಳ ಮೇಲೆ ಐಟಿ ಇಲಾಖೆ ದಾಳಿ ನಡೆಸಿತ್ತು. ಈ ಪ್ರಕರಣದಲ್ಲಿ ಸತಾರಾದಲ್ಲಿನ ಸಕ್ಕರೆ ಕಾರ್ಖಾನೆ, ದೆಹಲಿಯ ಫ್ಲಾಟ್, ಗೋವಾದ ರೆಸಾರ್ಟ್ ಸೇರಿದಂತೆ ಹಲವು ಆಸ್ತಿಗಳನ್ನು ಜಪ್ತಿ ಮಾಡಲಾಗಿತ್ತು. ಆದಾಗ್ಯೂ, ತನಿಖೆಗಳು, ಯಾವುದೇ ಆಸ್ತಿಯನ್ನು ಅಜಿತ್ ಪವಾರ್ ಹೆಸರಿನಲ್ಲಿ ನೋಂದಾಯಿಸಲಾಗಿಲ್ಲ ಎಂದು ತಿಳಿದುಬಂದಿದೆ. ಸಾಕಷ್ಟು ಸಾಕ್ಷ್ಯಾಧಾರಗಳ ಕೊರತೆಯನ್ನು ಉಲ್ಲೇಖಿಸಿ ನ್ಯಾಯಪೀಠವು ಆರೋಪಗಳನ್ನು ತಿರಸ್ಕರಿಸಿತು. ಕಾನೂನುಬದ್ಧ ಹಣಕಾಸು ಮಾರ್ಗಗಳನ್ನು ಬಳಸುವುದಕ್ಕಾಗಿ ಆಸ್ತಿಗಳನ್ನು ಪಾವತಿಸಲಾಗಿದೆ ಎಂದು ಹೇಳಿರುವ ಐಟಿ ಇಲಾಖೆಯು ಬೇನಾಮಿ ಆಸ್ತಿ ಮತ್ತು ಪವಾರ್ ಕುಟುಂಬದ ನಡುವೆ ಯಾವುದೇ ಸಂಪರ್ಕವನ್ನು ಸ್ಥಾಪಿಸಲು ವಿಫಲವಾಗಿದೆ ಎಂದು ಹೇಳಿದೆ.

## ಬುದ್ಧಿ ಹೇಳಿದ್ದಕ್ಕೆ ಪ್ರಿನ್ಸಿಪಾಲರ ತಲೆಗೆ ಗುಂಡಿಕ್ಕಿ ಹತ್ಯೆಗೈದ ವಿದ್ಯಾರ್ಥಿ

**ಭೂಪಾಲ್:** ತರಗತಿಗೆ ಸರಿಯಾಗಿ ಬರುತ್ತಿಲ್ಲ ಎಂದು ಪೋಷಕರನ್ನು ಕರೆಸಿ ಬುದ್ಧಿ ಹೇಳಿದ್ದಕ್ಕೆ ವಿದ್ಯಾರ್ಥಿಯೊಬ್ಬ ಪ್ರಾಂಶುಪಾಲರನ್ನೇ ಗುಂಡಿಕ್ಕಿ ಹತ್ಯೆಗೈದ ಘಟನೆ ಮಧ್ಯಪ್ರದೇಶದ ಛತ್ತರ್‌ಪುರದಲ್ಲಿ ನಡೆದಿದೆ.

ಧಮೋರಾದ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಈ ಘಟನೆ ನಡೆದಿದೆ. ಹತ್ಯೆಯಾದ ಪ್ರಾಂಶುಪಾಲರನ್ನು ಸುರೇಂದ್ರ ಕುಮಾರ್ ಸಕ್ಸೇನಾ ಎಂದು ಗುರುತಿಸಲಾಗಿದೆ. ಅವರು ಹತ್ಯೆಗೈದ ವಿದ್ಯಾರ್ಥಿಗೆ ಕಾಲೇಜಿಗೆ ಸರಿಯಾಗಿ ಬರುತ್ತಿರಲಿಲ್ಲ ಎಂದು ಛೀಮಾರಿ ಹಾಕಿದ್ದರು. ಇದೇ ಕಾರಣಕ್ಕೆ ಶಾಲೆಗೆ ನುಗ್ಗಿ ಶೌಚಾಲಯದಲ್ಲಿದ್ದ ಪ್ರಾಂಶುಪಾಲರ ತಲೆಗೆ ಗುಂಡು ಹಾರಿಸಿದ್ದಾನೆ. ಈ ವೇಳೆ ಪ್ರಾಂಶುಪಾಲರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಕಾಲೇಜಿನಲ್ಲಿ ಅಳವಡಿಸಲಾದ ಸಿಸಿಟಿವಿಯಲ್ಲಿ ಆರೋಪಿಗಳ ಕೃತ್ಯ ಸೆರೆಯಾಗಿದೆ.

ಹತ್ಯೆ ಬಳಿಕ ಪ್ರಾಂಶುಪಾಲರ ಸ್ಕೂಟರ್ ಸಮೇತ ಆರೋಪಿ ಹಾಗೂ ಆತನ ಸ್ನೇಹಿತ ಇಬ್ಬರೂ ಪರಾರಿಯಾಗಿದ್ದಾರೆ ಎಂದು ತಿಳಿದು ಬಂದಿದೆ. ಘಟನೆಗೆ ಸಂಬಂಧಿಸಿದಂತೆ ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಂದ ಪೊಲೀಸರು ಮಾಹಿತಿ ಸಂಗ್ರಹಿಸಿದ್ದಾರೆ. ಈ ವೇಳೆ ಆರೋಪಿ ಗೂಂಡಾ ಸ್ವಭಾವದವನು ಎಂದು ತಿಳಿದು ಬಂದಿದೆ. ಆತನ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ.

## ನರಮೇಧ ಎಂದು ಘೋಷಿಸುವ ನಿರ್ಣಯ ಕೆನಡಾ ಸಂಸತ್ತಿನಲ್ಲಿ ವಜಾ

**ಒಟ್ಟಾವ:** ಭಾರತದಲ್ಲಿ ನಡೆದ 1984ರ ಸಿಖ್ ವಿರೋಧಿ ಗಲಭೆಯನ್ನು ನರಮೇಧ ಎಂದು ಘೋಷಿಸುವ ನಿರ್ಣಯವನ್ನು ಕೆನಡಾ ಸಂಸತ್ತು ವಜಾಗೊಳಿಸಿದೆ. ಇಂತಹ ನಿರ್ಣಯದ ಹಿಂದೆ ಖಾಲಿಸ್ತಾನಿ ಬೆಂಬಲಿತ ರಾಜಕೀಯ ಲಾಬಿ ನಡೆಯುತ್ತಿದೆ ಎಂದು ಕರ್ನಾಟಕ ಮೂಲದ ಚಂದ್ರ ಆರ್ಯ ಸೇರಿದಂತೆ ಹಲವು ಸಂಸದರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ನಿರ್ಣಯ ವಜಾಗೊಂಡ ಬಳಿಕ ಎಕ್ಸ್/ಟ್ವಿಟರ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಸುಖ್ ಧಲಿವಾಲ್ ಅವರು, ಭಾರತದಲ್ಲಿ 1984ರಲ್ಲಿ ಹಾಗೂ ನಂತರ ಸಿಖ್ ಸಮುದಾಯದವರ ವಿರುದ್ಧ ನಡೆದ ಅಪರಾಧ ಕೃತ್ಯಗಳನ್ನು ನರಮೇಧವೆಂದು ಕರೆಯುವ ನಿಟ್ಟಿನಲ್ಲಿ ಶನಿವಾರ ಸಂಸತ್ತಿನಲ್ಲಿ ನಿರ್ಣಯ ಮಂಡಿಸಿದೆ. ಕನ್ಸರ್ವೇಟಿವ್ ಪಕ್ಷದ ಹಲವು ಸಂಸದರು, ಲಿಬರಲ್ ಪಕ್ಷದ ಒಬ್ಬರು ಇದನ್ನು ವಿರೋಧಿಸಿದ್ದು ದುಃಖಕರ' ಎಂದು ಬರೆದುಕೊಂಡಿದ್ದಾರೆ.

ಇದೇ ವಿಚಾರವಾಗಿ ಟ್ವೀಟ್ ಮಾಡಿರುವ ಚಂದ್ರ ಆರ್ಯ, '1984ರ ಸಿಖ್ ವಿರೋಧಿ ಗಲಭೆಗಳನ್ನು ನರಮೇಧ ಎಂದು ಘೋಷಿಸಲು ಸರ್ರೇ-ನ್ಯೂಟನ್ ಸಂಸದರು ಸಂಸತ್ತಿನಲ್ಲಿ ಪ್ರಯತ್ನಿಸಿದರು. ತಮ್ಮ ನಿರ್ಣಯವನ್ನು ಅಂಗೀಕರಿಸಲು ಹೌಸ್ ಆಫ್ ಕಾಮನ್ಸ್ (ಕೆಳಮನೆ) ಸದಸ್ಯರ ಸರ್ವಾನುಮತದ ಒಪ್ಪಿಗೆ ಕೋರಿದರು.

ಸಾಧ್ಯವಿಲ್ಲ ಎಂದು ಸದನದಲ್ಲಿ ಹೇಳಿದ ಏಕೈಕ ಸದಸ್ಯ ನಾನು. ನನ್ನ ಆಕ್ಷೇಪಣೆಯು, ನಿರ್ಣಯವನ್ನು ತಡೆಯಲು ಸಾಕಾಯಿತು. ಇದರ ಬೆನ್ನಲ್ಲೇ, ಸದನದಲ್ಲಿ ನನಗೆ ಬೆದರಿಕೆಯೊಡ್ಡಲಾಯಿತು ಎಂದಿದ್ದಾರೆ. ಮುಂದುವರಿದು, ಹಿಂದೂ-ಕೆನಡಿಯನ್ನರ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ಹಾಗೂ ಸಾರ್ವಜನಿಕವಾಗಿ ಧ್ವನಿ ಎತ್ತದಂತೆ ನನ್ನನ್ನು ತಡೆಯುವ ಹಲವು ಪ್ರಯತ್ನಗಳು ಸಂಸತ್ತಿನ ಒಳಗೆ ಮತ್ತು ಹೊರಗೆ ನಡೆದಿವೆ. ಇಂತಹ ವಿಭಜಕ ಕಾರ್ಯಸೂಚಿಯನ್ನು ತಡೆಯಲು ಯಶಸ್ವಿಯಾಗಿದ್ದಕ್ಕೆ ನನಗೆ ಹೆಮ್ಮೆ ಇದೆ' ಎಂದು ಹೇಳಿಕೊಂಡಿದ್ದಾರೆ.

## ಸಬ್ ರಿಜಿಸ್ಟ್ರಾರ್ ಕಚೇರಿಗೆ ಬೆಂಕಿ ಹಚ್ಚಲು ಯತ್ನ; ವ್ಯಕ್ತಿಯ ಬಂಧನ

**ಕನ್ಯಾಕುಮಾರಿ:** ದಾಖಲೆಗಳನ್ನು ತಿದ್ದುಪಡಿ ಮಾಡಲು ಅಧಿಕಾರಿಗಳು ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಬೇಸತ್ತ ವ್ಯಕ್ತಿಯೊಬ್ಬರು ಸಬ್ ರಿಜಿಸ್ಟ್ರಾರ್ ಕಚೇರಿಗೆ ಬೆಂಕಿ ಹಚ್ಚಲು ಮುಂದಾದ ಘಟನೆ ತಮಿಳುನಾಡಿನ ಕನ್ಯಾಕುಮಾರಿಯಲ್ಲಿ ಜಿಲ್ಲೆಯಲ್ಲಿ ನಡೆದಿದೆ. 54 ವರ್ಷದ ವ್ಯಕ್ತಿಯು ಶನಿವಾರ ಕಚೇರಿಗೆ ಭೇಟಿ ನೀಡಿ ಪೆಟ್ರೋಲ್ ಸುರಿದು, ಟೇಬಲ್ ಮೇಲಿದ್ದ ದಾಖಲೆಗಳ ಮೇಲೂ ಚೆಲ್ಲಿದ್ದಾರೆ. ನಂತರ ಕಡ್ಡಿ ಉರಿಸಿ, ಬೆಂಕಿ ಹಚ್ಚಲು ಮುಂದಾದ ವೇಳೆ ಅದು ಉರಿಯಲಿಲ್ಲ. ತಕ್ಷಣವೇ ಅಲ್ಲಿದ್ದ ಸಿಬ್ಬಂದಿ ಅವರನ್ನು ತಡೆದು, ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.



ಆರೋಪಿಯನ್ನು ಬಂಧಿಸಿದ ಪೊಲೀಸರು, ವಿವಿಧ ಕಲಂನ ಅಡಿಯಲ್ಲಿ ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಿದ್ದಾರೆ. ದಾಖಲೆಗಳನ್ನು ತಿದ್ದುಪಡಿ ಮಾಡಲು ಅಧಿಕಾರಿಗಳು ವಿಳಂಬ ಮಾಡಿದ್ದರಿಂದ ಬೇಸತ್ತು ಬೆಂಕಿ ಹಚ್ಚಲು ಮುಂದಾದೆ ಎಂದು ಆರೋಪಿಯು ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

# ಪಂಜಾಬಿ ಗಾಯಕನಿಗೆ ಕನ್ನಡ ಹೇಳಿಕೊಟ್ಟ ದೀಪಿಕಾ



ಬೆಂಗಳೂರಿನ ಚೆಲುವೆ ದೀಪಿಕಾ ಪಡುಕೋಣೆ ಈಗ ಬಾಲಿವುಡ್‌ನ ನಂಬರ್ 1 ಸ್ಟಾರ್ ನಟಿ. ಬಾಲಿವುಡ್ ಮಾತ್ರವೇ ಅಲ್ಲದೆ ಹಾಲಿವುಡ್‌ನಲ್ಲಿಯೂ ಕಮಾಲ್ ತೋರಿಸಿ ಬಂದಿರುವ ದೀಪಿಕಾ ಪಡುಕೋಣೆ ಕನ್ನಡವನ್ನು ಮಾತ್ರ ಮರೆತಿಲ್ಲ. ಇತ್ತೀಚೆಗಷ್ಟೆ ತಾಯಿಯಾಗಿರುವ ದೀಪಿಕಾ ಪಡುಕೋಣೆ ಸಿನಿಮಾ ಚಿತ್ರೀಕರಣಗಳಿಂದ ಬಿಡುವು ಪಡೆದಿದ್ದಾರೆ. ಆದರೆ ಇದೀಗ ಬೆಂಗಳೂರಿನಲ್ಲಿ ನಡೆದ ಅದ್ಧೂರಿ ಲೈವ್ ಕಾನ್ಸರ್ಟ್‌ನಲ್ಲಿ ಸರ್ಪ್ರೈಸ್ ಎಂಟ್ರಿ ಕೊಟ್ಟಿದ್ದು ಮಾತ್ರವೇ ಅಲ್ಲದೆ, ಖ್ಯಾತ ಗಾಯಕ ದಿಲ್ಜೀತ್ ದೊಸ್ಸಾಂಗ್‌ಗೆ ಕನ್ನಡ ಸಹ ಹೇಳಿಕೊಟ್ಟಿದ್ದಾರೆ.

ಭಾರತದ ಖ್ಯಾತ ಪಂಜಾಬಿ ಗಾಯಕ ದಿಲ್ಜೀತ್ ದೊಸ್ಸಾಂಜ್ ಭಾರತದ ಪ್ರಮುಖ ನಗರಗಳಲ್ಲಿ ಸಂಗೀತ ಗೋಷ್ಠಿಗಳನ್ನು ಆಯೋಜನೆ ಮಾಡುತ್ತಿದ್ದಾರೆ. ದಿಲ್ಜೀತ್‌ರ ಲೈವ್ ಕಾನ್ಸರ್ಟ್ ಟಿಕೆಟ್‌ಗಳು ಲಕ್ಷಗಳಲ್ಲಿ ಮಾರಾಟವಾಗುತ್ತಿವೆ. ಪ್ರತಿ ಟಿಕೆಟ್‌ಗೆ ಲಕ್ಷಕ್ಕೂ ಹೆಚ್ಚು ಮೊತ್ತಕ್ಕೆ ಬ್ಲಾಕ್‌ನಲ್ಲಿ ಮಾರಾಟವಾಗುತ್ತಿವೆ. ಇದೀಗ ಭಾರತದಲ್ಲಿ 'ದಿಲ್ಲುಮಿನಾಟಿ' ಟೂರ್ ನಡೆಯುತ್ತಿದ್ದು, ಡಿಸೆಂಬರ್ 06 ಬೆಂಗಳೂರಿನಲ್ಲಿ ದಿಲ್ಜೀತ್‌ರ ಅದ್ಧೂರಿ ಕಾನ್ಸರ್ಟ್ ನಡೆಯಿತು. ದಿಲ್ಜೀತ್‌ರ ಬೆಂಗಳೂರು ಕಾನ್ಸರ್ಟ್‌ಗೆ ಭಾರಿ ಸಂಖ್ಯೆಯ ಅಭಿಮಾನಿಗಳು ಸೇರಿದ್ದರು. ದಿಲ್ಜೀತ್, ತಮ್ಮ ಪ್ರತಿ ಕಾನ್ಸರ್ಟ್‌ನಲ್ಲಿ ಒಬ್ಬ ವಿಶೇಷ ಅತಿಥಿಯನ್ನು ವೇದಿಕೆಗೆ ಕರೆತರುತ್ತಾರೆ. ವಿದೇಶಗಳಲ್ಲಿ ಶೋ ಮಾಡಿದಾಗ ಹಾಲಿವುಡ್ ತಾರೆಯರನ್ನು ಅತಿಥಿಯಾಗಿ ವೇದಿಕೆಗೆ ಕರೆತಂದಿದ್ದರು ದಿಲ್ಜೀತ್ ದೊಸ್ಸಾಂಜ್. ನಿನ್ನೆ ಬೆಂಗಳೂರಿನಲ್ಲಿ ಶೋ ನಡೆಸಿದಾಗ ಕನ್ನಡ ಚಿತ್ರರಂಗದ ಯಾವುದಾದರೂ ತಾರೆಯರನ್ನು ದಿಲ್ಜೀತ್ ಸ್ಟೇಜ್‌ಗೆ ಕರೆತರುತ್ತಾರೆ ಎಂದೇ ಭಾವಿಸಲಾಗಿತ್ತು. ಆದರೆ ದಿಲ್ಜೀತ್ ದೊಸ್ಸಾಂಜ್ ದೀಪಿಕಾ ಪಡುಕೋಣೆಯನ್ನು ಸರ್ಪ್ರೈಸ್ ಅತಿಥಿಯಾಗಿ ಕರೆತಂದರು. ವೇದಿಕೆಗೆ ಬಂದ ದೀಪಿಕಾ ಪಡುಕೋಣೆ ದಿಲ್ಜೀತ್ ದೊಸ್ಸಾಂಜ್‌ಗೆ ಕನ್ನಡ ಹೇಳಿಕೊಟ್ಟರು. ದೀಪಿಕಾ ಪಡುಕೋಣೆ, ವೇದಿಕೆಗೆ ಬಂದಾಗ ಕನ್ನಡದಲ್ಲಿ ಮಾತನಾಡಲು ದಿಲ್ಜೀತ್ ಯತ್ನಿಸಿದರು. ಆದರೆ ಸರಿಯಾಗಿ ಮಾತನಾಡಲು ಆಗಲಿಲ್ಲ. ಆಗ ದೀಪಿಕಾ ಪಡುಕೋಣೆ, 'ನಾನು ನಿಮ್ಮನ್ನು ಪ್ರೀತಿಸ್ತೀನಿ' ಎಂದು ಕನ್ನಡದಲ್ಲಿ ಹೇಳಿಕೊಟ್ಟರು, ದಿಲ್ಜೀತ್ ದೊಸ್ಸಾಂಜ್ ಸಹ ದೀಪಿಕಾ ಪಡುಕೋಣೆ ಹೇಳಿಕೊಟ್ಟಂತೆ ಹೇಳಿದರು. ದೀಪಿಕಾ ಪಡುಕೋಣೆ ಬೆಂಗಳೂರಿನ ಹುಡುಗಿ, ಅವರಿಗೆ ಕನ್ನಡ ಭಾಷೆ ಚೆನ್ನಾಗಿಯೇ ಗೊತ್ತು. ಅವರ ತಂದೆ ಪ್ರಕಾಶ್ ಪಡುಕೊಣೆ, ಈ ಹಿಂದೆ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದಂತೆ, ದೀಪಿಕಾ ಪಡುಕೋಣೆ, ಬೆಂಗಳೂರಿನ ಮನೆಗೆ ಬಂದರೆ ಕನ್ನಡದಲ್ಲಿಯೇ ಮಾತನಾಡುತ್ತಾರಂತೆ. ಅಂದಹಾಗೆ ತಮ್ಮ ಸಹನಟರಿಗೆ ದೀಪಿಕಾ ಪಡುಕೋಣೆ ಈ ಹಿಂದೆಯೂ ಕೆಲ ಬಾರಿ ಕನ್ನಡ ಹೇಳಿಕೊಟ್ಟಿದ್ದಾರೆ.

# ತಿರುಪತಿಗೆ ಮುಡಿ ಕೊಟ್ಟ ಶಿವಣ್ಣ ದಂಪತಿ

ಪತ್ನಿ ಗೀತಾ, ಮಗಳು ನಿವೇದಿತಾ ಮತ್ತು ಆಪ್ತರ ಜೊತೆ ತಿಮ್ಮಪ್ಪನ ದರ್ಶನ ಪಡೆದಿರುವ ಶಿವರಾಜ್ ಕುಮಾರ್ ಮುಡಿ ಕೊಟ್ಟಿದ್ದಾರೆ. ವಿದೇಶಕ್ಕೆ ಹಾರುವ ಮುನ್ನ ದೇವರ ದರ್ಶನ ಪಡೆದಿದ್ದಾರೆ . ನಟ ಶಿವರಾಜ್‌ಕುಮಾರ್ ಹಾಗೂ ಅವರ ಕುಟುಂಬಸ್ಥರು ತಿರುಪತಿ ತಿಮ್ಮಪ್ಪನ ದರ್ಶನ ಪಡೆದಿದ್ದಾರೆ. ಅಲ್ಲದೇ ಶಿವಣ್ಣ ಹಾಗೂ ಅವರ ಪತ್ನಿ ಗೀತಾ ಶಿವರಾಜ್ ಕುಮಾರ್ ತಿಮ್ಮಪ್ಪನಿಗೆ ಮುಡಿಕೊಟ್ಟಿದ್ದಾರೆ. ಪತ್ನಿ ಗೀತಾ, ಮಗಳು ನಿವೇದಿತಾ ಮತ್ತು ಆಪ್ತರ ಜೊತೆ ತಿಮ್ಮಪ್ಪನ ದರ್ಶನ ಪಡೆದಿರುವ ಶಿವರಾಜ್ ಕುಮಾರ್ ಮುಡಿ ಕೊಟ್ಟಿದ್ದಾರೆ. ವಿದೇಶಕ್ಕೆ ಹಾರುವ ಮುನ್ನ ದೇವರ ದರ್ಶನ ಪಡೆದಿದ್ದಾರೆ .

ಶಿವಣ್ಣ ಸೇರಿದಂತೆ ಗೀತಾ ಶಿವರಾಜ್ ಕುಮಾರ್ ಹಾಗು ಕುಟುಂಬಸ್ಥರಿಂದ ಮುಡಿ ಸೇವೆ ನಡೆದಿದೆ. ಇದೇ ತಿಂಗಳ 18 ಕ್ಕೆ ಅನಾರೋಗ್ಯದ ಕಾರಣ ಹೆಚ್ಚಿನ ಚಿಕಿತ್ಸೆಗೆ ನಟ ಶಿವಣ್ಣ ಅಮೇರಿಕಾಗೆ ಹೋಗಲಿದ್ದಾರೆ. ಅಮೇರಿಕಾಗೆ ಚಿಕಿತ್ಸೆಗೆ ಹೋಗೊ ಮುನ್ನ ತಿಮ್ಮಪ್ಪನ ಹರಕೆ ತೀರಿಸಿದ ಶಿವಣ್ಣ ದಂಪತಿ ತಿರುಪತಿ ತಿಮ್ಮಪ್ಪನಿಗೆ ಮುಡಿ ನೀಡಿದ್ದಾರೆ. ಅವರ ತಿರುಪತಿ ಭೇಟಿಯ ಫೋಟೋಗಳು ಸದ್ಯ ವೈರಲ್ ಆಗಿವೆ.



# 'ಪುಷ್ಪ 2' ಬಗ್ಗೆ ಮನಬಂದಂತೆ ಮಾತನಾಡೀರಿ ಜೋಕೆ



ಅಲ್ಲು ಅರ್ಜುನ್ ನಟನೆಯ 'ಪುಷ್ಪ 2' ಸಿನಿಮಾ ಡಿಸೆಂಬರ್ 05 ರಂದು ಬಿಡುಗಡೆ ಆಗಿದ್ದು ಉತ್ತಮ ಪ್ರದರ್ಶನ ಕಾಣುತ್ತಿದೆ. ಸಿನಿಮಾದ ಬಗ್ಗೆ ಕೆಲವರು ಋಣಾತ್ಮಕ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದು ಅಂಥಹವರ ವಿರುದ್ಧ ಕಾನೂನು ಕ್ರಮದ ಎಚ್ಚರಿಕೆಯನ್ನು ನಿರ್ಮಾಣ ಸಂಸ್ಥೆ ನೀಡಿದೆ.

ಅಲ್ಲು ಅರ್ಜುನ್ ನಟನೆಯ 'ಪುಷ್ಪ 2' ಸಿನಿಮಾ ಡಿಸೆಂಬರ್ 05 ಕ್ಕೆ ಬಿಡುಗಡೆ ಆಗಿದ್ದು ಅದ್ಧೂರಿ ಪ್ರದರ್ಶನ ಕಾಣುತ್ತಿದೆ. ಬಿಡುಗಡೆ ಆಗುವ ಯಾವುದೇ ಹೊಸ ಸಿನಿಮಾ ಇತ್ತೀಚೆಗೆ ಎದುರಿಸುತ್ತಿರುವ ಸಮಸ್ಯೆಯೆಂದರೆ ಯೂಟ್ಯೂಬ್ ವಿಮರ್ಶಕರು, ಆಡಿಯೆನ್ಸ್ ರೆಸ್ಪಾನ್ಸ್ ಹೆಸರಲ್ಲಿ ಸಿನಿಮಾದ ವಿಮರ್ಶೆಗಳನ್ನು ಹೇಳುವವರದ್ದು, ತೆಲುಗು ಚಿತ್ರರಂಗದಲ್ಲಿ ಈಗಾಗಲೇ ಈ ಆಡಿಯೆನ್ಸ್ ರೆಸ್ಪಾನ್ಸ್ ಅನ್ನು ರದ್ದು ಮಾಡಲಾಗಿದೆ. ತಮಿಳುನಾಡಿನಲ್ಲೂ ಇದನ್ನು ರದ್ದು ಮಾಡಲಾಗಿದೆ. ಆದರೆ ಯೂಟ್ಯೂಬ್ ವಿಮರ್ಶೆಗಳಿಗೆ ಕಡಿವಾಣ ಹಾಕಲು ಸಾಧ್ಯವಾಗಿಲ್ಲ. ಹಾಗೆಂದು 'ಪುಷ್ಪ 2' ಸಿನಿಮಾ ಬಗ್ಗೆ ಯೂಟ್ಯೂಬ್ ವಿಮರ್ಶಕರು ಬಾಯಿಗೆ ಬಂದಂತೆ ಮಾತನಾಡುವಂತಿಲ್ಲ. ಮಾತ್ರವಲ್ಲದೆ ಸಿನಿಮಾ ಡೈಲಾಗ್‌ಗಳನ್ನು ತಿರುಚುವಂತೆಯೂ ಇಲ್ಲ. ಹೀಗೆಂದು ಸ್ವತಃ ಚಿತ್ರತಂಡ ಎಚ್ಚರಿಕೆ ನೀಡಿದೆ.

ಕೇವಲ ಸಿನಿಮಾದ ಬಗ್ಗೆ ಕೆಟ್ಟದಾಗಿ ಅಥವಾ ಪೂರ್ವಾಗ್ರಹ ಪೀಡಿತವಾಗಿ ವಿಮರ್ಶೆ ನೀಡುವುದು ಮಾತ್ರವೇ ಅಲ್ಲದೆ ಸಿನಿಮಾದ ಡೈಲಾಗ್‌ಗಳನ್ನು ತಿರುಚಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುವುದು, ಸಿನಿಮಾ ಡೈಲಾಗ್‌ಗಳನ್ನು, ಸನ್ನಿವೇಶಗಳನ್ನು ಹಂಚಿಕೊಂಡು ತಮಾಷೆ ಮಾಡುವುದು, ಬೇರೆ ಕೆಲವು ಸಿನಿಮಾಗಳೊಟ್ಟಿಗೆ ಹೋಲಿಸುವುದು ಇಂಥಹಾ ಕಾರ್ಯಗಳನ್ನು ಮಾಡಿದಲ್ಲಿ 'ಪುಷ್ಪ 2' ಚಿತ್ರತಂಡ ಕಾನೂನು ಕ್ರಮಕ್ಕೆ ಮುಂದಾಗಲಿದೆ.

ಈ ಬಗ್ಗೆ ಮೈತ್ರಿ ಮೂವಿ ಮೇಕರ್ಸ್ ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಒಂದನ್ನು ಹಂಚಿಕೊಂಡಿದ್ದು, 'ಪುಷ್ಪ 2 ಸಿನಿಮಾದ ಸಂಭಾಷಣೆಗಳನ್ನು ತಿರುಚಿ ಹೇಳುತ್ತಿರುವ ವಿಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ.

# ಶ್ರದ್ಧಾ ಸರಳತೆ ಹೊಗಳಿದ ಫ್ಯಾನ್ಸ್

ನಟಿ ಶ್ರದ್ಧಾ ಕಪೂರ್ ಅವರು ಬಾಲಿವುಡ್‌ನಲ್ಲಿ ಭಿನ್ನವಾಗಿ ಗುರುತಿಸಿಕೊಳ್ಳುತ್ತಾರೆ. ಅವರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವಾಗ ಕುರ್ತಾ ಅಥವಾ ಟಿಶರ್ಟ್, ಜೀನ್ಸ್ ಹಾಕಿ ಕಾಣಿಸಿಕೊಳ್ಳುತ್ತಾರೆ. ಅವರು ಎಂದಿಗೂ ಬೋಲ್ಡ್ ಬಟ್ಟೆ ಹಾಕಿ ಹೊರಗೆ ಕಾಣಿಸಿಕೊಂಡಿಲ್ಲ. ಈ ಕಾರಣಕ್ಕೆ ಅವರು ಇಷ್ಟ ಆಗುತ್ತಾರೆ. ಈ ಫೋಟೋ ವೈರಲ್ ಆಗುತ್ತವೆ. ಈಗ ಶ್ರದ್ಧಾ ಪೂರ್ ಅವರು ಮಾರುತಿ ಸುಜುಕಿ ಸ್ವಿಫ್ಟ್ ಕಾರಲ್ಲಿ ಬಂದು ಗಮನ ಸೆಳೆದಿದ್ದಾರೆ.

ಸೆಲೆಬ್ರಿಟಿಗಳು ಅದರಲ್ಲೂ ಬಾಲಿವುಡ್ ಸೆಲೆಬ್ರಿಟಿಗಳು ಓಡಾಡುವಾಗ ದುಬಾರಿ ಕಾರುಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಒಬ್ಬರು ಬೆಂಜ್‌ನಲ್ಲಿ ಬಂದರೆ ಮತ್ತೊಬ್ಬರು ಬಿಎಂಡಬ್ಲ್ಯು ಕಾರಲ್ಲಿ ಬರುತ್ತಾರೆ. ಅವರ ಬಳಿ ಕಡಿಮೆ ಬೆಲೆಯ ಕಾರಿದ್ದರೂ ಯಾರು ಏನು ಅಂದುಕೊಂಡು ಬಿಡುತ್ತಾರೇನೋ ಅಥವಾ ಸಮಾಜದಲ್ಲಿ ನಮ್ಮ ಲೆವೆಲ್ ಕಡಿಮೆ ಆಗಬಾರದು ಎನ್ನುವ ಕಾರಣಕ್ಕೆ ದುಬಾರಿ ಕಾರುಗಳಲ್ಲಿ ಓಡಾಟ ನಡೆಸಿದ ಅನೇಕರ ಸೆಲೆಬ್ರಿಟಿಗಳು ಇದ್ದಾರೆ. ಆದರೆ, ಶ್ರದ್ಧಾ ಕಪೂರ್ ಈ ವಿಚಾರದಲ್ಲಿ ಭಿನ್ನ.

ಶ್ರದ್ಧಾ ಕಪೂರ್ ಅವರು ಜುಹುನಲ್ಲಿ ಕಾಣಿಸಿಕೊಂಡಿದ್ದಾರೆ. ಅವರು ಮಾರುತಿ ಸ್ವಿಫ್ಟ್ ಕಾರಲ್ಲಿ ಬಂದಿದ್ದಾರೆ. ಬಿಳಿ ಬಣ್ಣದ ಕಾರು ಇದಾಗಿದ್ದು, ಶ್ರದ್ಧಾ ಸರಳತೆಯನ್ನು ಅನೇಕರು ಹೊಗಳಿದ್ದಾರೆ. ಶ್ರದ್ಧಾ ಕಪೂರ್ ಬಳಿ ಲ್ಯಾಂಬೋರ್ಗಿನಿ ಕಾರು ಇದೆ. ಇದನ್ನು ಅವರೇ ಅನೇಕ ಕಡೆಗಳಲ್ಲಿ ಚಲಾಯಿಸಿಕೊಂಡು ಓಡಾಡಿದ್ದನ್ನು ನಾವು ನೋಡಬಹುದು. ಇನ್ನು ಬೆಂಜ್ ರೀತಿಯ ಐಷಾರಾಮಿ ಕಾರುಗಳು ಇವೆ. ಆದರೆ, ಅವರು ಪ್ರಾಮುಖ್ಯತೆ ನೀಡಿದ್ದು ಸ್ವಿಫ್ಟ್ ಕಾರಿಗೆ ಅನ್ನೋದು ವಿಶೇಷ.




ಬೆಂಜ್ ರೀತಿಯ ಐಷಾರಾಮಿ ಕಾರುಗಳು ಇವೆ

# ಮುಂದಿನ ಸಿನಿಮಾಗೆ ಧಿರೇನ್ ರಾಮ್ ನಾಯಕ



ಈ ಚಿತ್ರವು ಗೀತಾ ಪಿಕ್ಚರ್ಸ್ ನ ಹೊಸ ಪ್ರಯೋಗವಾಗಿದೆ. ತಮ್ಮಬ್ಯಾನರ್ ನಲ್ಲಿ ಯಾವಾಗಲು ಶಿವಣ್ಣ ನಟಿಸುತ್ತಿದ್ದರು.

ಭೈರತಿ ರಣಗಲ್ ಚಿತ್ರದ ಯಶಸ್ಸಿನಲ್ಲಿರುವ ಗೀತಾ ಪಿಕ್ಚರ್ಸ್ ಮತ್ತೊಂದು ಹೊಸ ಸಿನಿಮಾ ಪ್ರಕಟಿಸಿದೆ. ತಮ್ಮ ಮೂರನೇ ಸಿನಿಮಾ ಎ ಫಾರ್ ಆನಂದ್ ಚಿತ್ರದಲ್ಲಿ ಶಿವರಾಜ್‌ಕುಮಾರ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡ ನಂತರ, ಬ್ಯಾನರ್ ಈಗ ಡಾ ಪಾರ್ವತಮ್ಮ ರಾಜ್‌ಕುಮಾರ್ ಅವರ ಜನ್ಮದಿನದ ನೆನಪಿಗಾಗಿ ಮತ್ತೊಂದು ಭರವಸೆಯ ಸಿನಿಮಾ ಘೋಷಿಸಿದ್ದಾರೆ. ಈ ಚಿತ್ರದಲ್ಲಿ ಧೀರೇನ್ ರಾಮ್ ಕುಮಾರ್ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಶಾಖಾಹಾರಿ ಚಿತ್ರದ ಡೈರೆಕ್ಟರ್ ಸಂದೀಪ್ ಸುಂಕದ್ ನಿರ್ದೇಶಿಸಲಿದ್ದಾರೆ. ಈ ಚಿತ್ರವು ಗೀತಾ ಪಿಕ್ಚರ್ಸ್ ನ ಹೊಸ ಪ್ರಯೋಗವಾಗಿದೆ. ತಮ್ಮಬ್ಯಾನರ್ ನಲ್ಲಿ ಯಾವಾಗಲು ಶಿವಣ್ಣ ನಟಿಸುತ್ತಿದ್ದರು, ಆದರೆ ಇದೇ ಮೊದಲ ಬಾರಿಗೆ ಶಿವರಾಜ್ ಕುಮಾರ್ ಹೊರತು ಪಡಿಸಿ ಬೇರೊಬ್ಬ ನಾಯಕನನ್ನು ಆಯ್ಕೆ ಮಾಡುವ ಸಂಪ್ರದಾಯ ಪಾಲಿಸುತ್ತಿದೆ. ಅದರ ಬ್ಯಾನರ್ ಅಡಿಯಲ್ಲಿಹೊಸ ಮುಖಗಳನ್ನು ಪರಿಚಯಿಸುತ್ತದೆ.

ಹಾಗೆಂದ ಮಾತ್ರಕ್ಕೆ ಗೀತಾ ಪಿಕ್ಚರ್ಸ್ ಅಡಿಯಲ್ಲಿ ಬರುತ್ತಿರುವ ಹೊಸ ಸಿನಿಮಾಗೆ ಹೊರಗಿನವರು ನಾಯಕರಲ್ಲ, ಶಿವರಾಜ್ಕುಮಾರ್ ಅವರ ಸಹೋದರಿ ಪೂರ್ಣಿಮಾ ಮತ್ತು ನಟ ರಾಮ ಕುಮಾರ್ ಮಗ ಧಿರೇನ್ ರಾಮ್ ಕುಮಾರ್ ನಾಯಕನಾಗುತ್ತಿದ್ದಾರೆ. ಡಿ. 6, ಪಾರ್ವತಮ್ಮ ರಾಜಕುಮಾರ್ ಅವರ ಹುಟ್ಟುಹಬ್ಬ. ಈ ಸಂದರ್ಭದಲ್ಲಿ ಗೀತಾ ಪಿಕ್ಚರ್ಸ್‌ನ ನಾಲ್ಕನೇ ಚಿತ್ರವನ್ನು ಘೋಷಿಸಲಾಗಿದೆ. ಈ ಚಿತ್ರದಲ್ಲಿ ಧೀರನ್ ರಾಮ್‌ಕುಮಾರ್ ನಾಯಕನಾಗಿ ನಟಿಸಿದ್ದಾರೆ.

# ಮತ್ತೆ ಕೈಕೊಟ್ಟ ಟೀಂ ಇಂಡಿಯಾದ ಬ್ಯಾಟಿಂಗ್ ವಿಭಾಗ

ಅಡಿಲೇಡ್‌ನಲ್ಲಿ ನಡೆಯುತ್ತಿರುವ ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಎರಡನೇ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡ ಮೇಲುಗೈ ಸಾಧಿಸಿದೆ. ಮೊದಲ ಇನ್ನಿಂಗ್ಸ್‌ನಲ್ಲಿ 337 ರನ್ ಕಲೆಹಾಕಿರುವ ಆಸ್ಟ್ರೇಲಿಯಾ, ಎರಡನೇ ಇನ್ನಿಂಗ್ಸ್ ಆರಂಭಿಸಿರುವ ಟೀಂ ಇಂಡಿಯಾದ 5 ವಿಕೆಟ್‌ಗಳನ್ನು 128 ರನ್‌ಗಳಿಗೆ ಉರುಳಿಸಿದೆ. ರಿಷಬ್ ಪಂತ್ ಮತ್ತು ನಿತೀಶ್ ಕುಮಾರ್ ರೆಡ್ಡಿ ಮೂರನೇ ದಿನದಾಟಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಭಾರತ ಹಾಗೂ ಆಸ್ಟ್ರೇಲಿಯಾ ನಡುವೆ ಅಡಿಲೇಡ್‌ನಲ್ಲಿ ನಡೆಯುತ್ತಿರುವ 2ನೇ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡ ಸಂಪೂರ್ಣವಾಗಿ ಮೇಲುಗೈ ಸಾಧಿಸಿದೆ. ಆಸ್ಟ್ರೇಲಿಯಾವನ್ನು ಮೊದಲ ಇನ್ನಿಂಗ್ಸ್‌ನಲ್ಲಿ 337 ರನ್‌ಗಳಿಗೆ ಆಲೌಟ್ ಮಾಡಿ ಎರಡನೇ ಇನ್ನಿಂಗ್ಸ್ ಆರಂಭಿಸಿರುವ ಟೀಂ ಇಂಡಿಯಾ ಎರಡನೇ ದಿನದಾಟದಂತ್ಯಕ್ಕೆ ಪ್ರಮುಖ 5 ವಿಕೆಟ್‌ಗಳನ್ನು ಕಳೆದುಕೊಂಡು 128 ರನ್ ಕಲೆಹಾಕಿದೆ. ರೋಹಿತ್ ಪಡೆ ಇನ್ನೂ 29 ರನ್‌ಗಳ ಇನ್ನಿಂಗ್ಸ್ ಹಿನ್ನಡೆಯಲ್ಲಿದೆ.

ತಂಡದ ಪರ ರಿಷಬ್ ಪಂತ್ ಹಾಗೂ ನಿತೀಶ್ ಕುಮಾರ್ ರೆಡ್ಡಿ ಅಜೇಯರಾಗಿ ಉಳಿದಿದ್ದು, ಮೂರನೇ ದಿನದಾಟಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಇದೀಗ ಈ ಇಬ್ಬರ ಮೇಲೆ ತಂಡದ ಸೋಲು ಗೆಲುವು ನಿರ್ಧಾರವಾಗಲಿದೆ. ಒಂದು ವೇಳೆ ಮೂರನೇ ದಿನದಾಟದಲ್ಲಿ ಈ ಇಬ್ಬರು ಬೇಗನೇ ವಿಕೆಟ್ ಒಪ್ಪಿಸಿದರೆ, ಟೀಂ ಇಂಡಿಯಾಕ್ಕೆ ಸೋಲು ಖಚಿತ ಎಂತಲೇ ಹೇಳಬಹುದು.




## ಬ್ಯಾಟಿಂಗ್ ವೈಫಲ್ಯ

ಅಡಿಲೇಡ್‌ನ ಮೊದಲ ಇನ್ನಿಂಗ್ಸ್‌ನಲ್ಲಿ ಟೀಂ ಇಂಡಿಯಾದ ಬ್ಯಾಟಿಂಗ್ ತೀರ ಕಳಪೆಯಾಗಿತ್ತು. ಆದಾಗ್ಯೂ ಎರಡನೇ ಇನ್ನಿಂಗ್ಸ್‌ನಲ್ಲಿ ತಂಡ ಪುಟಿದೇಳಬಹುದೆಂಬ ನಿರೀಕ್ಷೆ ಇತ್ತು. ಏಕೆಂದರೆ ಪರ್ತ್ ಟೆಸ್ಟ್‌ನಲ್ಲೂ ಇದೇ ಸನ್ನಿವೇಶವಿದ್ದಾಗ ತಂಡದ ಬ್ಯಾಟಿಂಗ್ ವಿಭಾಗ ಬಲಿಷ್ಠ ಪ್ರದರ್ಶನ ನೀಡಿತ್ತು. ಆದರೆ ಪರ್ತ್‌ನಲ್ಲಿ ತೋರಿದ ಪ್ರದರ್ಶನವನ್ನು ಅಡಿಲೇಡ್‌ನಲ್ಲಿ ಪುನಾರವರ್ತಿಸಲು ಟೀಂ ಇಂಡಿಯಾದ ಬ್ಯಾಟಿಂಗ್ ವಿಭಾಗಕ್ಕೆ ಸಾಧ್ಯವಾಗಲಿಲ್ಲ. ಮೊದಲ ಇನ್ನಿಂಗ್ಸ್‌ನಂತೆ ಎರಡನೇ ಇನ್ನಿಂಗ್ಸ್‌ನಲ್ಲೂ ಬ್ಯಾಟಿಂಗ್ ವಿಭಾಗದ ಪೆವಿಲಿಯನ್ ಪರೇಡ್ ನಡೆಯಿತು.

## ಒಂದೇ ಸೆಷನ್‌ನಲ್ಲಿ 5 ವಿಕೆಟ್ ಪತನ

ಎರಡನೇ ಇನ್ನಿಂಗ್ಸ್‌ನಲ್ಲಿ ಭಾರತದ ಆರಂಭವೇ ಕಳಪೆಯಾಗಿತ್ತು. ಆರಂಭಿಕ ಜೋಡಿ ಯಶಸ್ವಿ ಜೈಸ್ವಾಲ್ ಮತ್ತು ಕೆಎಲ್ ರಾಹುಲ್ ಮತ್ತೆ ಫೇಲ್ ಆಗಿದ್ದು, ತಂಡಕ್ಕೆ ಬಲಿಷ್ಠ ಆರಂಭ ನೀಡಲು ಸಾಧ್ಯವಾಗಲಿಲ್ಲ. ಮೊದಲ ಇನ್ನಿಂಗ್ಸ್‌ನಲ್ಲಿ 2 ಜೀವದಾನವನ್ನು ಬಳಸಿಕೊಂಡು 37 ರನ್ ಗಳಿಸಿದ್ದ ರಾಹುಲ್, ಎರಡನೇ ಇನ್ನಿಂಗ್ಸ್‌ನಲ್ಲಿ ಕೇವಲ ಏಳು ರನ್‌ಗಳಿಗೆ ಸುಸ್ತಾದರು. ನಂತರ ಬೋಲ್ಯಾಂಡ್ ಯಶಸ್ವಿ (24) ಮತ್ತು ವಿರಾಟ್ ಕೊಹ್ಲಿ (11) ಅವರನ್ನು ಔಟ್ ಮಾಡುವ ಮೂಲಕ ಭಾರತಕ್ಕೆ ಎರಡು ಹೊಡೆತ ನೀಡಿದರು. ಇತ್ತ ಉತ್ತಮ ಆರಂಭವನ್ನು ಪಡೆದುಕೊಂಡಿದ್ದ ಶುಭಮನ್ ಗಿಲ್ ಕೂಡ ದೊಡ್ಡ ಇನ್ನಿಂಗ್ಸ್ ಆಡುವಲ್ಲಿ ವಿಫಲರಾಗಿ ಅವರು 28 ರನ್ ಗಳಿಸಿದ್ದಾಗ ಸ್ಟಾರ್ಕ್ ಎಸೆತದಲ್ಲಿ ಬೌಲ್ಡ್ ಆದರು. ಎಂದಿನಂತೆ ಬಂದಷ್ಟೆ ವೇಗವಾಗಿ ಪೆವಿಲಿಯನ್ ಸೇರಿಕೊಂಡ ನಾಯಕ ರೋಹಿತ್ ಶರ್ಮಾ ಕಮ್ಮಿನ್ಸ್ ಎಸೆತದಲ್ಲಿ ವಿಕೆಟ್ ಒಪ್ಪಿಸಿದರು. ಈ ಮೂಲಕ 2ನೇ ದಿನದಾಟದ ಕೊನೆಯ ಸೆಷನ್‌ನಲ್ಲೇ ಟೀಂ ಇಂಡಿಯಾದ ಪ್ರಮುಖ 5 ವಿಕೆಟ್‌ಗಳು ಪತನಗೊಂಡಿರುವುದು ತಂಡವನ್ನು ಸಂಕಷ್ಟಕ್ಕೆ ಸಿಲುಕಿಸಿದೆ.

ಒಂದು ವಿಕೆಟ್‌ಗೆ 86 ರನ್‌ಗಳಿಂದ ಎರಡನೇ ದಿನದಾಟವನ್ನು ಆರಂಭಿಸಿದ ಆಸ್ಟ್ರೇಲಿಯಾ 251 ರನ್ ಗಳಿಸುವಷ್ಟರಲ್ಲಿ ಕೊನೆಯ ಒಂಬತ್ತು ವಿಕೆಟ್‌ಗಳನ್ನು ಕಳೆದುಕೊಂಡಿತು. ಅಂತಿಮವಾಗಿ ಆಸ್ಟ್ರೇಲಿಯಾ 337 ರನ್‌ಗಳಿಗೆ ತನ್ನ ಮೊದಲ ಇನ್ನಿಂಗ್ಸ್ ಮುಗಿಸಿತು. ತಂಡದ ಪರ ಟ್ರಾವಿಸ್ ಹೆಡ್ 140 ರನ್‌ಗಳ ಅದ್ಭುತ ಇನ್ನಿಂಗ್ಸ್ ಆಡಿದರು. ಭಾರತದ ಪರ ಜಸ್ಪ್ರೀತ್ ಬುಮ್ರಾ ಮತ್ತು ಮೊಹಮ್ಮದ್ ಸಿರಾಜ್ ತಲಾ ನಾಲ್ಕು ವಿಕೆಟ್ ಪಡೆದರು.

# ದಾಖಲೆ ಮುರಿದ ಬುಮ್ರಾ

ಆಸ್ಟ್ರೇಲಿಯಾ ಪ್ರವಾಸದಲ್ಲಿ ಅದ್ಭುತ ಪ್ರದರ್ಶನ ನೀಡುತ್ತಿರುವ ಜಸ್ಪ್ರೀತ್ ಬುಮ್ರಾ ಒಂದು ವರ್ಷದಲ್ಲಿ ಅತಿ ಹೆಚ್ಚು ಟೆಸ್ಟ್ ವಿಕೆಟ್ ಪಡೆದ ಭಾರತೀಯ ಬೌಲರ್‌ಗಳ ಪೈಕಿ ಇದೀಗ ಜಹೀರ್ ಖಾನ್ ಅವರನ್ನು ಹಿಂದಿಕ್ಕಿದ್ದಾರೆ. ಇನ್ನು ಎರಡು ಪಂದ್ಯಗಳಲ್ಲಿ ಬುಮ್ರಾ 23 ವಿಕೆಟ್ ಪಡೆದರೆ ಕಪಿಲ್ ದೇವ್ ಅವರ ದಾಖಲೆಯನ್ನೂ ಮುರಿಯಲಿದ್ದಾರೆ. ಭಾರತ ಹಾಗೂ ಆಸ್ಟ್ರೇಲಿಯಾ ನಡುವೆ ಅಡಿಲೇಡ್‌ನಲ್ಲಿ ನಡೆಯುತ್ತಿರುವ 2ನೇ ಟೆಸ್ಟ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ 337 ರನ್ ಕಲೆಹಾಕಿದೆ. ಈ ಮೂಲಕ ಮೊದಲ ಇನ್ನಿಂಗ್ಸ್‌ನಲ್ಲಿ 157 ರನ್‌ಗಳ ಮುನ್ನಡೆ ಪಡೆದುಕೊಂಡಿದೆ. ಆಸೀಸ್ ಪರ ಟ್ರಾವಿಸ್ ಹೆಡ್ 140 ರನ್‌ಗಳ ಇನ್ನಿಂಗ್ಸ್ ಆಡಿದರೆ, ಭಾರತದ ಪರ ಜಸ್ಪ್ರೀತ್ ಬುಮ್ರಾ ಹಾಗೂ ಮೊಹಮ್ಮದ್ ಸಿರಾಜ್ ತಲಾ 4 ವಿಕೆಟ್ ಪಡೆದರು. ಆಸ್ಟ್ರೇಲಿಯಾ ಪ್ರವಾಸದಲ್ಲಿ ಮಾರಕ ದಾಳಿ ನಡೆಸುತ್ತಿರುವ ವೇಗಿ ಜಸ್ಪ್ರೀತ್ ಬುಮ್ರಾ ಮೊದಲ ಇನ್ನಿಂಗ್ಸ್‌ನಲ್ಲಿ 4 ವಿಕೆಟ್ ಉರುಳಿಸುವ ಮೂಲಕ ಒಂದು ವರ್ಷದಲ್ಲಿ ಅಧಿಕ ಟೆಸ್ಟ್ ವಿಕೆಟ್ ಉರುಳಿಸಿದ ಭಾರತದ ಬೌಲರ್‌ಗಳ ಪೈಕಿ ಇದೀಗ ಮಾಜಿ ವೇಗಿ ಜಹೀರ್ ಖಾನ್ ಅವರನ್ನು ಹಿಂದಿಕ್ಕಿದ್ದಾರೆ. ಜಹೀರ್ ಖಾನ್ 2002 ರಲ್ಲಿ 51 ವಿಕೆಟ್ ಪಡೆಯುವ ಮೂಲಕ ಒಂದು ವರ್ಷದಲ್ಲಿ ಭಾರತದ ಪರ ಅತ್ಯಧಿಕ ಟೆಸ್ಟ್ ವಿಕೆಟ್ ಪಡೆದ ಮೂರನೇ ವೇಗದ ಬೌಲರ್ ಎನಿಸಿಕೊಂಡಿದ್ದರು. ಇದೀಗ ಅವರ ಸ್ಥಾನವನ್ನು ಜಸ್ಪ್ರೀತ್ ಬುಮ್ರಾ ಆಕ್ರಮಿಸಿಕೊಂಡಿದ್ದಾರೆ.




# ಔಟ್ ಆಗದಿದ್ದರೂ ವಿಕೆಟ್ ಒಪ್ಪಿಸಿ ಹೊರ ನಡೆದ ಬ್ಯಾಟರ್..!

ಅಡಿಲೇಡ್‌ನ ಓವಲ್ ಮೈದಾನದಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ದ್ವಿತೀಯ ಟೆಸ್ಟ್ ಪಂದ್ಯವು ನಡೆಯುತ್ತಿದೆ. ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ ಪ್ರಥಮ ಇನಿಂಗ್ಸ್ ನಲ್ಲಿ 180 ರನ್‌ಗಳಿಸಿ ಆಲೌಟ್ ಆಗಿದೆ. ಇದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ಆಸ್ಟ್ರೇಲಿಯಾ ತಂಡವು ಮೊದಲ ದಿನದಾಟದ ಅಂತ್ಯಕ್ಕೆ 1 ವಿಕೆಟ್ ಕಳೆದುಕೊಂಡು 86 ರನ್ ಕಲೆಹಾಕಿತ್ತು.

ಅದರಂತೆ ದ್ವಿತೀಯ ದಿನದಾಟದಲ್ಲಿ 2ನೇ ಇನಿಂಗ್ಸ್ ಮುಂದುವರೆಸಿದ ಆಸ್ಟ್ರೇಲಿಯಾ ಉತ್ತಮ ಆರಂಭ ಪಡೆಯಲಿಲ್ಲ. ಜಸ್‌ಪ್ರೀತ್ ಬುಮ್ರಾ ಎಸೆತಗಳಲ್ಲಿ ಆರಂಭಿಕ ಆಟಗಾರ ನಾಥನ್ ಮೆಕ್‌ಸ್ವೀನ್ (39) ಹಾಗೂ ಸ್ಟೀವ್ ಸ್ಮಿತ್ (2) ಬ್ಯಾಕ್ ಟು ಬ್ಯಾಕ್ ವಿಕೆಟ್ ಒಪ್ಪಿಸಿದರು. ಇದರ ಬೆನ್ನಲ್ಲೇ ಮಾರ್ನಸ್ ಲಾಬುಶೇನ್ (64) ಕೂಡ ಔಟಾದರು. ಈ ಹಂತದಲ್ಲಿ ಟ್ರಾವಿಸ್ ಹೆಡ್ ಜೊತೆಗೂಡಿದ ಮಿಚೆಲ್ ಮಾರ್ಷ್ ರಕ್ಷಣಾತ್ಮಕ ಆಟಕ್ಕೆ ಒತ್ತು ನೀಡಿದರು. 25 ಎಸೆತಗಳನ್ನು ಎದುರಿಸಿದ ಮಾರ್ಷ್ 1 ಫೋರ್‌ನೊಂದಿಗೆ 9 ರನ್ ಕಲೆಹಾಕಿದ್ದರು. 64ನೇ ಓವರ್‌ನಲ್ಲಿ ದಾಳಿಗಿಳಿದ ಅಶ್ವಿನ್ ಮಿಚೆಲ್ ಮಾರ್ಷ್ ವಿಕೆಟ್ ಪಡೆಯಲು ಇನ್ನಿಲ್ಲದ ತಂತ್ರ ಪ್ರಯೋಗಿಸಿದರು. ಆದರೆ ಮೊದಲ ಮೂರು ಎಸೆತಗಳಲ್ಲಿ ಯಾವುದೇ ಸಫಲತೆ ದೊರೆತಿರಲಿಲ್ಲ. ಇನ್ನು ನಾಲ್ಕನೇ ಎಸೆತವು ಮಿಚೆಲ್ ಮಾರ್ಷ್ ಬ್ಯಾಟ್ ಬದಿಯಿಂದ ವಿಕೆಟ್ ಕೀಪರ್ ಕೈ ಸೇರಿತು. ಚೆಂಡು ಹಿಡಿಯುತ್ತಿದ್ದಂತೆ ವಿಕೆಟ್ ಕೀಪರ್ ರಿಷಭ್ ಪಂತ್ ಅಪೀಲ್ ಮಾಡಲಾರಂಭಿಸಿದರು. ಇತ್ತ ಅಶ್ವಿನ್ ಕೂಡ ಅಂಪೈರ್‌ಗೆ ಮನವಿ ಸಲ್ಲಿಸಿದರು. ಟೀಮ್ ಇಂಡಿಯಾ ಆಟಗಾರರ ಮನವಿಯನ್ನು ನೋಡಿ ಅತ್ತ ಮಿಚೆಲ್ ಮಾರ್ಷ್ ಪೆವಿಲಿಯನ್ ಕಡೆ ಹೆಜ್ಜೆ ಹಾಕಲಾರಂಭಿಸಿದರು. ಮಾರ್ಷ್ ಕ್ರೀಸ್ ತೊರೆಯುತ್ತಿರುವುದನ್ನು ಗಮನಿಸಿದ ಅಂಪೈರ್ ಔಟ್ ನೀಡಿದರು. ಆದರೆ ಆ ಬಳಿಕ ನಡೆದ ವಿಡಿಯೋ ರಿಪ್ಲೇನಲ್ಲಿ ಮಿಚೆಲ್ ಮಾರ್ಷ್ ಅವರ ಬ್ಯಾಟ್‌ಗೆ ಬಾಲ್ ತಾಗದಿರುವುದು ಕಂಡು ಬಂದಿದೆ. ಚೆಂಡು ಬ್ಯಾಟ್‌ನಿಂದ ದೂರದಲ್ಲೇ ಸಾಗಿದರೂ, ತಪ್ಪು ಗ್ರಹಿಕೆಯಿಂದ ಮಾರ್ಷ್ ಕ್ರೀಸ್ ತೊರೆದಿದ್ದರು. ಇದೀಗ ನಾಟೌಟ್ ಆಗಿದ್ದರೂ, ವಿಕೆಟ್ ಒಪ್ಪಿಸಿ ಹೊರ ನಡೆದ ಮಿಚೆಲ್ ಮಾರ್ಷ್ ಅವರ ವಿಡಿಯೋ ವೈರಲ್ ಆಗಿದೆ.

# ಜನ್ಮ ದಿನದ ಸಂಭ್ರಮದಲ್ಲಿರುವ ಕಿಂಗ್ ಕೊಹ್ಲಿಗೆ ಬಿಗ್‌ಶಾಕ್ !




ವಿರಾಟ್ ಕೊಹ್ಲಿ ಅವರು ಐಸಿಸಿ ಟೆಸ್ಟ್ ಬ್ಯಾಟ್ಸ್‌ಮನ್ ಶ್ರೇಯಾಂಕದಲ್ಲಿ 22ನೇ ಸ್ಥಾನಕ್ಕೆ ಕುಸಿದಿದ್ದಾರೆ. ಇದು 10 ವರ್ಷಗಳ ನಂತರ ಅವರ ಅತ್ಯಂತ ಕಡಿಮೆ ಶ್ರೇಯಾಂಕ. ಬಾಂಗ್ಲಾದೇಶ ಮತ್ತು ನ್ಯೂಜಿಲೆಂಡ್ ವಿರುದ್ಧದ ಕಳಪೆ ಪ್ರದರ್ಶನದಿಂದಾಗಿ ಈ ಕುಸಿತ ಸಂಭವಿಸಿದೆ. ಈ ವರ್ಷ ಅವರ ಸರಾಸರಿ 22.72 ಮಾತ್ರ. ಯಶಸ್ವಿ ಜೈಸ್ವಾಲ್ ಭಾರತದ ಪರ ಟಾಪ್ 5 ರೊಳಗೆ ಇರುವ ಏಕೈಕ ಆಟಗಾರರಾಗಿದ್ದಾರೆ. ವಿರಾಟ್ ಕೊಹ್ಲಿ ಪ್ರಸ್ತುತ ಕ್ರಿಕೆಟ್ ಲೋಕದ ರನ್ ಸಾಮ್ರಾಟ ಎನ್ನುವುದನ್ನು ಹೊಸದಾಗಿ ಹೇಳಬೇಕಿಲ್ಲ. ಆದರೆ ವಿರಾಟ್ ಕೊಹ್ಲಿ ಕಳೆದ ಎರಡು ಟೆಸ್ಟ್ ಸರಣಿಗಳಲ್ಲಿ ದಯನೀಯವಾಗಿ ವಿಫಲರಾಗಿದ್ದಾರೆ. ಬಾಂಗ್ಲಾದೇಶ ಮತ್ತು ನಂತರ ನ್ಯೂಜಿಲೆಂಡ್ ವಿರುದ್ಧ ವಿರಾಟ್ ಅವರ ಬ್ಯಾಟ್ ಭಾಗಶಃ ಮೌನವಾಗಿತ್ತು.

ಇದೀಗ ಅದರ ಪರಿಣಾಮವನ್ನು ಕೊಹ್ಲಿ, ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಎದುರಿಸಬೇಕಾಗಿದೆ. ವಾಸ್ತವವಾಗಿ ಐಸಿಸಿ, ನೂತನ ಟೆಸ್ಟ್ ಶ್ರೇಯಾಂಕಗಳನ್ನು ಪ್ರಕಟಿಸಿದೆ. ಇದರಲ್ಲಿ ವಿರಾಟ್ ಕೊಹ್ಲಿ ಟಾಪ್ 10 ರಿಂದ ಅಲ್ಲ, ಟಾಪ್ 20 ರಿಂದಲೇ ಹೊರಗುಳಿದಿದ್ದಾರೆ. ಈ ಮೂಲಕ ಬರೋಬ್ಬರಿ 10 ವರ್ಷಗಳ ಸುದೀರ್ಘ ಸಮಯದ ನಂತರ ವಿರಾಟ್ ಕೊಹ್ಲಿ ತಮ್ಮ ವೃತ್ತಿಜೀವನದಲ್ಲಿ ಇಂತಹ ಕೆಟ್ಟ ದಿನವನ್ನು ಎದುರಿಸಬೇಕಾಗಿ ಬಂದಿದೆ. ಐಸಿಸಿ ಇಂದು ಬಿಡುಗಡೆ ಮಾಡಿರುವ ಟೆಸ್ಟ್ ಬ್ಯಾಟ್ಸ್‌ಮನ್‌ಗಳ ಶ್ರೇಯಾಂಕದಲ್ಲಿ ವಿರಾಟ್ ಕೊಹ್ಲಿ 22 ನೇ ಸ್ಥಾನಕ್ಕೆ ಕುಸಿದಿದ್ದಾರೆ. ಇದಕ್ಕೂ ಮುನ್ನ ಕೊಹ್ಲಿ, 2014 ರಲ್ಲಿ ಅಂದರೆ 10 ವರ್ಷಗಳ ಹಿಂದೆ ಐಸಿಸಿ ಟೆಸ್ಟ್ ರ‍್ಯಾಂಕಿನಲ್ಲಿ ಟಾಪ್ 20 ರಿಂದ ಹೊರಬಿದ್ದಿದ್ದರು. ಅಂದಿನ ಇಂಗ್ಲೆಂಡ್ ಪ್ರವಾಸದಲ್ಲಿ ಕಳಪೆ ಪ್ರದರ್ಶನ ನೀಡಿದ್ದ ಕೊಹ್ಲಿಗೆ ಐಸಿಸಿ ಈ ರೀತಿಯ ಶಾಕ್ ನೀಡಿತ್ತು.

ವಿರಾಟ್ ಕೊಹ್ಲಿ ಈ ವರ್ಷ 6 ಟೆಸ್ಟ್ ಪಂದ್ಯಗಳನ್ನಾಡಿದ್ದು, 22.72ರ ಸರಾಸರಿಯಲ್ಲಿ 250 ರನ್ ಗಳಿಸಲಷ್ಟೇ ಶಕ್ತರಾಗಿದ್ದಾರೆ. ಅವರ ಬ್ಯಾಟ್‌ನಿಂದ ಕೇವಲ ಒಂದು ಅರ್ಧಶತಕ ಮಾತ್ರ ಬಂದಿದೆ. ಇದಕ್ಕೆ ಹೋಲಿಸಿದರೆ ಕಳೆದ ವರ್ಷ ವಿರಾಟ್‌ಗೆ ಉತ್ತಮವಾಗಿತ್ತು. ಅವರು ಆಡಿದ 8 ಟೆಸ್ಟ್‌ಗಳಲ್ಲಿ 671 ರನ್ ಗಳಿಸುವಲ್ಲಿ ಯಶಸ್ವಿಯಾಗಿದ್ದರು. ಆದರೆ 2020 ರಿಂದ 2022 ರವರೆಗೆ ಕೊಹ್ಲಿ ಫಾರ್ಮ್ ತುಂಬಾ ಕೆಟ್ಟದಾಗಿತ್ತು. 2020 ರಲ್ಲಿ ವಿರಾಟ್ ಅವರ ಟೆಸ್ಟ್ ಸರಾಸರಿ 19.33 ಆಗಿದ್ದರೆ, 2021 ರಲ್ಲಿ 28.21, 2022 ರಲ್ಲಿ 26.50 ಸರಾಸರಿಯಲ್ಲಿ ರನ್ ಗಳಿಸಿದ್ದರು. ಅಂದರೆ ಕಳೆದ ಐದು ವರ್ಷಗಳಲ್ಲಿ ನಾಲ್ಕು ಬಾರಿ ವಿರಾಟ್ ಅವರ ಬ್ಯಾಟಿಂಗ್ ಸರಾಸರಿ 30ಕ್ಕಿಂತ ಕಡಿಮೆ ಇರುವುದು ನಿಜಕ್ಕೂ ಕಳವಳಕಾರಿ ಸಂಗತಿ. ಉಳಿದಂತೆ ಯಶಸ್ವಿ ಜೈಸ್ವಾಲ್ ಐಸಿಸಿ ಟೆಸ್ಟ್ ಶ್ರೇಯಾಂಕದಲ್ಲಿ ಭಾರತದ ಪರ ಟಾಪ್ 5 ರೊಳಗಿರುವ ಏಕೈಕ ಬ್ಯಾಟ್ಸ್‌ಮನ್ ಆಗಿದ್ದಾರೆ. ಜೈಸ್ವಾಲ್ ಪ್ರಸ್ತುತ 4 ನೇ ಸ್ಥಾನದಲ್ಲಿದ್ದಾರೆ. ರಿಷಬ್ ಪಂತ್ ಆರನೇ ಸ್ಥಾನದಲ್ಲಿದ್ದರೆ, ಶುಭ್‌ಮನ್ ಗಿಲ್ 16ನೇ ಸ್ಥಾನದಲ್ಲಿದ್ದಾರೆ. ವಿರಾಟ್ ಕೊಹ್ಲಿ 22ನೇ ಸ್ಥಾನದಲ್ಲಿದ್ದರೆ, ರೋಹಿತ್ ಶರ್ಮಾ 26ನೇ ಸ್ಥಾನಕ್ಕೆ ಕುಸಿದಿದ್ದಾರೆ.




Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966